ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 10

ಮಾರ್ಚ್ 09, 2008

ಕನ್ನಡ ವಾರಪತ್ರಿಕೆ

ರೂ. 5/-



ಬಜೆಟ್ :
ಹತ್ತರಲ್ಲೊಂದೇ ಕನಸು ನನಸು

ಸ್ಟೇಷನ್ ತಲುಪದ ರೈಲು....



ಕರ್ನಾಟಕ :
ಚುನಾವಣೆಗಳು ಎಂದು ?

ಆಸಿಡ್ ಧಾಳಿ :
ಕಾನೂನು ಕನಸಿನ ಗಂಟೆ?





ಬಿ.ಸಿ. ರೋಡ್ :
ಯುವಕನ ಕೊಲೆಯಲ್ಲಿ ಭಜರಂಗದಳದ ಕೈ?



ಕರ್ನಾಟಕದಲ್ಲಿ ದಲಿತರ ಸ್ಥಾನವೆಲ್ಲಿ ?



ಗುಜರಾತ್ 5 ವರ್ಷಗಳ ಬಳಿಕ



ರಾಜಕೀಯ : ದೂಷಣೆ ಅಪಹಾಸ್ಯ ಪರಿಹಾರವೇ?



ಅಂಗನವಾಡಿಗಳ ಸಾರ್ವತ್ರಿಕರಣ, ವಿಸ್ತರಣೆ, ನೌಕರರಿಗೆ ಪರಿಹಾರವನ್ನು ನಿರೀಕ್ಷಿಸಿದ್ದ ಬಜೆಟ್ ತೀರಾ ನಿರಾಸೆಯನ್ನೇ ಉಂಟುಮಾಡಿದೆ. ಅಂಗನವಾಡಿ ನೌಕರರು ಚಳುವಳಿ ತೀವ್ರಗೊಳಿಸಲು ನಿರ್ಧರಿಸಿದ್ದಾರೆ.

ಪಾರ್ಲಿಮೆಂಟಿನೆದುರು ದೌಡಾಯಿಸಿದ ಅಂಗನವಾಡಿ ನೌಕರರ ಮಹಾಪೂರ

ಅಹವಾಲು ಆಲಿಸಲು ಬಾರದ ಪ್ರಧಾನಮಂತ್ರಿ

ಸಮಗ್ರೀಕೃತ ಬಾಲ ವಿಕಾಸ ಯೋಜನೆ(ಐಸಿಡಿಎಸ್) ದೇಶದ ಭವಿಷ್ಯದ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಒಂದು ಫಲದಾಯಕ ಯೋಜನೆ. ಐಸಿಡಿಎಸ್‌ನ 32 ವರ್ಷದ ಇತಿಹಾಸದಲ್ಲಿ ಬಡ ಮಕ್ಕಳು, ತಾಯಂದಿರುಗಳಲ್ಲಿ ಕೋಟ್ಯಾಂತರ ಜನರು ಫಲಾನುಭವಿಗಳಾಗಿದ್ದಾರೆ. ಆದರೆ ದೇಶದ ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದರೆ ಐಸಿಡಿಎಸ್‌ನ ಫಲಾನುಭವಿಗಳಾಗಲು ಅರ್ಹರಾದ 16 ಕೋಟಿ ಮಕ್ಕಳಲ್ಲಿ ಕೇವಲ ಐದೂವರೆ ಕೋಟಿ ಮಕ್ಕಳಿಗೆ ಮಾತ್ರವೇ ಈ ಯೋಜನೆ ತಲುಪುತ್ತಿದೆ. ಇನ್ನುಳಿದ ಮಕ್ಕಳಿಗೆ ಮತ್ತು ತಾಯಂದಿರಿಗೆ ತಲುಪುವಂತಾಗಲು ಐಸಿಡಿಎಸ್‌ನ ಸಾರ್ವತ್ರಿಕರಣ ಒಂದೇ ಮದ್ದು.

ಮಹತ್ವದ ಸೇವೆ

ತಮಗೆ ಒದಗಿಸಿದ ಸೀಮಿತ ಸಂಪನ್ಮೂಲಗಳು ಮತ್ತು ಮೂಲಸೌಕರ್ಯದ ಕೊರತೆಯ ನಡುವೆಯೂ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕರಿಯರು ದೇಶ ಮೆಚ್ಚುವ ಕೆಲಸ ಮಾಡುತ್ತಿದ್ದಾರೆ. ತಾವು ಕೆಲಸ ಮಾಡುವ ಪ್ರದೇಶಗಳಲ್ಲಿ ಶಿಶುಮರಣ ಮತ್ತು ತಾಯಂದಿರ ಮರಣ ಪ್ರಮಾಣದಲ್ಲಿ ಕಡಿತಗೊಳಿಸಲು ಸಾಧ್ಯವಾಗಿದೆ. ಶಿಕ್ಷಣದ ಮೊದಲ ಮೆಟ್ಟಿಲು ಕೂಡ ದಾಟಿಸಲು, ಶಾಲಾ ಹಾಜರಾತಿ ಹೆಚ್ಚಿಸಲು ಸಾಧ್ಯವಾಗಿದೆ. ಮಾನ್ಯ ಸುಪ್ರೀಂಕೋರ್ಟ್ ಗುರಿ ನಿಗದಿಪಡಿಸಿದಂತೆ 2008ರೊಳಗೆ ಪ್ರತಿಯೊಂದು ವಾಸ ಸ್ಥಳದಲ್ಲಿ ಅಂಗನವಾಡಿ ಕೇಂದ್ರ ತೆರೆದಾಗ ಮಾತ್ರ ಭಾರತದ ಭವಿಷ್ಯದ ನಾಗರೀಕರಾದ ಮಕ್ಕಳ ಹಕ್ಕು ರಕ್ಷಿಸಲು ಸಾಧ್ಯ. ಅಂತೆಯೇ ಇದರಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ಅಂಗನವಾಡಿ ನೌಕರರ ಬದುಕಿನ ಬಗ್ಗೆಯೂ ಚಿಂತಿಸಬೇಕಿದೆ.

ತಮ್ಮ ಜೀವನದ ಸಂಧ್ಯಾ ಸಮಯಕ್ಕೆ ಸರಿಯುತ್ತಿರುವ ಲಕ್ಷಾಂತರ ಮಹಿಳೆಯರನ್ನು ಅಂಗನವಾಡಿ ಕೆಲಸದಿಂದ ತೆಗೆಯಲಾಗುತ್ತಿದೆ. 32 ವರ್ಷಗಳ ಸಾರ್ಥಕ ಸೇವೆಗೆ ಸರ್ಕಾರದ ಸಾರ್ಥಕ ಕೊಡುಗೆ ಏನೆಂದರೆ 'ಬರಿಗೈಲಿ ಮನೆಗೆ ನಡೆಯಿರಿ' ಎಂಬ ಮೆಮೋ. ಇಲಾಖೆ ಮತ್ತು ಇಲಾಖೆಗೆ ಸಂಬಂಧವಿಲ್ಲದ ಕೆಲಸಗಳ ಹೊರೆ ತಲೆಮೇಲೆ ಬಿದ್ದರೂ ಬಾಯಿ ಬಿಡುವಂತಿಲ್ಲ. ಕಳೆದ 6 ವರ್ಷಗಳಿಂದ ಕೇಂದ್ರ ಸರ್ಕಾರ ತನ್ನ ಯೋಜನೆಯ ಜೀವಾಳಗಳಾದ ಈ ಬಡ ಮಹಿಳೆಯರಿಗೆ ಕಿಂಚಿತ್ತು ಗೌರವಧನ ಏರಿಸಿಲ್ಲ. ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಮಾಡಿದ ಕೇಂದ್ರದ ಯಾವುದೇ ಸರ್ಕಾರಗಳೂ ಅದೇ ಸಂವಿಧಾನ ಹೇಳುವ "ಬದುಕುಳಿಯಲು ಬೇಕಾದ ಕನಿಷ್ಟ ಕೂಲಿ" ಜಾರಿ ಮಾಡಿಲ್ಲ. ಅದಕ್ಕೆ ಬದಲಾಗಿ ಒಪ್ಪತ್ತಿನ ಗಂಜಿಯೂಟವೂ ಸಿಗದಂತೆ ಬೆಲೆ ಏರಿಕೆ ಮಾಡಿದೆ, ಅಭದ್ರತೆಯ ವಾತಾವರಣಕ್ಕೆ ನೂಕಿದೆ.

ಪಾರ್ಲಿಮೆಂಟ್ ಚಲೋ

ಹಾಗಾಗಿಯೇ, ದೇಶಾದ್ಯಂತ, ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಷನ್ (ಎಐಎಫ್‌ಎಡಬ್ಲ್ಯೂಹೆಚ್) ಸಿಐಟಿಯು ನೇತೃತ್ವದಲ್ಲಿ ಐಸಿಡಿಎಸ್‌ನ ಸಾರ್ವತ್ರಿಕರಣಕ್ಕೆ ಐಸಿಡಿಎಸ್‌ನ್ನು ಖಾಯಂ ಇಲಾಖೆಯಾಗಿಸಲು, ಅಂಗನವಾಡಿ ನೌಕರರನ್ನು ಕ್ರಮವಾಗಿ 3ನೇ, 4ನೇ ದರ್ಜೆಯಲ್ಲಿ ಸರ್ಕಾರಿ ನೌಕರರನ್ನಾಗಿಸಲು, ಭವಿಷ್ಯನಿಧಿ, ವಿಮಾ ಸೌಲಭ್ಯ, ನಿವೃತ್ತರಾಗುವವರಿಗೆ ವಿಶ್ವ ಶ್ರೇಣಿಯ ಹಣ ನೀಡಲು ಮತ್ತು ಗ್ರಾಹಕ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿ ಈಗಿನ ಕೆಲಸಕ್ಕೆ ಕ್ರಮವಾಗಿ 3000 ರೂ. 2000ರೂ. ನೀಡಬೇಕೆಂದು ಆಗ್ರಹಿಸಿ ಪ್ರಧಾನಮಂತ್ರಿಗೆ ಸಾರ್ವಜನಿಕರಿಂದ 4 ಕೋಟಿ ಸಹಿ ಸಂಗ್ರಹಣೆ ಮಾಡಿ'ಪಾರ್ಲಿಮೆಂಟ್ ಚಲೋ'ಗೆ ಫೆಬ್ರವರಿ 18ರಂದು ಧಾವಿಸಿತು. 2006ರ ಆಗಸ್ಟ್ ರಂದು ಪ್ರಧಾನ ಮಂತ್ರಿಗಳು ನೀಡಿದ ಭರವಸೆಯನ್ನು ಜಾರಿಗೊಳಿಸಲು ನೆನಪಿಸಿತು. ಹತ್ತು ಸಾವಿರಕ್ಕೂ ಅಧಿಕ ಅಂಗನವಾಡಿ ನೌಕರರು ಕೆಂಪು ಸಮವಸ್ತ್ರದೊಡನೆ ಸಾಮೂಹಿಕ ನಿಯೋಗವು ಪ್ರಧಾನಿಗಳಲ್ಲಿಗೆ ತೆರಳಿದರು. ಆದರೆ ಅಲ್ಲಿ ಅಹವಾಲು ಆಲಿಸಲು ಪ್ರಧಾನ ಮಂತ್ರಿಗಳು ಬರದೇ ಇದ್ದುದನ್ನು ನೋಡಿದ ಜನಸಮೂಹ ಆಕ್ರೋಶಗೊಂಡು "ಕೇಂದ್ರ ಸರ್ಕಾರದ ಭೂತದಹನ ಮಾಡಿತು.



ದೆಹಲಿಯ ಕೊರೆಯುವ ಚಳಿಯನ್ನು ಲೆಕ್ಕಿಸದೇ ದೇಶದ 23 ರಾಜ್ಯಗಳಿಂದ ಆಗಮಿಸಿದ ಅಂಗನವಾಡಿ ತಾಯಂದಿರು ಬೆಳಿಗ್ಗೆ ನಸುಕಿನಲ್ಲೇ ರಾಮಲೀಲಾ ಮೈದಾನವನ್ನು ಕೆಂಪಾಗಿಸಿದರು. ನಂತರ ನಡೆದ ಶಿಸ್ತುಬದ್ಧ ಮೆರವಣಿಗೆಯು ದೇಶದ ವೈವಿಧ್ಯಮಯ ಭಾಷೆ/ಆವರ ಘೋಷಣೆಯೊಂದಿಗೆ ಜಂತರ್ ಮಂತರ್ ತಲುಪಿತು. ನಾಲ್ಕು ಸಮಾನಾಂತರ ಪೋಲೀಸ್ ಬೇಲಿ ಎದುರು ನೂರಾರು ಪೋಲೀಸರು ಮೆರವಣಿಗೆಯನ್ನು ತಡೆದರು. ಅಲ್ಲೇ ಬಹಿರಂಗ ಸಭೆಯನ್ನುದ್ದೇಶಿಸಿ ಸಂಘಟನೆಯ ರಾಷ್ಟ್ರ ಸಮಿತಿ ಅಧ್ಯಕ್ಷೆ ಕಾಂ: ನೀಲಿಮಾ ಮೈತ್ರ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ: ಎಂ.ಸಿ. ಮಹಮ್ಮದ್ ಅಮೀನ್, ಸಿಐಟಿಯು ಅಖಿಲ ಭಾರತ ಮುಖಂಡರುಗಳಾದ ಕಾಂ: ತಪನ್ ಸೇನ್, ಕಾಂ: ದೀಪಾಂಕರ ಮುಖರ್ಜಿ, ರಾಜ್ಯ ಸಭಾ ಸದಸ್ಯೆ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಕಾಂ:ಬೃಂದಾ ಕಾರಟ್, ಎಂ.ಪಿ.ಗಳಾದ ಕಾಂ:ರಾಧಾಕೃಷ್ಣನ್, ಕಾಂ. ಸತ್ಯವತಿ, ಸಂಘಟನೆಯ ಪ್ರಧಾನ ಕಾರ್ಯದರ್ಶಿ ಡಾ: ಹೇಮಲತಾ, ಕಾಂ: ಸಿಂಧು ಇನ್ನು ಮುಂತಾದವರು ಸ್ಫೂರ್ತಿದಾಯಕ ಮಾತನಾಡಿದರು. ಈ ವರ್ಷದ ಬಜೆಟ್‌ನಲ್ಲಿ ಹೆಚ್ಚು ಹಣ ಮೀಸಲಿಡಲು ಕೇಂದ್ರ ಸರ್ಕಾರ ಮುಂದಾಗದಿದ್ದಲ್ಲಿ ಮಾರ್ಚ್ 1 ರಂದು ದೇಶಾದ್ಯಂತ ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ಕೇಂದ್ರ ಸರ್ಕಾರದ ಭೂತದಹನ ಮಾಡುವ ಎಚ್ಚರಿಕೆ ನೀಡಲಾಯಿತು.

ಪಾರ್ಲಿಮೆಂಟ್ ಚಲೋದಲ್ಲಿ ಕರ್ನಾಟಕದಿಂದಲೂ ನೂರಾರು ಅಂಗನವಾಡಿ ನೌಕರರು ಪಾಲ್ಗೊಂಡಿದ್ದರು.

■ ಯಮುನಾ ಗಾಂವ್ಕಾರ

ಬರಲಿವೆ ಭಯಂಕರ ಬದಲಾವಣೆಗಳು !

ಎಚ್ಚರ! ಐಸಿಡಿಎಸ್‌ನಲ್ಲಿ ಬರಲಿವೆ ಭಯಂಕರ ಬದಲಾವಣೆಗಳು! ಐಸಿಡಿಎಸ್‌ನಲ್ಲಿ ಸುಧಾರಣಾ ಯೋಜನೆ-4 ಎಂಬ ಹೆಸರಿನಲ್ಲಿ ಪೆಡಂಭೂತ ವಿಶ್ವ ಬ್ಯಾಂಕ್ ತನ್ನ 4ನೇ ವರದಿಯನ್ನು ನೀಡಿದೆ. ಅದರ ಜಾರಿಗೆ ನಮ್ಮ ದೊರೆ ಮನಮೋಹನ್‌ಸಿಂಗ್ ಸರ್ಕಾರ ತುದಿಗಾಲ ಮೇಲೆ ನಿಂತಿದೆ.

ವರದಿಯ ಶಿಫಾರಸ್ಸು ಏನು? ಐಸಿಡಿಎಸ್ ಭಾರತದಲ್ಲಿ ಸರಿಯಾಗಿ ಜಾರಿಯಾಗುತ್ತಿಲ್ಲ. ಎಲ್ಲ ಮಕ್ಕಳಿಗೆ, ತಾಯಂದರಿಗೆ ತಲುಪುತ್ತಿಲ್ಲವಂತೆ. ಅಂಗನವಾಡಿ ಕೇಂದ್ರದಲ್ಲಿ ಶಾಲಾ ಪೂರ್ವ ಶಿಕ್ಷಣ ನೀಡುವುದು, ಪೌಷ್ಠಿಕ ಆಹಾರ ತಯಾರಿಸುವುದು ಏಕಕಾಲಕ್ಕೆ ಸಾಧ್ಯವಿಲ್ಲವಂತೆ. ಹಾಗಾಗಿ ಪೌಷ್ಠಿಕ ಆಹಾರ ತಯಾರಿಸುವುದನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ, ಸ್ತ್ರೀಶಕ್ತಿ ಗುಂಪು/ಸ್ವಸಹಾಯ ಗುಂಪುಗಳಿಗೆ ವಹಿಸಬೇಕೆಂತೆ, ಗೌರವಧನವನ್ನು ಸರ್ಕಾರ ಕೊಡಬಾರದಂತೆ. ಸ್ಥಳೀಯವಾಗಿ ಸಂಪನ್ಮೂಲ ಕ್ರೋಢೀಕರಿಸಬೇಕಂತೆ. ಅದರ ಮೂಲಕ ಅಂಗನವಾಡಿ ಕೇಂದ್ರ ನಡೆಸುವುದಿಲ್ಲ ಗೌರವಧನ ಪಡೆಯುವುದು ಮಾಡಬೇಕಂತೆ. ಇದರ ನಿರ್ವಹಣೆಗೆ 'ತಾಯಂದಿರ ಸಮಿತಿ'ಗೆ ವಹಿಸಬೇಕಂತೆ!



ಐಸಿಡಿಎಸ್‌ನಲ್ಲಿ ಜನ ಸಮುದಾಯವನ್ನು ಪಾಲ್ಗೊಳಿಸುವ ಹೆಸರಿನಲ್ಲಿ ಒಂದೊಂದು ಪ್ರಾಜೆಕ್ಟ್‌ನ್ನೇ "ದತ್ತಕ" ಕೊಡಬೇಕಂತೆ. ಯಾರಿಗೆ? ಕಾರ್ಪೋರೇಟ್ ಹೌಸ್‌ಗಳಿಗೆ ! ಇದರ ನಿರ್ವಹಣೆಯಲ್ಲಿ ಖಾಸಗಿಯವರನ್ನು ಒಳಗೊಳಿಸಬೇಕಂತೆ. ಅದಕ್ಕೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ" Public Private Partnership - PPP ಕ್ಕೆ ಬಿಟ್ಟು ಬಿಡುಬೇಕಂತೆ. ಐಸಿಡಿಎಸ್‌ನ್ನು ಪರಿಣಾಮಕಾರಿಯಾಗಿ ಜಾರಿ ಗೊಳಿಸಲಿಕ್ಕೆ ಎನ್‌ಜಿಓ ಗಳಿಗೆ ವಹಿಸುವುದು ಒಳ್ಳೆಯದಂತೆ! ಹೇಗಿದೆ ವಿಶ್ವ ಬ್ಯಾಂಕ್ ಹೇಳಿದ ಸುಧಾರಣೆಗಳು! ಜಾಗತಿಕ ದೊರೆಗಳ ಹದ್ದಿನ ಕಣ್ಣಿನ ಕರಾಮತ್ತು! ಇದೀಗ ಐಸಿಡಿಎಸ್‌ನ್ನು, ಅದರಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ ನೌಕರರನ್ನು (ಜೀವಚ್ಛವವಾಗಿಸಲು) ಸಜೀವ ಶವವಾಗಿಸಲು ಭಯಂಕರ ಬದಲಾವಣೆಗಳು ಬರುತ್ತಿವೆ. ಕೇಂದ್ರ ಮಂತ್ರಿಗಳು ವಿಶ್ವ ಬ್ಯಾಂಕ್ ಪ್ರಸ್ತಾಪಕ್ಕೆ ಓ.ಕೆ. ಎಂದಿದ್ದಾರೆ ಮತ್ತು ಕಾರ್ಪೋರೇಟ್ ಹೌಸ್‌ಗಳನ್ನು ಆಹ್ವಾನಿಸಿದ್ದಾರೆ. ದೇಶದ ಹಲವಾರು ರಾಜ್ಯಗಳಲ್ಲಿ ಈ ನೀತಿಯ ಪರಿಣಾಮ ವ್ಯತಿರಿಕ್ತವಾಗಿದೆ. ಜೀವ ಹಿಂಡುವ ಈ ನೀತಿ ವಿರುದ್ಧ ಸಿಐಟಿಯು ಬೃಹತ್ ಹೋರಾಟ ರೂಪಿಸಿದೆ. ಬನ್ನಿ, ನೀವೂ ಕೂಡ ಐಸಿಡಿಎಸ್ ರಕ್ಷಿಸಲು, ಮಕ್ಕಳ ಭವಿಷ್ಯ ಉಳಿಸಲು ಮುಂದಾಗಿ.

ಸಂಪಾದಕೀಯ

‘ಅಂಗನವಾಡಿ ಅಕ್ಕಂದಿರ’ ವಜಾ

ಸರ್ಕಾರ ಎಸಗಿದ ತಪ್ಪಿಗೆ ‘ಅಂಗನವಾಡಿ ಅಕ್ಕಂದಿರ’ ಮೇಲೆ ನ್ಯಾಯಾಲಯ ಗದಾಪ್ರಹಾರ ನಡೆಸಿದೆ. ನ್ಯಾಯ ಹೇಗಿರಬೇಕಿತ್ತು?

ಸುಮಾರು 7500 ‘ಅಂಗನವಾಡಿ ಅಕ್ಕಂದಿರ’ ನೇಮಕಾತಿಯನ್ನು ರದ್ದು ಮಾಡಿದ ಉಚ್ಚ ನ್ಯಾಯಾಲಯದ ಆದೇಶ ಆಘಾತಕಾರಿಯಾಗಿದೆ. ‘ತಪ್ಪು ಎಸಗಿದವರು ಯಾರೋ, ಆದರೆ ಶಿಕ್ಷೆ ವಿಧಿಸುವುದು ಇನ್ಯಾರಿಗೋ’ ಎಂಬಂತಿದೆ ನ್ಯಾಯಾಲಯದ ತೀರ್ಪು. ತಮ್ಮದಲ್ಲದ ತಪ್ಪಿಗೆ ಈ ಕಾರ್ಯಕರ್ತೆಯರ ಬಲಿ ಅಸಮರ್ಥನೀಯ. ‘ಒಬ್ಬ ಅಪರಾಧಿ ತಪ್ಪಿಸಿಕೊಂಡರೂ, ನಿರಪರಾಧಿಗೆ ಮಾತ್ರ ಶಿಕ್ಷೆಯಾಗಬಾರದು’ ಎಂಬ ನ್ಯಾಯಾಲಯದ ಘೋಷಿತ ‘ಉದಾತ್ತ’ ಉದ್ದೇಶಕ್ಕೆ ಇಂತಹ ತೀರ್ಪುಗಳು ವ್ಯತಿರಿಕ್ತವಾಗುತ್ತವೆ.

ಅಂಗನವಾಡಿ ಯೋಜನೆಯು ಸಮಗ್ರ ಶಿಶು ಕಲ್ಯಾಣ ಯೋಜನೆ (ಐಸಿಡಿಎಸ್)ಯ ಅಡಿಯಲ್ಲಿ ಬರುವ ಯೋಜನೆಯಾಗಿದೆ. ಅದರಂತೆ ಕೇಂದ್ರ ಸರ್ಕಾರದತ್ತ ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ತಾಲ್ಲೂಕು, ಜಿಲ್ಲಾ ಮಟ್ಟದ ಆಡಳಿತ ಸಮಿತಿಗಳಿಗೆ ನೀಡಿ, 2006 ಮೇ 28 ರಂದು ನಿರ್ದೇಶನ ಕೊಟ್ಟಿತ್ತು. ಇಲ್ಲಿ ಶಾಸಕರ ಹಸ್ತಕ್ಷೇಪ ಅಥವಾ ಉಸ್ತುವಾರಿಯಲ್ಲಿ ನೇಮಕ ಆಗಬೇಕಿಲ್ಲ. ಶಾಸಕರನ್ನು ಹೊರಗಿಟ್ಟು ನೇಮಕಾತಿ ನಡೆಸಬೇಕು ಎಂಬುದನ್ನು ತಿಳಿಸಿತ್ತು. ಆದರೆ ಇದನ್ನು ಅಲಕ್ಷಿಸಿದ ಸರ್ಕಾರದ ಕ್ರಮ ತಪ್ಪಾಗಿದೆ. ಮಾತ್ರವಲ್ಲ ಅದು ದುರುದ್ದೇಶದಿಂದಲೇ ಕೂಡಿದ್ದು ಆಗಿದೆ.

ಆ ನಿರ್ದೇಶನದಂತೆ ನೇಮಕಾತಿ ಪ್ರಕ್ರಿಯೆ ನಡೆದರೆ ಆಡಳಿತ ವಿಕೇಂದ್ರೀಕರಣವನ್ನು, ಕಾರ್ಯಾಂಗದ ಕಾರ್ಯ ನಿರ್ವಹಣೆಯನ್ನು ಸ್ವಲ್ಪವಾದರೂ ನಿಭಾಯಿಸಿದಂತಾಗುತ್ತಿತ್ತು. ಆದರೆ ಕೇಂದ್ರ ಸರ್ಕಾರದ ಈ ಸ್ಪಷ್ಟ ನಿರ್ದೇಶನವನ್ನು ಉಲ್ಲಂಘಿಸಲಾಗಿದೆ ಎಂಬ ನ್ಯಾಯಾಲಯದ ಅವಲೋಕನ ಸರಿಯಾಗಿದೆ.

ಕೇಂದ್ರದ ನಿರ್ದೇಶನವನ್ನು ನಿರ್ಲಕ್ಷಿಸಿದ ರಾಜ್ಯ ಸರ್ಕಾರವು ಶಾಸಕರ ಅಧ್ಯಕ್ಷತೆಯಲ್ಲಿಯೇ ಆಯ್ಕೆ ಮಾಡಿದ್ದು ತಪ್ಪು ಕ್ರಮ. ಇಲ್ಲಿ ಅರ್ಹರಿಗೆ ಅವಕಾಶವನ್ನು ವಂಚಿಸಲಾಗಿದೆ, ಪಕ್ಷಪಾತ, ಭ್ರಷ್ಟಾಚಾರವೂ ನಡೆದಿದೆ ಎಂಬ ದೂರುಗಳು ಬಂದಿವೆ. ಮುಖ್ಯವಾಗಿ ಇಂತಹ ನೇಮಕಾತಿ ಪ್ರಕ್ರಿಯೆ ನಡೆದಾಗ ಹಾಗೂ ನಂತರ ಒಂದೆರೆಡು ಜಿಲ್ಲೆಗಳಲ್ಲಿ ಇಂತಹ ಪ್ರಕರಣ ನ್ಯಾಯಾಲಯಕ್ಕೆ ಹೋದಾಗ ಅದಕ್ಕೆ ತಡೆಯಾಜ್ಞೆಯನ್ನು ನ್ಯಾಯಾಲಯ ನೀಡಿತ್ತು. ಆದಾಗ್ಯೂ ಇದನ್ನು ನಿರ್ಲಕ್ಷಿಸಿ ಮುಂದೆ ಹೋದ ಹೊಣೆ ರಾಜ್ಯ ಸರ್ಕಾರದ ಮೇಲಿದೆ. ಅಧಿಕಾರಶಾಹಿಯ ಪಾಲೂ ಇದೆ. ಕೇಂದ್ರದ ನಿರ್ದೇಶನ ವಿರೋಧಿಸಿದ ಹಾಗೂ ಅಧಿಕಾರದ ದುರುಪಯೋಗ ನಡೆದಿರುವಾಗ ಆ ಅವಧಿಯಲ್ಲಿ ಜೆಡಿ(ಎಸ್)-ಬಿಜೆಪಿ ಪಕ್ಷಗಳ ‘ಮೈತ್ರಿ’ ಸರ್ಕಾರವಿತ್ತು ಎಂಬುದು ಗಮನಾರ್ಹ.

ಆದ್ದರಿಂದಲೇ ಕೇಂದ್ರ ಸರ್ಕಾರದ ಹಾಗೂ ನ್ಯಾಯಾಲಯದ ನಿರ್ದೇಶನವನ್ನು ಉಲ್ಲಂಘಿಸಿದ ಸರ್ಕಾರದ ಮೇಲೆ ನ್ಯಾಯಾಲಯವು ತೀಕ್ಷ್ಣವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಇಂತಹ ಚಾಟಿ ಏಟಿನಿಂದ ಮುಂದಾದರೂ ಸ್ವಲ್ಪವಾದರೂ ಆಡಳಿತ ಎಚ್ಚರದಿಂದ ಕಾರ್ಯನಿರ್ವಹಿಸಲು ಸಾಧ್ಯವಾಗಬಹುದಿತ್ತು. ಅದನ್ನು ಬಿಟ್ಟು ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಕ್ರಮ ವಹಿಸಿದ್ದು ವ್ಯವಸ್ಥೆಯಲ್ಲಿನ ರೋಗಕ್ಕೆ ಬರೆ ಹಾಕದೇ, ದುಡಿದುಣ್ಣುವವರಿಗೆ ಬರೆ ಹಾಕಿದ ತಪ್ಪು ಕ್ರಮಗಳು ಸರಿಪಡಿಸುವುದೂ ಇಲ್ಲ, ಬದಲಾಗಿ ಇಂತಹ ಅನೇಕ ಉಲ್ಲಂಘನೆ, ಅಕ್ರಮಗಳನ್ನು ನಡೆಸಿಯೂ ಸರ್ಕಾರ-ಅಧಿಕಾರಸ್ಥರು ಪಾರಾಗಬಹುದು ಎಂಬ ಹಾನಿಕಾರಕ ಸಂದೇಶವನ್ನೇ ರವಾನಿಸುತ್ತದೆ.


ಇಂತಹ ಹಿನ್ನೆಲೆಯಲ್ಲಿ ಈಗಾಗಲೇ ಯೋಜನೆಯಲ್ಲಿ ಕಳೆದ ಒಂದು ವರ್ಷದ ಅವಧಿಗೂ ಮೀರಿ ಸೇವೆ ಸಲ್ಲಿಸಿರುವ ಕಾರ್ಯಕರ್ತೆಯರನ್ನು ಅಲ್ಲೇ ಉಳಿಸಿಕೊಳ್ಳಬೇಕು. ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದರ ಜೊತೆಗೆ ಮುಂದಿನ ದಿನಗಳಲ್ಲಿ ಇಂತಹ ತಪ್ಪು ಘಲಿಸದಂತೆ ಕ್ರಮ ವಹಿಸಬೇಕು.

ಈಗಾಗಲೇ ಈ ಅಂಗನವಾಡಿ ಕಾರ್ಯಕರ್ತೆಯರು ಒಂದು ವರ್ಷಕ್ಕೂ ಮೀರಿ ಕೆಲಸ ನಿರ್ವಹಿಸಿರುವುದರಿಂದ ಈಗಿರುವ ಕಾನೂನಂತೆ 240 ದಿನಗಳ ಕೆಲಸ ಮಾಡಿದರೆ ಅವರನ್ನು ಖಾಯಂ ಆಗಿ ಪರಿಗಣಿಸಬೇಕೆಂಬ ಕಾನೂನನ್ನು ಅನ್ವಯಿಸಿ ಖಾಯಂಗೊಳಿಸಬೇಕು. ಕೇಂದ್ರದ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಸ್ವಲ್ಪ ಹೆಚ್ಚಳ ಮಾಡಲಾಗಿದೆ ಎಂಬುದು ನಿಜವಾದರೂ ಇಷ್ಟೇ ಅವರ ಸಮಸ್ಯೆ ಬಗೆಹರಿಸಲಾರದು. ಅವರನ್ನು ಖಾಯಂ ನೌಕರರರೆಂದು ಅಂಗೀಕರಿಸಬೇಕು.

ಈ ದಿಶೆಯಲ್ಲಿ ಪುನರ್ ಮನವಿ ಅರ್ಜಿ ಸಲ್ಲಿಸಲು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆ ನಿರ್ಧರಿಸಿರುವುದು ಸ್ವಾಗತಾರ್ಹ. ಈ ಹೋರಾಟ ನ್ಯಾಯಾಲಯದಲ್ಲಿ ನಡೆದಿರುವಾಗಲೇ ಅದು ಸಾಕಾರಗೊಳ್ಳುವಂತಾಗಲು ನ್ಯಾಯಕ್ಕಾಗಿ ಬೀದಿ ಬೀದಿಗಳಲ್ಲಿಯೂ ಧ್ವನಿ ಮೊಳಗಬೇಕಾಗಿದೆ.

ಇಂದಿನ ದಿನಗಳಲ್ಲಿ ನ್ಯಾಯಾಲಯಗಳ ತೀರ್ಪುಗಳು ದುಡಿವ ವರ್ಗಗಳ ಹಿತಗಳಿಗೆ ಹಾನಿಯನ್ನು ತರುವ ಹಲವಾರು ತೀರ್ಪುಗಳನ್ನು ನೀಡುತ್ತಿರುವುದು ಹೊಸದೇನಲ್ಲ. ಒಂದೆಡೆ ಉದಾರೀಕರಣ, ಖಾಸಗೀಕರಣದ ಪ್ರಕ್ರಿಯೆ ತೀವ್ರಗೊಳಿಸಿ, ದುಡಿವ ಜನರ ಬದುಕನ್ನು ಭಗ್ನಗೊಳಿಸುತ್ತಾ, ಅತಂತ್ರದ ಸ್ಥಿತಿಯನ್ನೇ ಮುಂದುವರಿಸಿವೆ. ಯಾವುದೇ ಸಾಮಾಜಿಕ, ಆರ್ಥಿಕ, ಉದ್ಯೋಗ ಭದ್ರತೆಯಲ್ಲಿದೇ ಜೀವನ ಹಿಂಡುವ ಧಾಳಿ ನಡದೇ ಇದೆ. ಇವೆಲ್ಲ ಒಂದರೊಳಗೊಂದು ಅಂತರ್ಗತ ಎಂಬುದು ಗುರುತಿಸಿಕೊಂಡರೆ ಹೋರಾಟದ ವಿವಿಧ ಮಗ್ಗಲು, ಅದರ ಅಗಾಧತೆ ಅರ್ಥವಾದೀತು.

ಕರ್ನಾಟಕ ಚುನಾವಣೆ : ಎಂತು ? ಏನು?



ರಾಷ್ಟ್ರಪತಿ ಆಡಳಿತದ ವಿಸ್ತರಣೆ ಅಪೇಕ್ಷಣೀಯವಲ್ಲ, ಅದು ಅಂತ್ಯಗೊಂಡು ಜನರಿಂದ ಆಯ್ಕೆಗೊಂಡ ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರಬೇಕು. ಆದರೆ ಪ್ರಮುಖ ರಾಜಕೀಯ ಪಕ್ಷಗಳು ಮೀನಮೇಷ ಎಣಿಸುತ್ತಿವೆಯೇಕೆ?

ಕರ್ನಾಟಕದ ಚುನಾವಣೆಗಳು ಎಂದಿಗೆ? ಮೇ ಗೋ ಅಥವಾ ನಂತರವೋ ಇದು ಇಂದು ಕೇಳಲಾಗುವ ಸಾಮಾನ್ಯ ಪ್ರಶ್ನೆ. ‘ಮೇನಲ್ಲಿಯೇ ಚುನಾವಣೆ’. ರಾಷ್ಟ್ರಪತಿ ಆಡಳಿತ ಕೊನೆಗೊಳ್ಳುವ ಮೇ 28 ರೊಳಗೆ ಚುನಾವಣೆ ಪ್ರಕ್ರಿಯೆಯೂ ಮುಗಿಸಿ ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರುವಂತೆ ನೋಡಿಕೊಳ್ಳುವುದು ನಮ್ಮ ಹೊಣೆ’ ಎನ್ನುತ್ತಿದೆ ಚುನಾವಣಾ ಆಯೋಗ.

ಮುಂದೇನು?

ಹೌದು! ಮೇ ಕೊನೆಯೊಳಗೆ ರಾಷ್ಟ್ರಪತಿ ಆಡಳಿತದ ಆರು ತಿಂಗಳ ಅವಧಿ ಮುಗಿಯುತ್ತದೆ. ಒಂದೋ ನೂತನ ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರಬೇಕು ಇಲ್ಲವೇ ಮತ್ತೆ ಸಕಾರಣ ತಿಳಿಸಿ ಪಾರ್ಲಿಮೆಂಟ್ ಈ ಅವಧಿಯನ್ನು ವಿಸ್ತರಿಸಬೇಕು...

ಬಹಳಷ್ಟು ಚರ್ಚೆಯಲ್ಲಿದ್ದ ವಿಧಾನ ಸಭಾ ಕ್ಷೇತ್ರಗಳ ಪುನರ್ ವಿಂಗಡನೆಯ ಪ್ರಶ್ನೆ ಇತ್ಯರ್ಥವಾಗಿದೆ. ಸಂಸತ್ತಿನ, ಅಂಗೀಕಾರ-ಅದಕ್ಕೆ ರಾಷ್ಟ್ರಪತಿಗಳ ಅಂಕಿತ ಸಿಕ್ಕಿದೆ. ಹೀಗಾಗಿ ಏನಿದ್ದರೂ ಅವುಗಳ ಆಧಾರದಲ್ಲೇ ಚುನಾವಣೆ ನಡೆಯಬೇಕು. ಪುನರ್ ವಿಂಗಡನೆಗೆ ಅಂಗೀಕಾರ ಸಿಗುವ ಮೊದಲು ಮೇ ಯೊಳಗೆ ಚುನಾವಣೆ ನಡೆಯಲಾಗದ ಬಗ್ಗೆ, ಮತ್ತು ಅದು ಮುಂದೆ ಹೋಗುವ ಬಗ್ಗೆಯೇ ಊಹಾಪೋಹಗಳಿದ್ದವು. ಮೇಲಾಗಿ ಮತದಾರರ ಪಟ್ಟಿಯೊಳಗೆ ಅತ್ಯಂತ ಗಣನೀಯವಾಗಿ ‘ಖೊಟ್ಟಿ’ ಮತದಾರರ ಹೆಸರು ಸೇರಿಕೊಂಡು ಬಿಟ್ಟಿದ್ದವು. ಅದನ್ನು ಸರಿಪಡಿಸುವುದು ಒಂದು ಸವಾಲಿನಂತೆ ತೊಡಕಾಗಿತ್ತು. ಹೊಸ ಕ್ಷೇತ್ರಗಳ ನಕಾಶೆ, ಮತಗಟ್ಟೆಗಳ ಪುನರ್ ರಚನೆ ಇತ್ಯಾದಿ ವ್ಯವಸ್ಥೆಗೆ ಹೆಚ್ಚಿನ ಕಾಲಾವಕಾಶ ಬೇಕಾಗುವ ನಿರೀಕ್ಷೆ ಇತ್ತು. ಅಂದರೆ ಅದೇನಿದ್ದರೂ ನವೆಂಬರ್ ಒಳಗೆ ಮಾತ್ರ ಚುನಾವಣೆಗಳು ಎಂಬ ವಾದಗಳೂ ಇದ್ದವು. ಆದರೀಗ ಚುನಾವಣಾ ಆಯೋಗ ಇವೆಲ್ಲವನ್ನೂ ವ್ಯವಸ್ಥೆಗೊಳಿಸುವುದಾಗಿ ಹೇಳಿದೆ. ಅದಕ್ಕೆಂದೇ ಭಾರತದ ಚುನಾವಣಾ ಆಯುಕ್ತ ಗೋಪಾಲಸ್ವಾಮಿ ಮಾರ್ಚ್4 ಕ್ಕೆ ಭೇಟಿ ನೀಡುವುದೂ ನಿಗದಿಯಾಗಿದೆ.

ಭಿನ್ನ ಪ್ರತಿಪಾದನೆ

ಆದರೆ ಕೆಲವು ಪ್ರಮುಖ ರಾಜಕೀಯ ಪಕ್ಷಗಳಿಗೆ ಚುನಾವಣೆ ಮೇ ಯೊಳಗೆ ನಡೆಯುವುದು ಬೇಕಿಲ್ಲ. ಆಯಾ ಪಕ್ಷಗಳು ಅವರ ಸೋಲು-ಗೆಲುವುಗಳ ಲೆಕ್ಕಾಚಾರ ಅವರವರ ಹಿತಾಸಕ್ತಿಗಳನ್ನೇ ನೊಡುತ್ತಿವೆ. ಬಿಜೆಪಿ ಈಗಲೇ ಚುನಾವಣೆ ನಡೆದು ಬಿಟ್ಟರೇ ತಾನೇ ಬಹುಮತ ಪಡೆದು ಅಧಿಕಾರಕ್ಕೆ ಬರುವ ಹಗಲುಗನಸು ಕಾಣುತ್ತಿದೆ. ಆದರೆ ಅದೂ ಕರಗುತ್ತಿರುವ ಅನುಭವ ಹುಟ್ಟಿ ಸಂಘ ಪರಿವಾರ ಕೋಮುವಾದಿ ಅಜೆಂಡಾದ ಜಾರಿಗೆ ಆ ಬೆಂಕಿ ಆರದಂತೆ ಹತಾಶೆಯಿಂದಲೂ ಯತ್ನಿಸುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ನವೆಂಬರ್ ಹೊತ್ತಿಗೆ ಚುನಾವಣೆ ಆಗುವುದು ಬೇಕಾದಂತಿದೆ. ಅಷ್ಟರೊಳಗೆ ಬಿಜೆಪಿಯ ಅಬ್ಬರವೂ ಕಡಿಮೆಯಾಗಿ ತನ್ನ ಸಂಘಟನಾ ಅಸ್ತವ್ಯಸ್ತತೆ, ನಾಯಕತ್ವದ ಗೊಂದಲಗಳನ್ನು ನಿವಾರಿಸಿಕೊಳ್ಳುವ ಇಚ್ಛೆ ಹೊಂದಿದಂತಿದೆ. ಜೆಡಿ(ಎಸ್) ನಾಯಕರೇನೋ ಈಗಲೇ ಚುನಾವಣೆ ನಡೆಯಬೇಕೆಂದು ಹೊರಗೆಷ್ಟೇ ಹೇಳಿಕೊಂಡರೂ ಮನದೊಳಗಣ ಮಾತು ಬೇರೆಯೇ ಇರುವಂತಿದೆ... ಇವುಗಳಿಗೆ ಭಿನ್ನವಾಗಿ ಸಾಮಾಜಿಕ ನ್ಯಾಯ ವಿಸ್ತರಿಸುವ, ಪುನರ್ ವಿಂಗಡಿತ ಕ್ಷೇತ್ರಗಳ ಆಧಾರದಲ್ಲಿ ಆದಷ್ಟು ಬೇಗ ಚುನಾವಣೆ ನಡೆದು ಚುನಾಯಿತ ಸರ್ಕಾರ ಬರಬೇಕೆಂದು ಸಿಪಿಐ(ಎಂ) ಪ್ರತಿಪಾದಿಸಿದೆ.


ಅಪೇಕ್ಷಣೀಯವಲ್ಲ

ಇಂದು ರಾಷ್ಟ್ರಪತಿ ಆಳ್ವಿಕೆಯ ವಿಸ್ತರಣೆಯೆಂದರೆ, ಅಧಿಕಾರಶಾಹಿಗಳದ್ದೇ ದರ್ಬಾರು. ಆ ಆಡಳಿತಕ್ಕೆ ಜನರ ಅಂಕುಶವಿಲ್ಲ. ಅದು ನಡೆದದ್ದೇ ದಾರಿ, ಓಡಿದ್ದೇ ವೇಗ! ಜನರಿಂದ ದೂರ, ಅದು ಜನತಾದರ್ಶನಗಳನ್ನು ನಡೆಸಿದರೂ ಪರಿಹಾರ ಬಯಸಿ ಸಂಕಟಗಳ ಸಾಗರದಲ್ಲಿ ರಾಜಧಾನಿಗೆ ತೆವಳಿ ಬರುವುದುಒಂದೆರಡು ಹನಿ-ಬಿಂದುಗಳು. ಆದ್ದರಿಂದಲೇ ರಾಷ್ಟ್ರಪತಿ ಆಡಳಿತ ಆದಷ್ಟು ಬೇಗ ಕೊನೆಗೊಳ್ಳಬೇಕು, ಅದರ ವಿಸ್ತರಣೆ ಅಪೇಕ್ಷಣೀಯವಲ್ಲ.

ಪ್ರಜಾಪ್ರಭುತ್ವದ ಆದ್ಯತೆ

ಹಾಗೆ ಆಗುವಾಗ-ಚುನಾವಣಾ ಸಿದ್ದತೆಯ ಪ್ರಕ್ರಿಯೆಗಳೂ ಸಮರ್ಥವಾಗಿ ಆಗುವುದು ಅಷ್ಟೇ ಅತ್ಯಗತ್ಯ. ಮತದಾರ ಪಟ್ಟಿಯಲ್ಲಿ ಅಕ್ರಮ ಮತದಾರರ ಹೆಸರು ನುಸುಳದಂತೆ ತಡೆಯಬೇಕು. ಗುರುತಿನ ಚೀಟಿ, ಪರಿಶೀಲನೆಯೂ ಆಗಬೇಕು. ಕಳ್ಳ ಓಟು ಅಕ್ರಮ ಮತ ಚಲಾವಣೆ, ಮತಗಟ್ಟೆ ವಶಪಡಿಸಿಕೊಂಡು ನಡೆಸುವ ರಿಗ್ಗಿಂಗ್‌ಗಳಿಗೆ ಅವಕಾಶ ನೀಡುವಂತಿರಬಾರದು... ಅಂದರೆ ಪ್ರಜಾಪ್ರಭುತ್ವ ವಿಕೃತಗೊಳ್ಳಬಾರದು.

ರಾಷ್ಟ್ರಪತಿ ಆಡಳಿತ ಕೊನೆಗೊಂಡು ಜನರಿಂದ ಚುನಾಯಿತಗೊಂಡ ಒಂದು ಸರ್ಕಾರ ಅಸ್ತಿತ್ವಕ್ಕೆ ಬರುವುದೇ ಇಂದಿನ ರಾಜಕೀಯ ಅಗತ್ಯತೆ, ಆದ್ಯತೆ. ಆಯಾ ಪಕ್ಷಗಳು ಅಧಿಕಾರಕ್ಕೆ ಬರುವ, ಬಿಡುವ ಪ್ರಶ್ನೆಯೇ ಆ ಪಕ್ಷಗಳಿಗೆ ಆದ್ಯತೆಯಾಗಬೇಕಿಲ್ಲ. ಯಾವುದೇ ಪಕ್ಷವು ಅದರ ನೀತಿಗಳು ಜನತೆಯ ಬಲದಿಂದ, ಪ್ರಜಾಸತ್ತಾತ್ಮಕ ಅಭಿವ್ಯಕ್ತಿಯಿಂದಲೇ ಎದುರಿಸಬೇಕಾಗುತ್ತದೆ. ಆ ದೃಷ್ಟಿಯಲ್ಲಿ ರಾಜ್ಯದಲ್ಲಿ ಪ್ರಜಾಪ್ರಭುತ್ವದ ಆಡಳಿತದ ಅಸ್ತಿತ್ವ ಅತ್ಯಗತ್ಯವಿದೆ. ಚುನಾವಣೆಗಳು ನಡೆದರೆ ಪಕ್ಷವೊಂದರ ಗೆಲುವು ಎನ್ನುವುದಕ್ಕಿಂತ ಪ್ರಜಾಪ್ರಭುತ್ವದ ಗೆಲುವು ಎಂಬುದನ್ನು ಪರಿಗಣಿಸಬೇಕು.



ಇನ್ನು ಕೋಮುವಾದಿಗಳ ಕೈಗೆ ಕರ್ನಾಟಕದ ಆಡಳಿತದ ಚುಕ್ಕಾಣಿ ಹೋಗದಂತೆ ಹೋರಾಡುವುದು, ಜನವಿರೋಧಿ ಆರ್ಥಿಕ ನೀತಿಗಳು ಜಾರಿಯಾಗದಂತೆ ಪ್ರತಿರೋಧ ಒಡ್ಡುವುದು ಹೇಗೆ ದುಡಿವ ಜನತೆಯ ಬದುಕಿನ ಸಂರಕ್ಷಣೆ ಹಾಗೂ ಪ್ರಗತಿಗೆ ಅತ್ಯಗತ್ಯವೋ ಹಾಗೇ ರಾಜಕೀಯ ಹೋರಾಟದ ಕರ್ತವ್ಯವೂ ಸದಾ ಪ್ರಾಶಸ್ತ್ಯ ಆಗಿರುತ್ತದೆ. ○

ಗುಂಪುಗಾರಿಕೆ

ಗುಂಪುಗಾರಿಕೆ ಇಲ್ಲಿ ಎಲ್ಲಿಲ್ಲ ಹೇಳಿ
ಇಂದೆಲ್ಲಾ ರಂಗಕ್ಕೆ ಇಟ್ಟಿಹುದು ದಾಳಿ
ತಾನು ತನ್ನವ್ರರೆಂಬ ಸಂಕುಚಿತ ಚಾಳಿ
ಉಳಿದವರ ಮುನ್ನಡೆಗೆ ಹಾಕಿಹುದು ಬೇಲಿ

– ವಿಡಂಬಾರಿ

ನೋಟ



ಡಾ. ಭಾಸ್ಕರ ಮಯ್ಯ

ಗುಜರಾತ್ 5 ವರ್ಷಗಳ ಬಳಿಕ

ಈತನ ಹೆಸರು ಬಾಬುಭಾಯಿ. ಈತ 'ನ್ಯಾಯ ಚೇತನಾ' ಎಂಬ ಒಂದು ಸ್ವಯಂ ಸೇವಾ ಸಂಘಟನೆ (NGO)ಯವ. ಅಹಮದಾಬಾದಿನ ನರೋದಾ ಇಲಾಖೆಯಲ್ಲಿರುವ ಅಜಂತಾ ಎಲ್ಲೋರಾ ದಫ್ತರಿನಲ್ಲಿ ಈತ ಕುಳಿತಿರುತ್ತಾನ. ನಾನಾ ಬಗೆಯ ಪುಸ್ತಕಗಳು, ಫೋಟೋಗಳು ಹಾಗೂ ನಕ್ಷೆಗಳು ಇವನ ಅಂಗಡಿಯಲ್ಲಿದೆ.

ಈ ಭಜರಂಗಿ ತನ್ನನ್ನು ಸಾಮಾಜಿಕ ಕಾರ್ಯಕರ್ತನೆಂದು ಕರೆದುಕೊಳ್ಳುತ್ತಾನೆ. ಆತ ತನ್ನ ಬಗ್ಗೆ ಹೇಳಿಕೊಳ್ಳವುದು ಹೀಗೆ:-"ನಾನು ಮುಸಲ್ಮಾನರಿಂದ ಮುಸಲಾಯಿಸಲ್ಪಟ್ಟ ಹಿಂದೂ ಹುಡುಗಿಯರನ್ನು ರಕ್ಷಿಸುತ್ತೇನೆ. ಇಂಥ ಸಂಬಂಧವೆಂದರೆ ನನಗೆ ವಾಕರಿಕೆ".

ಎಲ್ಲಿಯಾದರೂ ಹಿಂದೂ ಹುಡುಗಿ ಮುಸ್ಲಿಮನನ್ನು ಮದುವೆಯಾದರೆ ಅಥವಾ ಅಂತಹ ಯಾವುದೇ ಸಂಬಂಧ ತಿಳಿದುಬಂದರೆ ಈತ ತನ್ನ ರೌಡಿ ಪಡೆಯೊಂದಿಗೆ ಧಾವಿಸಿ ಅತ್ಯಂತ ನಿರ್ದಯವಾಗಿ ಹಿಂದೂ ಹುಡುಗಿಯನ್ನು ಬಿಡಿಸಿಕೊಂಡುಬರುತ್ತಾನೆ. ಇದು ಆತನೆನ್ನುವಂತೆ ಆತನಿಗೆ 'ಥ್ರಿಲ್' ಕೊಡುವ ಕೆಲಸ. ಆತನ ಹೇಳಿಕೆಯ ಪ್ರಕಾರ ಆತ ಈತನಕ 725 ಹಿಂದೂ ಹೆಂಗಸರನ್ನು ರಕ್ಷಿಸಿದ್ದಾನೆ. ಇದು ಕಾನೂನುಬಾಹಿರವಾದರೂ ಆತನ ದೃಷ್ಟಿಯಲ್ಲಿ ಇದು ಪರಮ ಧಾರ್ಮಿಕ ನೈತಿಕಕಾರ್ಯ.

ಆತ ನರೋದಾ ಪಾತಿಯ ಹತ್ಯಾಕಾಂಡದ ಪ್ರಮುಖ ಆರೋಪಿಯಾದರೂ ಆತ ಜೈಲಿನಲ್ಲಿಲ್ಲ. ಆರಾಮದಲ್ಲಿ ತಿರುಗಾಡಿಕೊಂಡಿರುತ್ತಾನೆ.



ಇದೊಂದು ವಿಶಿಷ್ಟ ಮಾನಸಿಕತೆ. ಗಾಂಧಿನಗರದ ಮಂತ್ರಿಗಳು ಮಾತ್ರವಲ್ಲ ಗುಜರಾತಿನ ಬಹುತೇಕ ಎಲ್ಲಾ ಹಿಂದುಗಳ ಮಾನಸಿಕತೆ. ಆಟೋ ಓಡಿಸುವವನಿಂದ ಹಿಡಿದು ಮೇಲು ಮಧ್ಯಮವರ್ಗದವರ ತನಕ ಎಲ್ಲರ ಮಾನಸಿಕತೆಯೂ ಇಂದು ಇದೇ ಬಗೆಯದ್ದಾಗಿದೆ.

ಆ ಆಲಮ್ ಇಲಾಖೆಯ ಒಬ್ಬನನ್ನು ಈ ಕುರಿತು ಕೇಳಿದಾಗ ಆತ ಹೀಗೆಂದ:

'ಅವರದ್ದೇ ಆಡಳಿತ. ನಾವೇನು ಮಾಡೋಣ. ನಾವು ಅಲ್ಲಾಗೆ ಪೂಜೆ ಮಾಡುತ್ತೇವೆ. ಅದೇ ನಮ್ಮ ತಪ್ಪು'.

ಮುಸಲ್ಮಾನರಲ್ಲಿ ಈಗ ದನಿಯೆತ್ತಿ ಮಾತನಾಡುವವರು ಯಾರೂ ಇಲ್ಲ. ಇದು ಇಡೀ ಗುಜರಾತಿನ ಮುಸಲ್ಮಾನರ ಮಾನಸಿಕತೆ. ಪರಕೀಯತೆ, ಅಸಹಾಯಕತೆ, ನೋವು ಅವರಲ್ಲಿ ಮಡುಗಟ್ಟಿದೆ. ಅವರು ಎರಡನೆಯ ದರ್ಜೆಯ ಪ್ರಜೆಗಳೆಂದು ಬಹಳಷ್ಟು ಹಿಂದುಗಳಿಗೆ ದೃಢ ನಂಬಿಕೆಯಾಗಿದೆ.

"ಅವರದ್ದೇ ಆಡಳಿತ. ನಾವೇನು ಮಾಡೋಣ. ನಾವು ಅಲ್ಲಾಗೆ ಪೂಜೆ ಮಾಡುತ್ತೇವೆ. ಅದೇ ನಮ್ಮ ತಪ್ಪು". ಮುಸಲ್ಮಾನರಲ್ಲಿ ಈಗ ದನಿಯೆತ್ತಿ ಮಾತನಾಡುವವರು ಯಾರೂ ಇಲ್ಲ. ಇದು ಇಡೀ ಗುಜರಾತಿನ ಮುಸಲ್ಮಾನರ ಮಾನಸಿಕತೆ.

ಮುಸಲ್ಮಾನರು ಈಗ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಂತಿದೆ. ಸ್ಪಷ್ಟ ಧ್ರುವೀಕರಣ ಇಂದಿನ ವಾಸ್ತವ. ಗುಜಾರಾತ್ 2002 ರಲ್ಲಿ ಇದ್ದುದಕ್ಕಿಂತ ಇಂದು ಹೆಚ್ಚು ಭಯಾನಕವಾಗಿದೆ.

ಗುಜರಾತ್ ಸರಕಾರ ಇಂದು ತನ್ನನ್ನು ಭಾರತೀಯ ಸಂವಿಧಾನದಿಂದ ಬೇರೆಯೇ ಎಂದು ತಿಳಿದುಕೊಂಡಿದೆ. ಪಠ್ಯ ಪುಸ್ತಕಗಳಲ್ಲೂ ಸಂಘ ಪರಿವಾರದ ದೃಷ್ಟಿಕೋಣದಿಂದ ಸಂಪೂರ್ಣ ತುಂಬಿಹೋಗಿದೆ. (60 ಲಕ್ಷ ಯಹೂದಿಗಳನ್ನು ಕೊಂದ) ನಾಜಿ ಹಿಟ್ಲರನನ್ನು ಧೀರೊದಾತ್ತ ನಾಯಕನನ್ನಾಗಿ ಚಿತ್ರಿಸಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪಾಠ ಹೇಳಲಾಗುತ್ತಿದೆ.

2002ರಲ್ಲಿ ಪೀಡಿತರಾದವರಿಗೆ ನ್ಯಾಯ ದೊರಕಿಸಿ ಕೊಡುವ ಇಡೀ ಪ್ರಕ್ರಿಯೆಯನ್ನೇ ಧ್ವಂಸಮಾಡಲಾಗಿದೆ. 345 ಪ್ರಕರಣಗಳಲ್ಲಿ ಕೇವಲ 13 ಮಾತ್ರ ಇತ್ಯರ್ಥವಾಗಿದೆ. ಭೇದಭಾವ ಮಾನ್ಯ ಆಚರಣೆಯಾಗಿದೆ. ಬಹಳಷ್ಟು ಹಿಂದುಗಳು 2002 ರ 'ಬಿರುಗಾಳಿ' ಗೆ ಹೆಮ್ಮೆ ಪಡುತ್ತಾರೆ.

ಗುಜರಾತಿನ ಇಂದಿನ ಪರಿಸ್ಥಿತಿ ಹೇಗಿದೆ ಎಂಬುದಕ್ಕೆ ಒಂದು ಉದಾಹರಣೆ: 'ಸಮಯಾಂತರ್' ಪತ್ರಿಕೆಯ ಪತ್ರಕರ್ತ ಪ್ರಶಾಂತ ಜಾರವರು ಅಹಮದಾಬಾದಿನ ಸಹಕಾರಿ ಕಾಲೋನಿಯ ಒಬ್ಬ ವರಿಷ್ಠ ಅಧಿಕಾರಿಯನ್ನು ಭೇಟಿ ಮಾಡಲು ಹೋಗುತ್ತಿದ್ದರು. ದಾರಿಯಲ್ಲಿ ಮೂರು ಹುಡುಗರು ಸೈಕಲ್ಲಿನಲ್ಲಿ ಒಬ್ಬಾತನನ್ನು ಅಡ್ಡಕಟ್ಟಿ ಜೋರಾಗಿ ಅರಚಿದರು

'ಉಗ್ರಗಾಮಿ..'

'ಏಕೆಂದರೆ ನೀನು ಮುಸಲ್ಮಾನ'

'ಅದಕ್ಕೆ'....

'ಮುಸಲ್ಮಾನರು ಭಯೋತ್ಪಾದಕರು. ನನ್ನ ತಂದೆ ನ್ಯಾಯಾಧೀಶ. ನಿನ್ನನ್ನು ಕೋರ್ಟಿನಲ್ಲಿ ಉಗ್ರಗಾಮಿಯೆಂದು ಘೋಷಿಸುತ್ತಾರೆ. ಇದು ಹಿಂದುಗಳ ಇಲಾಖೆ..'

12 ವರ್ಷದ ಆ ಹುಡುಗರು ತಮ್ಮ ಜೀವನದಲ್ಲಿ ಯಾವನೊಬ್ಬ ಮುಸಲ್ಮಾನನನ್ನು ನೋಡಿದ್ದಾರೋ ಇಲ್ಲವೋ! ಇದು 5 ವರ್ಷಗಳ ಬಳಿಕದ ಗುಜರಾತಿನ ಸ್ಥಿತಿ!

'ಮುಸಲ್ಮಾನರು ಭಯೋತ್ಪಾದಕರು. ನನ್ನ ತಂದೆ ನ್ಯಾಯಾಧೀಶ. ನಿನ್ನನ್ನು ಕೋರ್ಟಿನಲ್ಲಿ ಉಗ್ರಗಾಮಿಯೆಂದು ಘೋಷಿಸುತ್ತಾರೆ. ಇದು ಹಿಂದುಗಳ ಇಲಾಖೆ..' 12 ವರ್ಷದ ಆ ಹುಡುಗರು ತಮ್ಮ ಜೀವನದಲ್ಲಿ ಯಾವನೊಬ್ಬ ಮುಸಲ್ಮಾನನನ್ನು ನೋಡಿದ್ದಾರೋ ಇಲ್ಲವೋ!

ಧರ್ಮಾಂಧತೆ

ಸೂತ್ರಾಂಧತೆಯಿಂದ ದೂರವೇ ಇದ್ದು
ಧರ್ಮಾಂಧತೆಯನ್ನು ಓಡಿಸಿರಿ ಒದ್ದು
ಈ ಇದುವೆ ನಿಜವಾದ ವಿಚಾರವಾದಿ
ತುಳಿಯಲೇಬೇಕಾದ ನಿರ್ದಿಷ್ಟ ಹಾದಿ

- ವಿಡಂಬಾರಿ

ದೆವ್ವದ ಕಾರ್ಖಾನೆ

'ಇತಿಹಾಸ ಮರುಕಳಿಸುತ್ತದೆ' ಅಂತ ಇತಿಹಾಸ ತಜ್ಞರು ಹೇಳುತ್ತಿರುತ್ತಾರೆ. ಕೆಲವು ಸಾರಿ ಹಾಗೆ ಆಗ್ತಾನೂ ಇರುತ್ತೆ. ಅದೇ ಥರ ಅಲ್ಲದಿದ್ರೂ ಸ್ವಲ್ಪ ಬೇರೆ ಬೇರೆ ಸ್ವರೂಪದಲ್ಲಿ. ಈಗ ಈ ವಿಚಾರ ಯಾಕಪಾ ಬಂತು ಅಂತಂದ್ರೆ. ಇತ್ತೀಚೆಗೆ ಕ್ರಿಕೆಟ್‌ಗರ ಹರಾಜು ಆಯ್ತಲ್ಲ ಅದನ್ನ ನೋಡಿ. ಅಂದ ಹಾಗೆ ನಿಮಗೂ ಏನು ನೆನಪಾಯ್ತು ಹೇಳಿ. ಹ್ಞಾಂ.... ಸರಿ, ಸರಿ, ಅದೇ ಹಿಂದೆ ಗುಲಾಮರನ್ನು ಹರಾಜು ಹಾಕ್ತಿದ್ರಲ್ಲ ಹಾಗೆ.

'ಕೆಲಸವಿಲ್ಲದ ತಲೆ ದೆವ್ವದ ಕಾರ್ಖಾನೆ ಇದ್ದಹಾಗೆ' ಅಂತ ಯಾರೋ ದೊಡ್ಡೋರು ಹೇಳಿದ್ದಾರೆ: ಸರಿಯಾದ ಮಾತೆ. ಇಂಥ ವಿಚಾರೆಗಳು. ಅಂದರೆ ಈ ಮನುಷ್ಯರನ್ನು ಹರಾಜು ಹಾಕೋ ವಿಚಾರ ಗೊತ್ತಾಗುತ್ತಿದ್ದ ಹಾಗೇ ನನ್ನ ತಲೆ ಹರಟೆ ಬುರುಡೆಯಲ್ಲಿ 'ದೆವ್ವದ ಕಾರ್ಖಾನೆ' ಶುರುವಾಯಿತು, ಈ ಕಾರ್ಖಾನೆಗೆ ನೀತಿ ನಿಯಮ ಏನೂ ಇರಲ್ಲ! ಏನೇನನ್ನೋ ತಯಾರಿಸುತ್ತದೆ! ಒಂದಕ್ಕೊಂದು ಅರ್ಥ ಸಂಬಂಧ ಇರಬೇಕೆಂದೇನೂ ಇಲ್ಲ. ಸರಿ ತಾನೆ? ಇಷ್ಟು ವಿಚಾರ ನಿಮಗೆ ಸರಿ ಅಂತ ಒಪ್ಪಿಗೆ ಆದರೆ ಮುಂದಕ್ಕೆ ಓದಿ. ಒಪ್ಪಿಗೆ ಇಲ್ಲದೆ ಓದಿ ಕಡೆಗೆ ನಿಮ್ಮ ತಲೆಗೊಂದು ದೆವ್ವದ ಕಾರ್ಖಾನೆ ಶುರುವಾದರೆ ನನ್ನನ್ನು ದೂಷಿಸಬೇಡಿ!



ಅಂದ ಹಾಗೆ ನಾನು ಏನು ಹೇಳ್ತಿದ್ದೇ? ಹ್ಞಾಂ... ಹರಾಜು. ಹೀಗೆ ಹರಾಜುಗಳ ವ್ಯಾಪ್ತಿ ವಿಸ್ತಾರಗೊಂಡರೆ ಮುಂದೆ ಏನು ಆಗಬಹುದು? ರಾಜಕಾರಣಿಗಳನ್ನು ಹರಾಜು ಹಾಕಿದ್ರೆ? 'ಥೂ ಮೂರು ಕಾಸಿಗೂ ಬೆಲೆ ಬಾಳಲ್ಲ. ಅವ್ರನ್ನ ಯಾರು ಹರಾಜು ಕೂಗ್ತಾರೆ?' ಅನ್ಕೊಂಡ್ರೆ ನಿಮ್ಮದು ತಪ್ಪು! ನಮ್ಮ ಭಂಡವಾಳಿಗರು ದಡ್ಡರಲ್ಲ. ಅವ್ರನ್ನೂ ಕೊಂಡ್ಕೋತಾರೆ. ಯಾಕೆಂದ್ರೆ ಕೊಂಡ್ಕೊಳದೇ ಇದ್ರೆ. ಈಗ ಇರುವ ಹಾಗೆ ಬಂಡವಾಳಿಗರು ಅವರಿಗೆ ಎಲೆಕ್ಷನ್ ಬಂದಾಗೆಲ್ಲ ದುಡ್ಡು ಸುರೀಬೇಕು. ಅವರು ಕೇಳಿದಾಗೆಲ್ಲ ಹಣ ಕೊಡಬೇಕು. ಬಂಡವಾಳಿಗರ ಕೆಲಸ ಕಾರ್ಯ ನಡೆಯಬೇಕಾದಾಗೆಲ್ಲ ಕಪ್ಪ ಕಾಣಿಕೆಗಳು ಸಲ್ಲುತ್ತಲೆ ಇರಬೇಕು. ಇದರ ಬದಲು ಅವರನ್ನೇ ಹರಾಜಲ್ಲಿ ಕೊಂಡರೆ ಈ ಸಮಸ್ಯೆಗಳೇ ಇರಲ್ಲ.

ಹೀಗೇನಾದ್ರೂ ಆದ್ರೆ, ಕೆಲವೇ ಕೆಲವು ಬಂಡವಾಳಿಗರು ನಮ್ಮ ರಾಜಕೀಯ ಪಕ್ಷಗಳನ್ನು ಮೊದಲು ಕೊಂಡುಕೊಳ್ಳಬಹುದು (ಕಮ್ಯೂನಿಸ್ಟ್ ಪಕ್ಷಗಳನ್ನು ಹೊರತುಪಡಿಸಿ ಅಂತ ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೇ?) ಆ ಮೇಲೆ ಅವುಗಳಿಗೆ ಸೋನಿಯಾ, ವಾಜಪೇಯಿ ಮುಂತಾದವರನ್ನು ಐಕಾನ್‌ಗಳನ್ನಾಗಿ ಮಾಡುವುದು (ಬಿಜೆಪಿಯವರೇ ವಾಜಪೇಯಿ ಪಕ್ಷದ ಮುಖವಾಡ ಅಷ್ಟೇ ಅಂತ ಈ ಹಿಂದೆಯೇ ಅವರನ್ನು ಐಕಾನ್ ಮಾಡಿ ಬಿಟ್ಟಿದ್ದಾರೆ) ನಂತರ ಆ ಪಕ್ಷಗಳಿಗೆ ನಾಯಕಮಣಿಗಳನ್ನು ಕೊಂಡುಕೊಳ್ಳುವುದು. ಈ ಬಂಡವಾಳಿಗರು ಎಂಥ ಘಟಿಂಗರಿರುತ್ತಾರೆ ಎಂದರೆ ಬಿಜೆಪಿಯ ಜನಪ್ರಿಯ ನಾಯಕ ರಥಾರೂಢರನ್ನು ಕಾಂಗ್ರೆಸ್‌ಗೆ ಕೊಂಡುಕೊಳ್ಳಬಹುದು! ಹಾಗೇ ವೈಸ್‌ವರಸಾ! ಹೇಗಿರುತ್ತೆ?

ಏನೇ ಆದ್ರೂ ಜೆಡಿ(ಎಸ್) ಐಕಾನ್ ದೇವೇಗೌಡ್ರು, ಕುಮಾರಣ್ಣೇಗೌಡ್ರು, ರೇವಣ್ಣೆ ಗೌಡರನ್ನು ಎಷ್ಟು ಕೋಟಿಯಾದ್ರು ಸರಿ ಬಿಡಲ್ಲ! ಎಂ.ಪಿ.ಪ್ರಕಾಶ್‌ರನ್ನು ಅತ್ತ ಕಾಂಗ್ರೆಸ್ ಬಿಜೆಪಿ ಎರಡೂ ಬಿಟ್ರೆ, ಕಡೆಗೆ ದೇವೇಗೌಡರೇ ತಗೋಬೋದು. ಚೀಪಾಗಿ ಸಿಕ್ತಲ್ಲ. ಇರ್ಲಿ ಅತ್ಲಾಗೆ ಅಂತ.

ಇನ್ನು ಚಿಲ್ರೆ ಪಲ್ರೆ ಪಕ್ಷಗಳನ್ನು ಚೀಪಾಗಿ ಕೊಂಡುಕೊಳ್ಳೋ ಬಂಡವಾಳಿಗರೂ ನಷ್ಟ ಏನೂ ಮಾಡ್ಕೋಳಲ್ಲ. ದೊಡ್ಡ ಪಕ್ಷಗಳಿಗೆ ಸರ್ಕಾರ ರಚಿಸಲು ಎಂಪಿ/ಎಂ.ಎಲ್‌ಎ.ಗಳ ಕೊರತೆ ಬಿದ್ರೆ. ಇವರಿಗೆ ಒಳ್ಳೇ ಲಾಭ. ಈಗಿನಂತೆ ರೆಸಾರ್ಟ್‌ನಲ್ಲಿ ಗುಟ್ಟಾಗಿ ಕುದುರೆ ವ್ಯಾಪಾರ ಮಾಡುವ ಬದಲು ಬಹಿರಂಗವಾಗಿ ಹರಾಜು ಹಾಕಿ ಒಳ್ಳೆಯ ಲಾಭ ಮಾಡಬಹುದು.

(ಬ್ಯಾಟರಿ ಡೌನ್ ಆಗಿದ್ದರಿಂದ ದೆವ್ವದ ಕಾರ್ಖಾನೆ ಇಲ್ಲಿಗೆ ಸದ್ಯಕ್ಕೆ ಆಫ್ ಆಗಿದೆ)



ಇಂದಿನ ಪ್ರಜಾಪ್ರಭುತ್ವದ ಅವನತಿಗೆ, ಭ್ರಷ್ಟತನಕ್ಕೆ ಜನರ ಅತೃಪ್ತಿಗೆ ಅಸಮಾಧಾನಗಳಿಗೆ, ಬಹುತೇಕ ಕೊರತೆಗಳಿಗೆ ಹೊಣೆಗಾರರೆಂದು ದೂಷಣೆಗೆ ಗುರಿಯಾಗಿರುವುದು ರಾಜಕಾರಣಗಳು, ರಾಜಕೀಯ ಪಕ್ಷಗಳು ಎಲ್ಲ ರಾಜಕಾರಣಿ, ರಾಜಕೀಯ ಪಕ್ಷಗಳನ್ನೂ ಒಂದೇ ತಕ್ಕಡಿಯಲ್ಲಿ ಹಾಕಿ ಎಲ್ಲರನ್ನು ಒಂದೇ ದಾರಿಗೆ, ಒಂದೇ ರೀತಿಯಲ್ಲಿ ಧೂಷಣೆಗೆ ಗುರಿ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ನಡೆದ ಅಸಹ್ಯಕರ

ರಾಜಕಾರಣಿ, ರಾಜಕೀಯ ಪಕ್ಷಗಳು, ರಾಜಕೀಯದ ದೂಷಣೆ, ಅಪಹಾಸ್ಯ ಪರಿಹಾರವೇ ?

ಆಶ್ಚರ್ಯಕರ ಮತ್ತು ಸಾಮಾನ್ಯವಾಗಿ ನಾವು ಗಮನಕೊಡದ ಒಂದು ಅಂಶವೆಂದರೆ ಪ್ರಜಾಪ್ರಭುತ್ವ ಆಧಾರಸ್ತಂಭಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲಿ ಶಾಸಕಾಂಗ ಮಾತ್ರ ಜನತೆಯಿಂದ ಆಯ್ಕೆಯಾದ, ಜನತೆಗೆ ಉತ್ತರದಾಯಿತ್ವವುಳ್ಳ ಅಂಗ. ಕಾರ್ಯಾಂಗ, ನ್ಯಾಯಾಂಗಗಳು, ನಾಲ್ಕನೆಯ ಆಧಾರಸ್ತಂಭವೆಂದು ಪ್ರಸಿದ್ಧವಾದ ಪತ್ರಿಕೆ, ಮಾಧ್ಯಮರಂಗವೂ ಜನತೆಯಿಂದ ಆಯ್ಕೆಯಾದುದೂ ಅಲ್ಲ, ಜನತೆಗೆ ಉತ್ತರದಾಯಿಯಾದದ್ದೂ ಅಲ್ಲ.

ಜಿ.ಎನ್.ನಾಗರಾಜ್

ಘಟನೆಗಳಿಗೆ, ರಾಜಕೀಯ ಬಿಕ್ಕಟ್ಟಿಗೆ ಆಳುವ ವರ್ಗಗಳ ಪಕ್ಷಗಳು, ಅವುಗಳ ರಾಜಕಾರಣಿಗಳು ದೊಡ್ಡ ಪ್ರಮಾಣದ ಹೊಣೆ ಹೊರಬೇಕಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ರಾಜಕಾರಣಿಗಳು, ಅವರ ವಿವಿಧ ಗುಂಪುಗಳ ಅಧಿಕಾರದಾಹ ಅದಕ್ಕೆ ಸಾಧನಗಳಾಗಿ ರಾಜಕೀಯ ಪಕ್ಷಗಳ ಬಳಕೆ ಕರ್ನಾಟಕದ ಜನತೆಯ ಕಣ್ಣಿಗೆ ಕಟ್ಟಿದಂತಿದೆ.

ಹೀಗಾಗಿ ರಾಜಕೀಯ ಪಕ್ಷಗಳನ್ನು ರಾಜಕಾರಣಿಗಳನ್ನು ಕಟುವಾದ ವಿಮರ್ಶೆಗೆ ಒಳಪಡಿಸಬೇಕು. ಆ ಮೂಲಕ ವಿವಿಧ ರಾಜಕೀಯ ಪಕ್ಷಗಳ ಸ್ವರೂಪವನ್ನು ಅವುಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಆದರೆ ಅದಕ್ಕೆ ಬದಲಾಗಿ ಇಂದು ಓತಪ್ರೇತವಾಗಿ ನಮ್ಮ ಪತ್ರಿಕೆ, ಮಾಧ್ಯಮಗಳಲ್ಲಿ ಸಿನೆಮಾ. ಟಿ.ವಿ. ಧಾರವಾಹಿಗಳಲ್ಲಿ ಅವುಗಳಿಂದ ಪ್ರಭಾವಿತರಾದ ಜನರಲ್ಲಿ ಪಟ್ಟಣ, ಹಳ್ಳಿಗಳ ಮಧ್ಯಮ ವರ್ಗಗಳಲ್ಲಿ ನಡೆಯುತ್ತಿರುವುದು ದೂಷಣೆ, ಅಪಹಾಸ್ಯ, ರಾಜಕೀಯದ ಇಂದಿನ [illegible]ಬರಾಟಕ್ಕೆ ಕಾರಣಗಳೇನು? ಇದಕ್ಕೆ ಪರಿಹಾರವೇನು ಎಂಬ ಬಗ್ಗೆ ಯಾವುದೇ ಬೆಳಕು ಚೆಲ್ಲದ ದೂಷಣೆ.

ಇಂದಿನ ಅಗತ್ಯ - ದೂಷಣೆಯಲ್ಲ ವಿಮರ್ಶೆ

ರಾಜಕೀಯ ಪಕ್ಷಗಳನ್ನು, ರಾಜಕಾರಣಿಗಳನ್ನು ಒಂದೇ ಗುಂಪಿಗೆ ಸೇರಿಸಿ ನಿಂದಿಸುವುದು ನಂತರ ಮತ್ತೆ ಅದೇ ರಾಜಕೀಯ ಪಕ್ಷಗಳನ್ನು, ರಾಜಕಾರಣಿಗಳನ್ನು ಆರಿಸಿತರುವುದು, ಅವರಿಗೆ ಹುಪರಾಕ್ ಹೇಳುತ್ತಾ ಓಲೈಸುವುದು. ಹೀಗಾಗಿ ದೂಷಣೆಯೂ ಕೂಡ ಆಳುವ ವರ್ಗಗಳ ಅಧಿಕಾರವನ್ನು ಮುಂದುವರೆಸಲು ಸಾಧಕ. ಜನರಲ್ಲಿ ಉಂಟಾದ ಅತೃಪ್ತಿ, ಸಿಟ್ಟಿಗೆ ದನಿ ನೀಡಿದಂತೆಯೂ ಇರಬೇಕು, ಆದರೆ ಜನರ ರಾಜಕೀಯ ತಿಳುವಳಿಕೆ, ಪ್ರಜ್ಞೆಯ ಬೆಳವಣಿಗೆ ಅಥವಾ ವಿಕಸನವೂ ಆಗಬಾರದು. ಆಳುವ ವರ್ಗಗಳ ಈ ಕುತಂತ್ರವನ್ನು ಪತ್ರಕರ್ತರು, ಬುದ್ಧಿಜೀವಿಗಳು, ಸಾಹಿತಿಗಳು, ಸಿನೆಮಾ, ಧಾರವಾಹಿಗಳ ಸೃಷ್ಟಿಕರ್ತರು ತಮ್ಮದೇ ವಿಚಾರವೆಂದು ಭ್ರಮಿಸಿ ಸಮಾಜದ ಮುಂದೆ ಮಂಡಿಸುವಂತೆ ಮಾಡಲು ಪತ್ರಿಕೆ, ಸಿನೆಮಾ, ಟಿವಿ ವಾಹಿನಿಗಳ ಮೇಲೆ ಹಿಡಿತ ಹೊಂದಿರುವ ಬಂಡವಾಳಶಾಹಿಗಳು ಯಶಸ್ವಿಯಾಗಿದ್ದಾರೆ. ಸಭೆಗಳಲ್ಲಿ ರಾಜಕಾರಣಿಗಳನ್ನು ತರ, ತರಹೇವಾರಿಯಾಗಿ ಅವಹೇಳನ ಮಾಡಿದರೆ ಅದಕ್ಕೆ ಸಿಗುವ ಚಪ್ಪಾಳೆ, ಮೆಚ್ಚುಗೆಗಳು, ಸೀಟಿಗಳು ಒಂದು ಕಡೆ ವಿಚಾರಸಂಕಿರಣ ಸಭೆಗಳಲ್ಲಿ ಬುದ್ಧಿಜೀವಿಗಳು ಮತ್ತೊಂದು ಕಡೆ ಸಿನಿಮಾ, ಟಿ.ವಿ, ಧಾರವಾಹಿಗಳು, ದಿನಪತ್ರಿಕೆ, ವಾರಪತ್ರಿಕೆಗಳು ತಮ್ಮ ಪ್ರಸಾರ ಹೆಚ್ಚಿಸಿಕೊಳ್ಳುವುದಕ್ಕಾಗಿ, ಹೆಚ್ಚು ಹಣ ಗಳಿಕೆಗಾಗಿ ರಾಜಕಾರಣಿಗಳನ್ನು ದೂಷಿಸುವಂತೆ ಮಾಡುತ್ತವೆ.

ಅತಿ ಕೆಟ್ಟ ಪ್ರಜಾಪ್ರಭುತ್ವವೂ, ಅತಿ ಒಳ್ಳೆಯ ರಾಜಪ್ರಭುತ್ವ, ಸರ್ವಾಧಿಕಾರಗಳಿಗಿಂತಲೂ ಉತ್ತಮ

ಅತಿ ಒಳ್ಳೆಯ ರಾಜಪ್ರಭುತ್ವ ನಮ್ಮ ಪುರಾಣ ಕಥೆಗಳಲ್ಲಿ ಕೆಲವೊಮ್ಮೆ ಚಿತ್ರಿಸಿರುವ - ಸದಾ ಪ್ರಜೆಗಳ ಒಳಿತನ್ನೇ ಬಯಸುವ, ಸಾಲುಮರ ನೆಡಿಸುವ, ಅರವಟ್ಟಿಗೆಗಳನ್ನು, ಧರ್ಮಚತ್ರಗಳನ್ನು ಕಟ್ಟಿಸುವ ರಾಜಪ್ರಭುತ್ವವೂ ಕೂಡ ಪ್ರಜೆಗಳಿಗೆ ಉತ್ತರದಾಯಿಯಲ್ಲ. ಪ್ರಜೆಗಳಿಗೆ ರಾಜನ ಕೆಲಸಗಳಲ್ಲಿ ಕೊರತೆ ಕಂಡರೆ, ಅಳ್ವಿಕೆ ಇಷ್ಟವಾಗದಿದ್ದರೆ ಅದನ್ನು ವ್ಯಕ್ತಪಡಿಸುವಂತಿಲ್ಲ. ಒಂದು ಕೆಲಸ ಪ್ರಜೆಗಳಿಗೆ ಒಳ್ಳೆಯದನ್ನು ಬಯಸಿ ಕೈಗೊಂಡಿದ್ದೇ ಆದರೂ ಅದು ಪ್ರಜೆಗಳ ತುರ್ತು ಅಗತ್ಯವನ್ನು ಪೂರೈಸದಿರಬಹುದು ಅಥವಾ ಅಂತಹ ಕೆಲಸದ ಪರಿಣಾಮ ಪ್ರಯೋಜನಕಾರಿಯಲ್ಲದಿರಬಹುದು. ಅದನ್ನು ರಾಜನಿಗೆ ತಿಳಿಸುವ ದಾರಿಯಿಲ್ಲ. ಯಾವಾಗಲೂ ರಾಜನನ್ನು ಮೆಚ್ಚಿಸಲು ಬೇಕಾದ, ಓಲೈಸಬೇಕಾದ ವ್ಯವಸ್ಥೆಯಲ್ಲಿ ನಿಜವಾದ ಅಭಿಪ್ರಾಯವನ್ನು ತಿಳಿಯುವ ಅವಕಾಶಗಳು ಕಡಿಮೆ. ರಾಜಭ್ರಷ್ಟನಲ್ಲ, ಭೋಗಗಳಲ್ಲೇ ಮಗ್ನನಲ್ಲ ಎಂದರೂ ರಾಜನಿಗೆ, ಅವನ ಮನೆತನಕ್ಕೆ, ಸಂಬಂಧಿಗಳಿಗೆ ಲಭ್ಯವಾಗಿರುವ, ವೆಚ್ಚವಾಗುವ ಸಂಪತ್ತು, ಅರಮನೆಗಳು, ದಾಸದಾಸಿಯರು, ವಂದಿಮಾಗಧರು, ರಾಜಪರಿವಾರದ, ಅರಮನೆಗಳ ಅಲಂಕರಣ, ಆಭರಣಗಳು ಇತ್ಯಾದಿ ಇತ್ಯಾದಿ ಪ್ರಚಾರ ಪ್ರಭುತ್ವ ವ್ಯವಸ್ಥೆಯಲ್ಲಿರುವ ಯಾವುದೇ ರಾಜಕಾರಣಿಯ ಸಂಪತ್ತಿಗಿಂತಲೂ ಹಲವು ಪಟ್ಟು ಹೆಚ್ಚಿನದು. ಇಡೀ ರಾಜ್ಯ, ಅದರಲ್ಲಿರುವ ಭೂಮಿ, ಇತರ ಸಂಪತ್ತು ಎಲ್ಲವೂ ರಾಜನದೇ, ರಾಜನ ವೈಯಕ್ತಿಕ ಇಚ್ಚೆಯ ಮೇಲೆ ಆಡಳಿತ ಎಂಬ ವ್ಯವಸ್ಥೆಯಲ್ಲಿ ರಾಜ ಎಷ್ಟೇ ಒಳ್ಳೆಯವನು, ಎಷ್ಟೇ ಬುದ್ಧಿವಂತ ಎಂದರೂ ಅದಕ್ಕೊಂದು ಮಿತಿಯಿದೆ. ಅವನು ನೀಡಬಹುದಾದ ಗಮನಕ್ಕೆ, ಆಸಕ್ತಿಗೆ, ತಿಳುವಳಿಕೆ ಸೀಮಿತವಾಗಿಯೇ ಇರುತ್ತವೆ. ಆದರಿಂದಾಗಿ ಅವನ ಆಡಳಿತ ನೂರಾರು, ಸಾವಿರಾರು ಜನರು ಭಾಗವಹಿಸುವಿಕೆಯಿಂದ ರೂಪುಗೊಂಡ ಕಾರ್ಯಕ್ರಮಗಳಿಗಿಂತ ಒಳ್ಳೆಯದಾಗಿರಲು ಸಾಧ್ಯವಿಲ್ಲ. ರಾಜ ಮಾತ್ರವಲ್ಲದೆ ಗ್ರಾಮಮಟ್ಟದಿಂದ ಸಾಮ್ರಾಜ್ಯದ ಮಟ್ಟದವರೆಗೂ ಇಚ್ಛಾನುಸಾರ ಆಡಳಿತ, ಪ್ರಜೆಗಳ ಆದಾಯವನ್ನು ತನ್ನ ಹಾಗೂ ಸಂಬಂಧಿಗಳ ಭೋಗಕ್ಕೆ ಬಳಸಲು ಮುಕ್ತ ಅವಕಾಶ ಎನ್ನುವ ವ್ಯವಸ್ಥೆಯಲ್ಲಿ, ಯಾವ ರೈತನೂ ಭೂಮಿಯ ಮೇಲೆ ಹಕ್ಕನ್ನು ಪಡೆಯದೆ, ಪಾಳೆಯಗಾರಿ ಭೂಮಾಲಕರ ಮರ್ಜಿಯಲ್ಲಿ ಬೇಸಾಯ ಮಾಡುವ, ರಾಜ, ಮಾಂಡಲಿಕರ ಭೋಗಕ್ಕಾಗಿ ರೈತರು, ಕುಶಲಕರ್ಮಿಗಳು, ವ್ಯಾಪಾರಿಗಳು ಅತಿಯಾದ ತೆರಿಗೆಯನ್ನು (ಒಳ್ಳೆಯ ರಾಜ ತೆರಿಗೆಗಳನ್ನು ಕಡಿಮೆ ಮಾಡಿದ ಸ್ಥಿತಿಯಲ್ಲಿಯೂ) ನೀಡಬೇಕಾಗುತ್ತದೆ.

ಇಲ್ಲಿ ಪಾಳೆಯಗಾರಿ ಹಾಗೂ ಪ್ರಜಾಪ್ರಭುತ್ವದ ಸಮಗ್ರ ತುಲನಾತ್ಮಕ ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶವಲ್ಲ. ಸರ್ವಾಧಿಕಾರಿ ವ್ಯವಸ್ಥೆಗೂ ಮೇಲಿನ ಅನೇಕ ಉದಾಹರಣೆಗಳು ಅನ್ವಯವಾಗುತ್ತವೆ.

ಪ್ರಜಾಪ್ರಭುತ್ವದಲ್ಲಿ ರಾಜಕೀಯ ವೊಂದೇ ಪ್ರಜೆಗಳಿಗೆ ಹೊಣೆಗಾರ ಸಂಸ್ಥೆ

ಪ್ರಜಾಪ್ರಭುತ್ವವೇ ಪಾಳೆಯಗಾರಿಗಿಂತ, ಸರ್ವಾಧಿಕಾರಕ್ಕಿಂತ ಉತ್ತಮ ವ್ಯವಸ್ಥೆ ಎನ್ನುವಾಗ ಅದರಲ್ಲಿ ರಾಜಕೀಯದ ಪಾತ್ರವೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆಶ್ಚರ್ಯಕರ ಮತ್ತು ಸಾಮಾನ್ಯವಾಗಿ ನಾವು ಗಮನಕೊಡದ ಒಂದು ಅಂಶವೆಂದರೆ ಪ್ರಜಾಪ್ರಭುತ್ವ ಆಧಾರಸ್ತಂಭಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲಿ ಶಾಸಕಾಂಗ ಮಾತ್ರ ಜನತೆಯಿಂದ ಆಯ್ಕೆಯಾದ ಜನತೆಗೆ ಉತ್ತರದಾಯಿತ್ವವುಳ್ಳ ಅಂಗ. ಕಾರ್ಯಾಂಗ, ನ್ಯಾಯಾಂಗಗಳು, ನಾಲ್ಕನೆಯ ಆಧಾರಸ್ತಂಭವೆಂದು ಪ್ರಸಿದ್ಧವಾದ ಪತ್ರಿಕೆ, ಮಾಧ್ಯಮರಂಗವೂ ಜನತೆಯಿಂದ ಆಯ್ಕೆಯಾದುದೂ ಅಲ್ಲ. ಜನತೆಗೆ ಉತ್ತರದಾಯಿಯಾದದ್ದೂ ಅಲ್ಲ. ಜೊತೆಗೆ ಅಧಿಕಾರಶಾಹಿ ವ್ಯವಸ್ಥೆಯ ಮೂಲಕವೇ ಅವುಗಳ ಆಂತರಿಕ ಆಡಳಿತ, ಆರ್ಥಿಕ ವ್ಯವಸ್ಥೆಯ ಪ್ರಧಾನ ಭಾಗವಾದ ಖಾಸಗಿ ಉದ್ಯಮಗಳು, ಸಂಸ್ಥೆಗಳು ಅವುಗಳು ಉತ್ಪಾದನೆ, ಸೇವೆ ಮೊದಲಾದ ಯಾವುದೇ ಕ್ಷೇತ್ರದಲ್ಲಿರಲಿ ಜನತೆಗೆ ಯಾವುದೇ ಉತ್ತರದಾಯಿತ್ವವಿಲ್ಲ. ಅಂದರೆ ಈ ಸಂಸ್ಥೆಗಳ ಆಡಳಿತಗಾರರು ಜನತೆಯಿಂದ ಆಯ್ಕೆಯಾದವರೂ ಅಲ್ಲ. ಜನತೆಯ ನಿಯಂತ್ರಣವೂ ಇಲ್ಲ. ಲಾಭ ಮತ್ತು ಮಾರುಕಟ್ಟೆ ಮಾತ್ರವೇ ಇವುಗಳನ್ನು ನಿಯಂತ್ರಣ ಮಾಡುವ ಶಕ್ತಿಗಳು, ಸಂಪತ್ತಿನ ಒಡೆಯರ ಮರ್ಜಿಯಂತೆ ಅಧಿಕಾರಶಾಹಿ ವ್ಯವಸ್ಥೆಯ ಮೂಲಕ ನಡೆಸಲ್ಪಡುವಂತಹವು. ಕಾರ್ಯಾಂಗದ ಮೇಲೆ ಶಾಸಕಾಂಗದ ನಿಯಂತ್ರಣ, ನ್ಯಾಯಾಂಗದ ಮೇಲೆ ಕೂಡ ಶಾಸಕಾಂಗದ ಕ್ಷೀಣ ಗಮನ ಪತ್ರಿಕೆ, ಮಾಧ್ಯಮ, ಖಾಸಗಿ ಉದ್ದಿಮೆ ವ್ಯವಹಾರಗಳು ಶಾಸಕಾಂಗ ರಚಿಸಿದ ಕಾನೂನುಗಳಿಂದ ಮಾತ್ರವೇ ಪ್ರಜಾಪ್ರಭುತ್ವದ ಮೇಲೂ ಮೇಲಿನ ಉಸ್ತುವಾರಿಗೆ ಒಳಪಟ್ಟಿವೆ. ಶಾಸಕಾಂಗವೊಂದೇ ಚುನಾಯಿತ ಪ್ರತಿನಿಧಿಗಳ ಮೂಲಕ ರಾಜಕೀಯ ಪಕ್ಷ ವ್ಯವಸ್ಥೆಯ ಮೂಲಕ ಜನರಿಗೆ ಉತ್ತರದಾಯಿಯಾಗಿದೆ.

ಶಾಸಕಾಂಗ ಜನರಿಂದ ಆಯ್ಕೆಯಾದ ರಾಜಕೀಯ ಪಕ್ಷಗಳ ಸದಸ್ಯರಿಂದ ಕೂಡಿದೆ: 5 ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳ ಮೂಲಕ ಜನರಿಗೆ ಉತ್ತರದಾಯಿಯಾಗಿದೆ ಎಂದ ಮಾತ್ರಕ್ಕೆ ಅದು ಜನತೆಯ ನೇರ ಹಾಗೂ ನಿರಂತರ ನಿಯಂತ್ರಣದಲ್ಲಿ ಕೆಲಸ ಮಾಡುವ ನೈಜ ಪ್ರಜಾಪ್ರಭುತ್ವ ಎಂದು ಅರ್ಥವಲ್ಲ. ಪ್ರಜಾಪ್ರಭುತ್ವವನ್ನು ನಿಜವಾದ ಪ್ರಜಾಪ್ರಭುತ್ವವಾಗಿಸುವುದು ಹೇಗೆ ಎಂಬುದನ್ನು ಬೇರೆಯಾಗಿ ವಿಶ್ಲೇಷಣೆಗೆ ಒಳಪಡಿಸೋಣ.

ಚುನಾಯಿತ ಪ್ರತಿನಿಧಿಗಳಿಲ್ಲದ ಅಧಿಕಾರಶಾಹಿ ಆಡಳಿತವನ್ನು ಅನುಭವಿಸಿದ ಜನತೆಗೆ ಪ್ರಜಾಪ್ರಭುತ್ವದ ಈಗಿನ ಸ್ವರೂಪದಲ್ಲಿಯೂ, ತನ್ನೆಲ್ಲಾ ಕಚ್ಚಾಟ, ಬೀದಿರಂಪಗಳ ನಡುವೆಯೂ, ರಾಷ್ಟ್ರಪತಿಗಳ ಆಡಳಿತ ಬೇಡವಾಗಿದೆ. ಶಾಸನಸಭೆ ಮತ್ತು ಅದಕ್ಕೆ ಹೊಣೆಗಾರನಾಗಿರುವ ಮಂತ್ರಿಮಂಡಳದ ಆಡಳಿತವನ್ನು ಬಯಸುತ್ತಿದ್ದಾರೆ. ತಮಗೆ ಸರಿಯಾದ

ಪುಟ 12 ಕ್ಕೆ



ಬೆಂಗಳೂರು - ಮೈಸೂರು ಕಾರಿಡಾರ್ ಬಗ್ಗೆ ದೇವಗೌಡರ ನಿಲುವಿಗೆ ವ್ಯಂಗ್ಯ

ದಕ್ಷಿಣ ಕನ್ನಡ : ಬಿ.ಸಿ.ರೋಡ್ ಸಮೀಪ ಯುವಕನ ಕೊಲೆ - ಭಜರಂಗದ ಮೇಲೆ ಶಂಕೆ

ಬಿ.ಸಿ.ರೋಡಿನ ರೈಲ್ವೆ ನಿಲ್ದಾಣದಲ್ಲಿ ಪ್ರತಿ ದಿನ ಬೆಳಿಗ್ಗೆಯಿಂದ ಮದ್ಯಾಹ್ನದವರೆಗೆ ರಿಕ್ಷಾದಲ್ಲಿ ದುಡಿಯುತ್ತಿದ್ದ ಇಕ್ಬಾಲ್ (ಪ್ರಾಯ 25) ಎಂಬ ಯುವಕನನ್ನು ಫೆಬ್ರವರಿ 20, 2008 ರಂದು ಬೆಳಿಗ್ಗೆ ರಿಕ್ಷಾದಲ್ಲಿ ಬಾಡಿಗೆದಾರರಾಗಿ ಆರಿಸಿಕೊಂಡು ಜನಸಂಖ್ಯೆ ಕಡಿಮೆ ಇರುವ ಪಚ್ಚಿನಡ್ಕ ರಬ್ಬರ್ ತೋಟದ ನಡುವೆ ಕುತ್ತಿಗೆಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ. ಕೊಲೆ ನಡೆದಿದ್ದು ನಿರ್ಜನ ಪ್ರದೇಶವಾದ ಕಾರಣ ಕೆಲ ಗಂಟೆಗಳತನಕ ಇದು ಯಾರಿಗೂ ಗಮನಕ್ಕೆ ಬಂದಿಲ್ಲ. ಕೊಲೆಗಾರರು ಸುಲಭವಾಗಿ ತಪ್ಪಿಸಿಕೊಂಡಿದ್ದಾರೆ. ಕೆಎಫ್‌ಡಿ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ ಇಕ್ಬಾಲ್ ನನ್ನು ಬಹಳಷ್ಟು ಪೂರ್ವಯೋಜಿತವಾಗಿ ಭಜರಂಗ ದಳದ ಕಾರ್ಯಕರ್ತರು ಕೊಲೆ ಮಾಡಿದ್ದಾರೆ ಎಂಬುದು ಅನಂತರದ ಬೆಳವಣಿಗೆಗಳು ತೋರಿಸಿಕೊಟ್ಟಿವೆ. ಕೊಲೆಯಾದ ಸುದ್ದಿ ತಲುಪುತ್ತಿದ್ದ ಕ್ಷಣದಲ್ಲೇ ಬಿಸಿರೋಡಿನಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಿ ಉದ್ವೇಗದ ಪರಿಸ್ಥಿತಿ ನಿರ್ಮಾಣವಾಯಿತು. ಯಾವ ಕ್ಷಣದಲ್ಲೂ ಮತ್ತೆ ಕೋಮುದಳ್ಳುರಿ ಪ್ರಜ್ವಲಿಸುವ ಸಾಧ್ಯತೆಗಳು ಇದ್ದರೂ ಜನಸಾಮಾನ್ಯರು ಆ ರೀತಿಯ ಮನೋಭಾವಕ್ಕೆ ಬೆಲೆ ನೀಡದ ಕಾರಣ ಸಹಜವಾಗಿಯೇ ಅದು ನಂದಿ ಹೋಯಿತು.



ಕೊಲೆಯಾ ಆಟೋಚಾಲಕ ಇಕ್ಬಾಲ್

'ಪೂರ್ವ ದ್ವೇಷ' ವೆಂಬ ಹುಯಿಲು

ಇತ್ತ ಪೊಲೀಸರು ಮಾಮೂಲಿನಂತೆ ಪ್ರಕರಣಕ್ಕೆ ಪೂರ್ವ ದ್ವೇಷವೇ ಕಾರಣ ಎಂಬ ಹೇಳಿಕೆ ನೀಡಿದರೆ, ಕೆಲವು ಮಾಧ್ಯಮಗಳು ಪ್ರೇಮ ಪ್ರಕರಣವೇ ಕಾರಣವೆಂದು ಹೇಳಿ ನಿಜವಾದ ಕಾರಣವನ್ನು ಬಚ್ಚಿಟ್ಟು ಜನರೆದುರು ಇಂತಹ 'ಕೊಲೆಗಾರ ಸಂಘಟನೆ'ಗಳ ಹುನ್ನಾರವನ್ನು ಮರೆ ಮಾಚುತ್ತಿರುವಂತೆ ಕಾಣುತ್ತಿದೆ. ಬಿಜೆಪಿ ಸಂಘ ಪರಿವಾರದ ಮಾಜಿ ಶಾಸಕರುಗಳ ನ್ನೊಳಗೊಂಡ ದಂಡು ಪೊಲೀಸರು 'ನಿರಪರಾಧಿಗಳನ್ನು ಬಂಧಿಸುತ್ತಿದ್ದಾರೆಂಬ' ಯಾವತ್ತೂ ನಡೆಸುತ್ತಿದ್ದ ಬ್ಲಾಕ್ ಮೈಲ್ ತಂತ್ರವನ್ನು ಈ ಬಾರಿಯೂ ನಡೆಸಿ ಪೊಲೀಸ್ ಠಾಣೆಯೆದುರು ಜನರ ಜಮಾವಣೆಗೊಳಿಸಿ ಕೊಲೆಯ ತನಿಖೆಯ ಗತಿಯನ್ನು ತಪ್ಪಿಸಲು ಪ್ರಯತ್ನಿಸಿದ್ದಾರೆ. ಅದರಲ್ಲಿ ಭಾಗಶ: ಯಶಸ್ಸು ಆಗಿದ್ದಾರೆ.

ಬಂಧನಗಳು

ಪೊಲೀಸರು ಈಗಾಗಲೇ ಮಂಗಳೂರಿನ ಭಜರಂಗದಳದ ಮುಖಂಡ ಶರಣ್ ಪಂಪ್‌ವೆಲ್ ಎಂಬ ವ್ಯಕ್ತಿಯನ್ನು ಬಂಧಿಸಿದ್ದಾರೆ. ಕೊಲೆಗೆ ಬೆಂಬಲ ನೀಡಿದ ಹಿನ್ನೆಲೆಯಲ್ಲಿ ಈತನೊಂದಿಗೆ ಯೋಗೀಶ್ ನಿತಿನ್ ಎಂಬವರನ್ನು ಬಂಧಿಸಲಾಗಿದೆ.

ಪೊಲೀಸರು ಮಾಧ್ಯಮಕ್ಕೆ ನೀಡಿರುವ ಮಾಹಿತಿಯಂತೆ ಬಸ್ ಏಜೆಂಟ್ ರಾಜೇಶ್ ಮತ್ತು ದೇವು ಎಂಬುವರು ಪ್ರಮುಖ ಆರೋಪಿಗಳಾಗಿದ್ದು ಅವರು ತಲೆ ಮರೆಸಿಕೊಂಡಿದ್ದಾರೆ. (ಈ ವರದಿ ಬರೆಯುವ ಸಮಯಕ್ಕೆ) ಶರಣ್ ಪಂಪ್ ವೆಲ್ ಎಂಬ ವ್ಯಕ್ತಿಯ ಪಾತ್ರ ನಿಸ್ಸಂದೇಹವಾಗಿರುವುದನ್ನು ಗುರುತಿಸಿರುವ ಪೊಲೀಸರು ಈ ವ್ಯಕ್ತಿಯನ್ನು ಮಂಗಳೂರಿನಲ್ಲಿ ಬಂಧಿಸುವ ಕೆಲವೇ ಕೆಲವು ತಾಸುಗಳ ಮೊದಲು ಇತರ ಕೆಲವು ಸಂಘ ಪರಿವಾರದ ವ್ಯಕ್ತಿಗಳೊಂದಿಗೆ ಪತ್ರಿಕಾ ಗೋಷ್ಠಿಯನ್ನು ನಡೆಸಿದ ಮಹಾ ಚಾಣಾಕ್ಷ. ಕೊಲೆಯಾದ ದಿನದಲ್ಲೂ ಈತ ಮಂಗಳೂರಿನಲ್ಲಿ ಭಯೋತ್ಪಾದನೆಯ ವಿರುದ್ಧದ ವಾಹನ ಪ್ರಚಾರ ಜಾಥಾದಲ್ಲಿ ಭಾಗವಹಿಸಿ ಭಾಷಣ ಮಾಡುತ್ತಿದ್ದ ಮಹಾ ಭಯೋತ್ಪಾದಕ. ಸದ್ಯಕ್ಕೆ ಮಂಗಳೂರಿನಲ್ಲಿ ಶರಣ್ ಪಂಪ್‌ವೆಲ್ ಸೇರಿದಂತೆ ಅದರ ಸಂಘಟನೆಗಳನ್ನು ಭಯೋತ್ಪಾದಕರೆಂದೇ ಭಯದಿಂದ ಕಾಣುತ್ತಿದ್ದಾರೆ. ಕೆ.ಎಫ್.ಡಿ.ಯಂತಹ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳನ್ನು ಸಾಮಾನ್ಯ ಜನತೆ ಯಾವ ದೃಷ್ಟಿಯಿಂದ ನೋಡುತ್ತಾರೋ ಅದೇ ರೀತಿಯ ಮನೋಭಾವದಿಂದ ಸಂಘ ಪರಿವಾರದ ಸಂಘಟನೆಗಳನ್ನು ಮತ್ತು ಅದರ ಮುಖಂಡರನ್ನು ಕಾಣುತ್ತಿದ್ದಾರೆ. ಭಯೋತ್ಪಾದನೆಯ ವಿರುದ್ಧ ಜನಜಾಗೃತಿ ಸಮಾವೇಶದ ಸಹ ಸಂಚಾಲಕ ಎಂದು ಲಕ್ಷಾಂತರ ಸಂಖ್ಯೆಯಲ್ಲಿ ಕರಪತ್ರದಲ್ಲಿ ಹೆಸರು ಅಚ್ಚಾಗಿಸಲ್ಪಟ್ಟ ಶರಣ್ ಪಂಪ್‌ವೆಲ್ ಈಗ ಕೊಲೆಪಾತಕಿಯಾಗಿ ಬಂಧನದಲ್ಲಿರುವಾಗಲೇ ಮಾಜಿ ಶಾಸಕ ಸಿ.ಟಿ.ರವಿಯುವರು ಈ ಸಂಘಟನೆಯ ಪ್ರತಿಭಟನಾ ಸಭೆಯಲ್ಲಿ ಸೋಮವಾರ (25) ಭಾಷಣ ಮಾಡುತ್ತಾ ಪ್ರತಿಮನೆ ಮನೆಯತ್ತ ಭಯೋತ್ಪಾದಕರು ಬರುತ್ತಿದ್ದಾರೆ ಎಂದು ಅಬ್ಬರಿಸಿದ್ದಾರೆ.

ಪೂರ್ವ ಯೋಜನೆ?

ಸಂಘಪರಿವಾರದ ಉನ್ನತ ನಾಯಕರೇ ಭಾರೀ ಪೂರ್ವ ಯೋಜನೆ ಮಾಡಿ ಆ ಪ್ಲ್ಯಾನನ್ನು ಜಾರಿಗೊಳಿಸುತ್ತಿರುವಾಗಲೇ ಈ ಶರಣ್ ಪಂಪ್‌ವೆಲ್ ನಿರಪರಾಧಿ ಎಂದು ಬಿಂಬಿಸಿ ವಾದ ಮಾಡಲು ಪೂರಕವಾಗುವಂತೆ ರಾಷ್ಟ್ರ ರಕ್ಷಣಾ ವೇದಿಕೆ ಎಂಬ ಸಂಘಟನೆಯನ್ನು ಹುಟ್ಟುಹಾಕಿ, ಲಕ್ಷಾಂತರ ಕರಪತ್ರ ವಿತರಣೆ ಮಾಡಿಸುವುದು, ನೂರಾರು ಸಭೆಗಳಲ್ಲಿ ಈ ಶರಣ್ ಪಂಪ್‌ವೆಲ್ ನಿಂದಲೇ ಭಾಷಣ ಮಾಡಿಸುತ್ತಿರುವುದು ಅನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಭಾಷಣ ಮಾಡಿಸಿದುದೆಲ್ಲವುಗಳನ್ನು ಗಮನಿಸಿದರೆ ಮಹಾ ಯೋಜನೆಯನ್ನು ಸಂಘಪರಿವಾರ ರೂಪಿಸಿದೆ ಎಂದು ತಿಳಿದುಬರುತ್ತದೆ. ಪೊಲೀಸರು ಮತ್ತೆ ಮತ್ತೆ ಪೂರ್ವ ದ್ವೇಷ ಎಂದು ಹೇಳಿ ತನಿಖೆಯ ಹಾದಿ ತಪ್ಪಿಸುತ್ತಿರುವ ಕಾರಣ ಸಂಘ ಪರಿವಾರದ ಉನ್ನತ ವ್ಯಕ್ತಿಗಳೆಲ್ಲರೂ ಪಾತ್ರವಹಿಸಿರುವ ಕಾರಣ ಸಿಬಿಐ ತನಿಖೆ ಆಗತ್ಯವಿದೆ ಎಂದು ಜನರಾಡಿಕೊಳ್ಳುತ್ತಿದ್ದಾರೆ.

■ ಕೆ.ಕೆ. ಮಂಗಳೂರು

ಕ್ವಿಟ್ ಇಂಡಿಯಾ ಚಳುವಳಿಯ ವೀರರ ಹುತಾತ್ಮ ಸ್ತಂಭ ಸಂರಕ್ಷಣೆಗೆ ಒತ್ತಾಯ

1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಚಳುವಳಿ ನಡೆಸುತ್ತಿದ್ದ ವೇಳೆ ಬ್ರಿಟಿಷರ ಗೋಲಿಬಾರ್‌ಗೆ ನಾಲ್ವರು ಬಲಿಯಾಗಿದ್ದರು. ಇದರ ಸ್ಮರಣಾರ್ಥವಾಗಿ 1972ರಲ್ಲಿ ಪುರಾತತ್ವ ಇಲಾಖೆ ಹುತಾತ್ಮರಾದ ಗುಂಡಪ್ಪ, ಶ್ಯಾಮಣ್ಣ ಬಿನ್ ಬೇಟೆರಂಗಪ್ಪ, ಪ್ರಹ್ಲಾದ್‌ಕುಮಾರ್ ಹಾಗೂ ತಿರುಮಲಯ್ಯ ಇವರುಗಳ ಹೆಸರಿನಲ್ಲಿ ಹುತಾತ್ಮ ಸ್ತಂಭವನ್ನು ಸ್ಥಾಪಿಸಿತ್ತು. ಆದರೆ ಅನಧಿಕೃತವಾಗಿ ತಲೆ ಎತ್ತಿದ ದೇವಸ್ಥಾನ ಈ ಜಾಗವನ್ನು ಅತಿಕ್ರಮಣ ಮಾಡಿದೆ.

ಇದನ್ನು ಸಂರಕ್ಷಿಸಲು ವಿಫಲವಾಗಿರುವ ಮಹಾನಗರ ಪಾಲಿಕೆಯ ಬೇಜವಾಬ್ದಾರಿತನ ಖಂಡಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಎಸ್‌ಎಫ್‌ಐ- ಡಿವೈಎಫ್‌ಐ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಎಸ್. ದೊರೆಸ್ವಾಮಿಯವರು ದೇಶಕ್ಕಾಗಿ ಪ್ರಾಣ ಕೊಟ್ಟವರ ಸ್ತಂಭ ಉಳಿಸಲು ಹೋರಾಟ ಮಾಡಬೇಕಿರುವ ಪರಿಸ್ಥಿತಿ ಬಂದಿರುವುದು ದುರದೃಷ್ಟಕರ. 10 ವರ್ಷಗಳ ಹಿಂದೆ ಈ ವಿಷಯದಲ್ಲಿ ಪ್ರತಿಭಟನೆ ನಡೆಸಿದ್ದೆವು. ಆದರೆ ಮಹಾನಗರ ಪಾಲಿಕೆ ನಿರ್ಲಕ್ಷ್ಯ ವಹಿಸಿರುವುದು ಅಕ್ಷಮ್ಯ. ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಚಿಂತಕ ಡಾ: ಜಿ.ರಾಮಕೃಷ್ಣ ಮಾತನಾಡಿ ದೇವಸ್ಥಾನ ಮಂಡಳಿಯ ಅತಿಕ್ರಮ ಪ್ರವೇಶ ಅಕ್ಷಮ್ಯ ಅಪರಾಧ, ನಿಜವಾಗಿಯೂ ಮಂಡಳಿಯವರಿಗೆ ದೇವರ ಭಕ್ತಿ ಇದ್ದಲ್ಲಿ ಮೊದಲು ಹುತಾತ್ಮ ಸ್ತಂಭವನ್ನು ಉಳಿಸುವ ಕಾರ್ಯ ಮಾಡಲಿ ಎಂದು ಹೇಳಿದರು.



ಪ್ರತಿಭಟನೆಯ ದೃಶ್ಯ



ಸ್ಮಾರಕ - ಕಬಳಿಸುತ್ತಿರುವ ದೇವಾಲಯ ಕಟ್ಟಡ ವೀಕ್ಷಿಸುತ್ತಿರುವ ಪ್ರಮುಖರು

ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಸ್ವಾತಂತ್ರ್ಯದ ಪ್ರತಿಫಲ ಅನುಭವಿಸುತ್ತಿರುವ ರಾಜಕೀಯ ಪಕ್ಷಗಳಿಗೆ ಹುತಾತ್ಮ ಸ್ತಂಭಕ್ಕೆ ಕನಿಷ್ಠ ಗೌರವ ತೋರಿಸುವ ಸೌಜನ್ಯ ಇಲ್ಲದಿರುವುದು ದುರದೃಷ್ಟಕರ. ದೇವಸ್ಥಾನ ಮಂಡಳಿಯವರು ಈ ಕೂಡಲೇ ಅತಿಕ್ರಮಿಸಿರುವ ಜಾಗವನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ವಿಶೇಷ ಜಿಲ್ಲಾಧಿಕಾರಿಗಳು ಆಗಮಿಸಿ ಮನವಿ ಪತ್ರ ಸ್ವೀಕರಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸತ್ಯವ್ರತ, ಸಿಪಿಐ(ಎಂ) ಮುಖಂಡರಾದ ಮಾರುತಿ ಮಾನ್ಪಡೆ, ಎಸ್.ವೈ.ಗುರುಶಾಂತ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್ ಮತ್ತಿತರು ಪಾಲ್ಗೊಂಡು ಮಾತನಾಡಿದರು.

ಬೇಡಿಕೆಗಳು

1. ದೇವಸ್ಥಾನ ಮಂಡಳಿಯ ಅತಿಕ್ರಮ ಪ್ರವೇಶವನ್ನು ತಡೆಗಟ್ಟಬೇಕು.
2. ಹುತಾತ್ಮ ಸ್ತಂಭವನ್ನು ಸಂರಕ್ಷಿಸಿ ಸ್ಮಾರಕ ನಿರ್ಮಿಸಬೇಕು.
3. ಮೈಸೂರು ಬ್ಯಾಂಕ್ ವೃತ್ತಕ್ಕೆ 'ಹುತಾತ್ಮ ಚೌಕ' ಎಂದು ಹೆಸರಿಡಬೇಕು.

ಈ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಲು ಮಹಾನಗರಪಾಲಿಕೆ ಮುಂದಾಗಲು ಒಂದು ವಾರದ ಗಡುವು ನೀಡಲಾಯಿತು. ಇದೇ ಸಂದರ್ಭದಲ್ಲಿ ಈ ಹೋರಾಟವನ್ನು ಮುಂದುವರೆಸಲು 'ಹುತಾತ್ಮ ಸ್ತಂಭ ಉಳಿಸಿ ಹೋರಾಟ ಸಮಿತಿ' ರಚಿಸಲಾಯಿತು.

ಸಮಿತಿಯ ಗೌರವಾಧ್ಯಕ್ಷರಾಗಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಎಸ್. ದೊರೆಸ್ವಾಮಿ, ಸತ್ಯವ್ರತ, ಕಾರ್ಯಾಧ್ಯಕ್ಷರಾಗಿ ಡಾ: ಜಿ.ರಾಮಕೃಷ್ಣ, ಸಂಚಾಲಕರಾಗಿ ಲಿಂಗರಾಜು, ಪ್ರಸಾದ್, ಸಲಹೆಗಾರರಾಗಿ ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿ, ಎಸ್.ವೈ.ಗುರುಶಾಂತ್, ಕೆ.ಮಹಾಂತೇಶ್ ಆಯ್ಕೆಯಾಗಿದ್ದಾರೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ನರಳುತ್ತಿರುವ ಭಾರತದ ಉಪೇಕ್ಷೆ

ರೈತರ ಭೀಕರ ಆತ್ಮ ಹತ್ಯೆಗಳು, ಬಡವ-ಶ್ರೀಮಂತರ ನಡುವೆ ಹೆಚ್ಚುತ್ತಿರುವ ಕಂದರ ಇಂತಹ ಸಮಸ್ಯೆಗಳ ಪ್ರಸ್ತಾವನ್ನಾದರೂ ಮಾಡಬಾರದೇ ರಾಷ್ಟ್ರಪತಿಗಳ ಭಾಷಣ?



ರಾಷ್ಟ್ರಾಧ್ಯಕ್ಷರಾದ ಪ್ರತಿಭಾ ದೇವಿಸಿಂಗ್ ಪಾಟೀಲ್ ಸಂಸತ್ತಿನ ಬಜೆಟ್ ಅಧಿವೇಶನವನ್ನು ಉದ್ದೇಶಿಸಿ ತನ್ನ ಮೊದಲ ಭಾಷಣ ಮಾಡಿದ್ದಾರೆ. ಇದು ಯುಪಿಎ ಸರಕಾರದ ಅಂತಿಮ ಬಜೆಟಿನ ಸಂದರ್ಭದಲ್ಲಿ ಬಂದಿದ್ದುದರಿಂದ ಸರಕಾರ ಆರ್ಥಿಕ ಕಾರ್ಯನಿರ್ವಹಣೆಯಲ್ಲಿ ಏನೇನೆಲ್ಲಾ ಸಾಧಿಸಿದೆ ಎಂಬುದನ್ನು ಪಟ್ಟಿ ಮಾಡಿದ್ದು ನಿರೀಕ್ಷಿತವೇ. ಆದರೂ ಹೀಗೆ ಮಾಡುವಾಗ ದೇಶದ ಆರ್ಥಿಕ ಪರಿಸ್ಥಿತಿಯ ಒಂದು ವಾಸ್ತವಿಕ ವಸ್ತುನಿಷ್ಟ ಚಿತ್ರವಂತೂ ಬಂದಿಲ್ಲ. ಬದಲಿಗೆ ಈ 'ಸಾಧನೆಗಳು' ಮತ್ತು ಕ್ರಮಗಳ ಪಟ್ಟಿಯ ಮೂಲಕ 'ನನ್ನ ಸರಕಾರ ಕೈಗೊಂಡ ಕ್ರಮಗಳಿಂದ ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಗೆ ಅಗತ್ಯವಾದ ಪರಿಕರ ಸೃಷ್ಟಿಯಾಗಿದೆ' ಎಂದು ಅವರು ಹೇಳಿದ್ದಾರೆ.

ಬೆಳೆಯುತ್ತಿರುವ ಕಂದರವನ್ನು ಗಮನಿಸಲೂ ಇಲ್ಲ

ಯುಪಿಎ ಸರಕಾರ ಮುಂದಿನ ಚುನಾವಣೆಯ ಮೊದಲ ಈ ಅಂತಿಮ ವರ್ಷವನ್ನು 'ಹೊಳೆಯುವ' ಮತ್ತು 'ನರಳುವ' ಭಾರತಗಳ ನಡುವಿನ ಕಂದರವನ್ನು ಮುಚ್ಚಲು ಪ್ರಯತ್ನಿಸುತ್ತದೆ, ರಾಷ್ಟ್ರಪತಿಗಳ ಭಾಷಣ ಅದನ್ನು ಬಿಂಬಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ದುರದೃಷ್ಟವಶಾತ್, ಈ ಬೆಳೆಯುತ್ತಿರುವ ಕಂದರವನ್ನು ಈ ಭಾಷಣ ಗುರುತಿಸಲೂ ಇಲ್ಲ. 'ಇತಿಹಾಸದಲ್ಲಿ ಮೊದಲ ಬಾರಿಗೆ ಭಾರತದ ಆರ್ಥಿಕ ಸತತ ನಾಲ್ಕು ವರ್ಷ ವಾರ್ಷಿಕ 9 ಶೇಕಡಾದಷ್ಟು ಬೆಳೆದಿದೆ' ಎಂದಿರುವ ಭಾಷಣ ಈ ನಮ್ಮ ಭಾರತದಲ್ಲಿಯೇ ಪ್ರತಿ ಮೂವತ್ತು ನಿಮಿಷಕ್ಕೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾನೆ, ದೇಶದ 78ಶೇಕಡಾ ಮಂದಿ ದಿನಕ್ಕೆ 20ರೂ. ಆದಾಯದಲ್ಲಿ ಬದುಕು ಸಾಗಿಸಬೇಕಾಗಿದೆ ಎಂಬುದನ್ನು ಹೇಳುವುದೇ ಇಲ್ಲ.

ಕಳೆದ ನಾಲ್ಕು ವರ್ಷಗಳ ಆರ್ಥಿಕ ನಿರ್ವಹಣೆಯು ಈ 'ವಾಸ್ತವತೆಯನ್ನು ಉಪೇಕ್ಷಿಸುವಂತಿಲ್ಲ. ಶೇರು ಸೂಚ್ಯಂಕದ ನಾಗಾಲೋಟ, ಅಭೂತಪೂರ್ವ ವಿದೇಶಿ ವಿನಿಮಯ ಭಂಡಾರ, 34 ಶೇ. ಮೀರಿದ ಉನ್ನತ ಹೂಡಿಕೆ ಮತ್ತು ಉಳಿತಾಯ ದರಗಳು, 48 ಅಮೆರಿಕನ್ ಡಾಲರ್ ಬಿಲಿಯಾಧಿಪತಿಗಳ ಉದಯ ಮುಂತಾದ 'ಹೊಳೆಯುವ' ಭಾರತದ ಲಕ್ಷಣಗಳನ್ನು ಎತ್ತಿ ಹೇಳುವ ರಾಷ್ಟ್ರಪತಿಗಳ ಭಾಷಣ 'ನರಳುವ' ಭಾರತದ ಸಂಕಟಗಳನ್ನು ಗುರುತಿಸುವುದೂ ಇಲ್ಲ. ಸತತ ಬೆಲೆಯೇರಿಕೆ, ಅದರಲ್ಲೂ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ ಜನಗಳ ಜೀವನ ಮಟ್ಟವನ್ನು ಇನ್ನಷ್ಟು ಇಳಿಸುತ್ತಿದ್ದರೂ ಅದರ ಪ್ರಸ್ತಾಪವೇ ಇಲ್ಲ.

ರೈತರ ಆತ್ಮಹತ್ಯೆ ಪ್ರಸ್ತಾಪವೂ ಇಲ್ಲ

ಸಾಧನೆಗಳ ಗೀಳು ಎಷ್ಟಿದೆಯೆಂದರೆ ಭಾರತೀಯ ಕೃಷಿ ವಲಯದಲ್ಲಿನ ಬಿಕ್ಕಟ್ಟಿನ, ರೈತರ ಆತ್ಮಹತ್ಯೆಗಳ ಪ್ರಸ್ತಾಪವೂ ಇಲ್ಲ. ಕೃಷಿ ಸಾಲಗಳ ಹರಿವು ಸಾಕಷ್ಟು ಹೆಚ್ಚಿದೆಯೆಮದು ಹೇಳಿಕೊಂಡರೂ, ಈಗಲೂ ಮೂರನೆ ಎರಡರಷ್ಟು ರೈತರು ಖಾಸಗೀ ಲೇವಾದೇವಿಗಾರರ ಮರ್ಜಿಗೆ ಒಳಗಾಗಿದ್ದಾರೆ, ಅವರ ವಿಪರೀತ ಬಡ್ಡಿಗಳಿಂದ ನರಳುತ್ತಿದ್ದಾರೆಂಬ ಬಗ್ಗೆ ಕುರುಡಾಗಲು ಸಾಧ್ಯವೇ? ಈ ಸಾಲಹೊರೆಯೇ ರೈತರ ಆತ್ಮಹತ್ಯೆಗಳಿಗೆ ಪ್ರಾಥಮಿಕ ಕಾರಣ. ಭಾರತದ ಆಹಾರ ಭದ್ರತೆಗೆ ಹೆಚ್ಚೆಚ್ಚು ಬೆದರಿಕೆ ಬರುತ್ತಿದೆ ಎಂಬ ಬಗ್ಗೆಯೂ ಪ್ರಸ್ತಾಪವಿಲ್ಲ. ಆಹಾರಧಾನ್ಯಗಳ ವಿಷಯದಲ್ಲಿ ಸ್ವಾವಲಂಬಿಗಳಾಗಿದ್ದೇವೆ ಎಂದು ದಶಕಗಳಿಂದ ಹೇಳಿಕೊಂಡು ಬಂದ ನಾವು ಕಳೆದ ವರ್ಷ 50ಲಕ್ಷ ಟನ್ ಗೋಧಿ ಆಮದು ಮಾಡಿಕೊಳ್ಳಬೇಕಾಯಿತು. ಆದರೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬುಡಮೇಲು ಮಾಡುವ ಕೆಲಸ ಮುಂದುವರೆಯುತ್ತಲೇ ಇದೆ, ರಾಜ್ಯಗಳಿಗೆ ಆಹಾರ ಧಾನ್ಯಗಳ ವರ್ಗಾವಣೆಯ ಪ್ರಮಾಣದಲ್ಲಿ ವಿಪರೀತ ಕಡಿತ ಮಾಡಲಾಗುತ್ತಿದೆ. ಇವೆಲ್ಲ ನರಳುತ್ತಿರುವ ಭಾರತದ ವಿಶಾಲ ಜನಸಮೂಹಗಳ ಜೀವನ ಪರಿಸ್ಥಿತಿ ಇನ್ನಷ್ಟು ದುರ್ಭರಗೊಳ್ಳುತ್ತಿರುವುದರ ಲಕ್ಷಣಗಳು.

ಎಲ್ಲರನ್ನೂ 'ಒಳಗೊಳ್ಳುವ ಬೆಳವಣಿಗೆ'ಗೆ 'ಒಳಗೊಳ್ಳುವ ಆಡಳಿತ'ವೂ ಬೇಕು ಎನ್ನುವ ರಾಷ್ಟ್ರಪತಿಗಳು ಉದ್ಯೋಗಾವಕಾಶ ನಿರ್ಮಾಣ, ಶಿಕ್ಷಣ, ಆರೋಗ್ಯ ಮುಂತಾದ ಪ್ರಮುಖ ವಲಯಗಳಲ್ಲಿ ವಿವಿಧ ಜನವಿಭಾಗಗಳಿಗೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದಿದ್ದಾರೆ. 'ಅರ್ಧ ಆಕಾಶ ಮಹಿಳೆಯರದ್ದು' ಎಂಬ ಪ್ರಸಿದ್ಧ ವಾಕ್ಯವನ್ನು ಅವರು ಉದ್ಧರಿಸಿದರೂ ಮಹಿಳಾ ಮೀಸಲಾತಿ ಮಸೂದೆಯ ಪ್ರಸ್ತಾಪ ಕೂಡಾ ಇಲ್ಲ. ಯುಪಿಎ ಯ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಆದಷ್ಟು ಬೇಗನೇ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಈ ಮಸೂದೆಯನ್ನು ಶಾಸನವಾಗಿಸುವ ಭರವಸೆ ನೀಡಿತ್ತು. ತನ್ನ ಅಧಿಕಾರದ ಈ ಕೊನೆಯ ವರ್ಷದಲ್ಲಾದರೂ ಇದನ್ನು ಸಂಸತ್ತು ಅಂಗೀಕರಿಸುವಂತೆ ಅದು ಮಾಡುತ್ತದೆ ಎಂಬುದು ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆಯಾಗಿತ್ತು.

ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಹನ್ನೊಂದನೆ ಪಂಚವಾರ್ಷಿಕ ಯೋಜನೆಯ ಗುರಿಗಳನ್ನು ರಾಷ್ಟ್ರಪತಿಗಳು ಪಟ್ಟಿ ಮಾಡಿದ್ದಾರೆ. ಆದರೆ ಇವು ಮುಂದಿನ ಐದು ವರ್ಷಗಳಲ್ಲಿ ಆಗಬಹುದಾದವುಗಳು, ತಕ್ಷಣದ ಪರಿಹಾರಗಳಲ್ಲ ಎಂಬುದನ್ನು ಅವರು ನೆನಪಿಸಿಲ್ಲ.

ರಾಷ್ಟ್ರಪತಿಗಳು ಇನ್ನೂ ಹಲವಾರು ವಿಷಯಗಳ ಪ್ರಸ್ತಾವ ಮಾಡುತ್ತಾ ಹವಾಮಾನ ಬದಲಾವಣೆಯಿಂದ ಹಿಡಿದು ದೂರಸಂಪರ್ಕದ ವರೆಗೆ, ಸಶಸ್ತ್ರ ಪಡೆಗಳು, ವಿದೇಶಾಂಗ ನೀತಿಯ ಬಗ್ಗೆ ಹೇಳುತ್ತಾ 'ಅಮೆರಿಕ ಮತ್ತು ಇತರ ಮಿತ್ರ ದೇಶಗಳೊಂದಿಗೆ ನಾಗರಿಕ ಪರಮಾಣು ಸಹಕಾರ ಸಾಧ್ಯವಾಗುತ್ತದೆ ಎಂಬುದು ನಮ್ಮ ನಿರೀಕ್ಷೆ' ಎಂದಿದ್ದಾರೆ. ಅವರ ಭಾಷಣದ ಒಟ್ಟಾರೆ ದನಿಯನ್ನು ಕೇಳಿದ ಮೇಲೆ ಈ ಭಾಷಣ ಸರಕಾರದ ಸಾಧನೆಗಳ, ವಿಫಲತೆಗಳ ಪರಾಮರ್ಶೆಗಿಂತ ಹೆಚ್ಚಾಗಿ ಮುಂದಿನ ಚುನಾವಣೆಗಳನ್ನೇ ಗಮನದಲ್ಲಿಟ್ಟುಕೊಂಡಂತಿದೆ ಎಂಬ ಊಹಾಪೋಹ ಎದ್ದಿದೆ. ಆದರೆ ಎಡಪಕ್ಷಗಳು ಭಾರತ - ಅಮೆರಿಕಾ ಪರಮಾಣು ವ್ಯವಹಾರವನ್ನು ಪರಿಶೀಲಿಸುವ ಸಮಿತಿಯಲ್ಲಿ ಚರ್ಚಿಸದೆ ಅದನ್ನು ಕಾರ್ಯರೂಪಕ್ಕೆ ತರಲು ಮುಂದಾಗಬಾರದು ಎಂದು ಪುನರುಚ್ಚರಿಸಿವೆ. ಅಲ್ಲದೆ ಯುಪಿಎ ಸರ್ಕಾರ ತನ್ನ ವಚನಗಳನ್ನು ಈಡೇರಿಸುವಂತೆ ಜನರ ಹೋರಾಟಗಳ ಮೂಲಕ ಹೆಚ್ಚಿನ ಒತ್ತಡ ತರಲಾಗುವುದು ಎಂದೂ ಪುನರುಚ್ಚರಿಸಿವೆ. ○

ಬಜೆಟ್ 2008-09 : ಶಿಕ್ಷಣಕ್ಕೆ ಹಲವೆಡೆ ಹಣ ಕಡಿತವಾಗಿರುವುದೇ ವಾಸ್ತವ!

ಕೇಂದ್ರ ಸರ್ಕಾರ 2008-09ರ ಬಜೆಟ್‌ನಲ್ಲಿ ಸಾಮಾಜಿಕ ವಲಯದಲ್ಲಿನ ಪ್ರಮುಖವಾದ ಶಿಕ್ಷಣ ಕ್ಷೇತ್ರಕ್ಕೆ ಅನ್ಯಾಯವನ್ನೇ ಮಾಡಿದೆ. ಕಳೆದ ವರ್ಷ ಒಟ್ಟು ಬಜೆಟ್‌ನಲ್ಲಿ (2007-08) ರೂ.28674 ಕೋಟಿ ನೀಡಲಾಗಿತ್ತು. ಪ್ರಸಕ್ತ ಬಜೆಟ್‌ನಲ್ಲಿ ರೂ.34,400 ಕೋಟಿ ನಿಗದಿ ಮಾಡುವ ಮೂಲಕ ಕಳೆದ ವರ್ಷದ ಬಜೆಟ್‌ಗಿಂತ ಹಣದಲ್ಲಿ ಶೇ.20ರಷ್ಟು ಏರಿಕೆಯಾಗಿದ್ದರೂ ಕಳೆದ ವರ್ಷದಷ್ಟೇ ಒಟ್ಟು ಬಜೆಟ್‌ನಲ್ಲಿ ಶೇ.4.58ರಷ್ಟನ್ನು ಈ ವರ್ಷವೂ ನೀಡಲಾಗಿದೆ. ಶೈಕ್ಷಣಿಕ ಸಮುದಾಯದ ಬಹಳ ದಿನಗಳ ಬೇಡಿಕೆಯಾಗಿರುವ, ಕೇಂದ್ರ ಬಜೆಟ್‌ನ ಶೇ.10 ಹಾಗೂ ಯು.ಪಿ.ಎ. ಸರ್ಕಾರದ ಆಶ್ವಾಸನೆಯಾದ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ)ಯ ಶೇ.6ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡುವುದನ್ನು ಮತ್ತೊಮ್ಮೆ ಮರೆ ಮಾಚಲಾಗಿದೆ. ಇತ್ತೀಚೆಗೆ ಆರ್ಥಿಕ ಸಮೀಕ್ಷೆಯನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಿದ ಪ್ರಕಾರ ಒಟ್ಟು ಜಿಡಿಪಿಯಲ್ಲಿ ಶೇ.2.84ರಷ್ಟು ಮಾತ್ರ 2007-08ರಲ್ಲಿ ಶಿಕ್ಷಣಕ್ಕೆ ಬಳಸಲಾಗಿದೆ.

ಹಣ ಸಾಲದು

ಬಿಸಿಯೂಟವನ್ನು ಮಾಧ್ಯಮಿಕ ಶಾಲೆಗಳಿಗೂ ವಿಸ್ತರಿಸಲಾಗುವುದು ಸ್ವಾಗತಾರ್ಹವಾಗಿದ್ದರೂ ವಿದ್ಯಾರ್ಥಿಗಳ ಸಂಖ್ಯೆಗಳ ಅನುಗುಣವಾಗಿ ಹಣ ನೀಡಿಲ್ಲ ಉದಾ : ಕಳೆದ ವರ್ಷ 11.4 ಕೋಟಿ ಮಕ್ಕಳಿಗೆ ರೂ.7324 ಕೋಟಿ ಹಣ ವಿನಿಯೋಗಿಸಲಾಗಿತ್ತು. 2008-09ರ ವರ್ಷದಲ್ಲಿ 13.9 ಕೋಟಿ ಮಕ್ಕಳಿಗೆ 8009 ಕೋಟಿ ಮಾತ್ರ ನಿಗದಿ ಮಾಡಲಾಗಿದೆ. ಇದರಿಂದಾಗಿ ಈ ಕೆಳಕಂಡ ರೀತಿಯಲ್ಲಿ ಬಿಸಿಯೂಟದ ಹಣ ಕಡಿತಗೊಂಡಿದೆ. ಕಳೆದ ವರ್ಷದಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.2.03 ಪೈಸೆ ವೆಚ್ಚವಾಗುತ್ತಿತ್ತು. ಈ ವರ್ಷ ಒಂದು ದಿನಕ್ಕೆ ಒಬ್ಬ ವಿದ್ಯಾರ್ಥಿಗೆ ರೂ.1.59 ಪೈಸೆಗೆ ಇಳಿಯಲಿದೆ. ಹೀಗಾಗಿ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಾಧ್ಯವಿಲ್ಲವಾಗಿದೆ.

ಹೊಸ ವಿ.ವಿ.ಗಳ ಸ್ಥಾಪನೆ ಹುಸಿಯಾಗುವ ಘೋಷಣೆ

16 ಕೇಂದ್ರಿಯ ವಿ.ವಿ.ಗಳ ಸ್ಥಾಪನೆ, 3 ಐಐಟಿ ಮತ್ತು 2 ಐಐಎಸ್‌ಇ.ಆರ್ ಸೇರಿದಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗುವುದೆಂದು ಘೋಷಿಸಲಾಗಿದೆಯೇ ಹೊರತು ಇವುಗಳ ಸ್ಥಾಪನೆಗೆ ಪೂರಕವಾಗಿ ಬಜೆಟ್‌ನಲ್ಲಿ ಹಣ ನಿಗದಿಗೊಳಿಸಿಲ್ಲ. ಇದರ ಅರ್ಥವೇನು? ಇನ್ನೊಂದೆಡೆ ವಿಶ್ವಬ್ಯಾಂಕ್ ನಿರ್ದೇಶನದಂತೆ ಐಟಿಐ ಕಾಲೇಜುಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಬಜೆಟ್‌ನಲ್ಲಿ ಹೇಳಲಾಗಿರುವಂತೆ 'ರಾಷ್ಟ್ರೀಯ ಜ್ಞಾನ ಆಯೋಗ'ದ ಶಿಫಾರಸ್ಸುಗಳನ್ನು ಜಾರಿಗೆ ತರಲು ಮುಂದಾಗಿ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವ ನೀತಿಗಳನ್ನು ಜಾರಿಗೆ ತರುವುದಾಗಿದೆ.

ರಾಜ್ಯದ ಮೈಸೂರು ವಿ.ವಿ.ಗೆ ರೂ.100 ಕೋಟಿ ನೀಡಿರುವುದು ಸ್ವಾಗತಾರ್ಹವಾದರೂ ಬಜೆಟ್‌ನಲ್ಲಿ ಪ್ರಸ್ತಾಪಿಸಿರುವಂತೆ ಹೊಸ ಕೇಂದ್ರೀಯ ವಿ.ವಿ.ಗಳನ್ನು ಬೆಂಗಳೂರು, ಗುಲ್ಬರ್ಗಾಗಳಲ್ಲಿ ಸ್ಥಾಪಿಸುವ ಮೂಲಕ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಬಹುದಿತ್ತು.

ಬಜೆಟ್‌ನಲ್ಲಿ ದಲಿತ- ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಕಡಿತ

ಉನ್ನತ ಶಿಕ್ಷಣದಲ್ಲಿ ಒ.ಬಿ.ಸಿಗಳಿಗೆ ಮೀಸಲಾತಿ ಜಾರಿಗೆ ತರುವುದು ಬಜೆಟ್‌ನಲ್ಲಿ ಸೂಚನೆ ಇದ್ದರೂ, ಮೀಸಲಾತಿ ನೀಡುವ ಕುರಿತು ವೀರಪ್ಪ ಮೊಯಿಲಿ ಅವರ ಸಮಿತಿ ನೀಡಿದ್ದ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿಲ್ಲವೆಂದು ಬಜೆಟ್‌ನಲ್ಲೇ ತೋರಿಸಲಾಗಿದೆ. ವೀರಪ್ಪ ಮೊಯಿಲಿ ಅಧ್ಯಕ್ಷತೆಯ ಸಮಿತಿ ಹೇಳಿದಂತೆ 2008-09ರ ವರ್ಷದಿಂದ ರೂ.3518.72 ಕೋಟಿಗಳ ಹಣಕಾಸಿನ ನೆರವು ನೀಡಿ, ಹಂತ-ಹಂತವಾಗಿ ಒಬಿಸಿಗಳಿಗೆ ಮೀಸಲಾತಿ ನೀಡಲು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೇ.54ರಷ್ಟು ಸೀಟುಗಳನ್ನು ಹೆಚ್ಚಿಸುವಂತೆ ಶಿಫಾರಸ್ಸು ಮಾಡಲಾಗಿತ್ತು. ಆದರೆ ಬಜೆಟ್‌ನಲ್ಲಿ ರೂ. 2522 ಕೋಟಿಗಳಷ್ಟನ್ನು ನಿಗದಿಗೊಳಿಸಿರುವುದನ್ನು ನೋಡಿದರೆ ಮೀಸಲಾತಿಯು ಜಾರಿಗೆ ತರುವ ಸರ್ಕಾರದ ನಿರ್ಧಾರಕ್ಕೆ ಆರ್ಥಿಕ ಬಲ ಸಾಲದಂತಾಗಿದೆ. ಜೊತೆಗೆ ನಿಗದಿ ಮಾಡಿರುವ ಹಣವು ಮೀಸಲಾತಿ ಜಾರಿಗೆ ತರಲು ಸಾಧ್ಯವಿಲ್ಲದಂತಾಗಿದೆ.

ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳು ಉನ್ನತ ಅಧ್ಯಯನಕ್ಕೆಂದು ರಾಜೀವ್ ಗಾಂಧಿ ಶಿಷ್ಯವೇತನದಡಿ ಕಳೆದ ವರ್ಷ 88 ಕೋಟಿ ನಿಗದಿ ಮಾಡಲಾಗಿತ್ತು. ಈ ಬಾರಿ 75 ಕೋಟಿಗೆ ಇಳಿಸಲಾಗಿದೆ. ಅಂದರೆ ರೂ.13 ಕೋಟಿಯನ್ನು ಕಡಿತಗೊಳಿಸಲಾಗಿದೆ. ಅದೇ ರೀತಿಯಲ್ಲಿ ಸಾಮಾನ್ಯ ಮತ್ತು ಪರಿಶಿಷ್ಠ ಜಾತಿ-ಪಂಗಡದ ವಿದ್ಯಾರ್ಥಿಗಳಿಗೆ ಪದವಿಪೂರ್ವ ನಂತರದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಕಳೆದ ವರ್ಷ 33.6 ಕೋಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂ.811 ಕೋಟಿ ನಿಗದಿಯಾಗಿತ್ತು. ಈ ಬಾರಿ 36.3 ಕೋಟಿ ವಿದ್ಯಾರ್ಥಿಗಳಿಗೆ 731 ಕೋಟಿ ನಿಗದಿಗೊಳಿಸಲಾಗಿದೆ. ಇಲ್ಲಿಯೂ ಕೂಡ ರೂ.80 ಕೋಟಿ ಕಡಿತಗೊಳಿಸಿರುವುದು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಣ ನಿಗದಿ ಯಾಗದಿರುವುದು ಬಡ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಕಡಿಗೊಳಿಸುವುದೇ ಆಗಿದೆ.

ಒಟ್ಟಾರೆ ಕೇಂದ್ರ ಸರ್ಕಾರ ತನ್ನ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ಕ್ಕೆ ಬದ್ಧವಾಗದೆ ಎಲ್ಲಾ ಹಂತದ ಬಡ ವಿದ್ಯಾರ್ಥಿಗಳನ್ನು ಇನ್ನಷ್ಟು ಶಿಕ್ಷಣದಿಂದ ವಂಚಿಸುವಂತಹ ಶಿಕ್ಷಣ ಖಾಸಗೀಕರಣಕ್ಕೆ ಆದ್ಯತೆ ನೀಡಲಾಗಿದೆ. ತನ್ನ ಕೊನೆಯ ಬಜೆಟ್‌ನಲ್ಲೂ ತಾನಾಡಿದಂತೆ ಕನಿಷ್ಠ ಆಶಯವನ್ನು ವ್ಯಕ್ತಪಡಿಸದೆ, ವಿಶ್ವಬ್ಯಾಂಕ್‌ನ ಕೈಗೊಂಬೆಯಾಗಿ ಜಾಗತೀಕರಣ ನೀತಿಗಳನ್ನು ಕೇಂದ್ರ ಸರ್ಕಾರ ಅನುಸರಿಸಿದೆ ಎಂಬುದಕ್ಕೆ ಬಜೆಟ್‌ನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿನ ಅಂಕಿ-ಅಂಶಗಳು ಸಾಕ್ಷೀಕರಿಸುತ್ತವೆ. ○

ಬಜೆಟ್ 2008-09

ಕೆಲವೊಂದು ಸ್ವಾಗತಾರ್ಹ ಕ್ರಮಗಳು ಜನರ ಸಮಸ್ಯೆಗಳಿಗೆ ಕೊಂಚ ಪರಿಹಾರವಿದ್ದರೂ ಬಜೆಟ್ ಅದೇ ಹಳೆಯ ಜಾಗತೀಕರಣದ ಜಾಡಿನಲ್ಲಿಯೇ ಇದೆ.



ಹತ್ತರಲ್ಲೊಂದೇ ಕನಸು ನನಸು

ಬಜೆಟ್ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳ ಭಾಷಣ ಹಾಗೂ ಸರಕಾರದ ಆರ್ಥಿಕ ಸರ್ವೇಕ್ಷಣೆ ನೋಡಿದ ಮೇಲೆ ಯುಪಿಎ ಸರಕಾರದ ಐದನೇ ಮತ್ತು ಕೊನೆಯ ಬಜೆಟಾದರೂ ದೇಶದ ವಾಸ್ತವ ಆರ್ಥಿಕ ಪರಿಸ್ಥಿತಿಗಳನ್ನು ಗಣನೆಗೆ ತಗೊಂಡೀತೇ ಎಂಬ ಬಗ್ಗೆ ಸಂದೇಹವಿತ್ತು. ಕೃಷಿ ಬಿಕ್ಕಟ್ಟು, ಬೆಲೆಯೇರಿಕೆ ಮತ್ತು ನಿರುದ್ಯೋಗದ ಗಂಭೀರ ಸಮಸ್ಯೆಗಳಿಗೆ ಜನ ಈ ಬಜೆಟಿನಲ್ಲಾದರೂ ಸ್ವಲ್ಪ ಪರಿಹಾರ ನಿರೀಕ್ಷಿಸುತ್ತಿದ್ದರು. ಈ ದಿಕ್ಕಿನಲ್ಲಿ ಫೆಬ್ರುವರಿ 29ರಂದು ಕೇಂದ್ರ ಹಣಕಾಸು ಮಂತ್ರಿಗಳು ಮಂಡಿಸಿದ 2008-09ರ ಬಜೆಟ್ ಕೆಲವು ಸಕಾರಾತ್ಮಕ ಕ್ರಮಗಳನ್ನು ಪ್ರಕಟಿಸಿದೆಯಾದರೂ ಜನಗಳ ಕಾಳಜಿಗಳನ್ನು, ಸಂಕಟಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಕಾಗುವಷ್ಟು ಕ್ರಮಗಳು ಇಲ್ಲವೆಂದೇ ಹೇಳಬೇಕು.

ಹಣಕಾಸು ಮಂತ್ರಿಗಳು ಈ ಬಜೆಟಿನಲ್ಲಿ ರೈತರ ಸಾಲದ ಹೊರೆಗೆ ಪ್ರಕಟಿಸಿರುವ ಪರಿಹಾರ ಬಹಳ ವಿಳಂಬದ ನಂತರವಾದರೂ ಬಂದಿರುವ ಒಂದು ಸ್ವಾಗತಾರ್ಹ ಕ್ರಮ. ಆದರೆ ಇದರಲ್ಲೂ ಬಹಳಷ್ಟು ನ್ಯೂನ್ಯತೆಗಳಿವೆ. ಮೊದಲನೆಯದಾಗಿ, ಒಣ ಪ್ರದೇಶಗಳಲ್ಲಿ ಸಣ್ಣ ಮತ್ತು ಅಂಚಿನಲ್ಲಿರುವ ರೈತರೂ 2 ಹೆಕ್ಟೇರುಗಳಿಗಿಂತ ಹೆಚ್ಚು ಜಮೀನು ಹೊಂದಿರುತ್ತಾರೆ. ಎರಡನೆಯದಾಗಿ, ಇದರಿಂದ ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆದ ರೈತರಿಗೂ ಏನೂ ಪರಿಹಾರ ಸಿಗದು. ಒಟ್ಟು ಕೃಷಿ ಸಾಲದ ಮೂರನೆ ಎರಡರಷ್ಟು ಇಂತಹ ಸಾಲಗಳೇ ಎಂಬುದನ್ನು ಗಮನಿಸಬೇಕು. ರೈತರ ಬಗ್ಗೆ ಬಹಳ ಮಾತಾಡಿದರೂ ಕೃಷಿಯ ಬಾಬ್ತು ಯೋಜನಾ ವೆಚ್ಚದಲ್ಲಿ ಪ್ರಕಟಿಸಿದ ಹೆಚ್ಚಳ ಅದಕ್ಕೆ ಆ ಮಾತಿನ ಅಬ್ಬರಕ್ಕೆ ಅನುಗುಣವಾಗಿಲ್ಲ. ವಾಸ್ತವವಾಗಿ



ನೀರಾವರಿಗೆ ನೀಡಿರುವ ಹಣ ಕಳೆದ ವರ್ಷದ ಬಜೆಟಿಗಿಂತಲೂ ಕಡಿಮೆ.

ಬೆಲೆ ಏರಿಕೆ, ಆಹಾರ ಭದ್ರತೆ ಕಡೆಗೆ ಗಮನವಿಲ್ಲ

ಆಹಾರ ಸಬ್ಸಿಡಿ ಕಳೆದ ವರ್ಷದ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಕೇವಲ 3.5ಶೇ.ಹೆಚ್ಚಿದೆ. ಇದು ಆಹಾರ ಮತ್ತು ಇಂಧನ ಬೆಲೆಯೇರಿಕೆಗಳನ್ನು, ಒಟ್ಟಾರೆಯಾಗಿ ಆರ್ಥಿಕದಲ್ಲಿನ ಹಣದುಬ್ಬರದ ಪ್ರವೃತ್ತಿಯನ್ನು ಎದುರಿಸಲು ಏನೇನೂ ಸಾಲದು. ಏಕೆಂದರೆ ಹಣದುಬ್ಬರ ದರ 6ಶೇ. ಆಗಬಹುದು ಎಂಬುದು ಈ ಬಜೆಟ್ ಅನುಮಾನ. ಆಹಾರ ಪದಾರ್ಥಗಳ ಬೆಲೆಯೇರಿಕೆಗಳಿಂದ ಜನಗಳಿಗೆ ರಕ್ಷಣೆ ಕೊಡಲು ಪಡಿತರ ವ್ಯವಸ್ಥೆಯನ್ನು ವಿಸ್ತರಿಸುವ ಯೋಚನೆ ಸರಕಾರಕ್ಕೆ ಇದ್ದಂತಿಲ್ಲ. ಅಬಕಾರಿ ಸುಂಕಗಳನ್ನು ಪುನರ್‌ರಚಿಸಿದಂತೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕಸ್ಟಮ್ಸ್ ಸುಂಕಗಳನ್ನು ಪುನರ್‌ರಚಿಸಿದ್ದರೆ ಪೆಟ್ರೋಲಿಯಂ ಮತ್ತು ಡೀಸೆಲ್ ಬೆಲೆಗಳನ್ನಿ ಇಳಿಸಬಹುದಿತ್ತು. ಆದರೆ ಹಾಗೆ ಮಾಡಿಲ್ಲ.

ಅಗತ್ಯ - ಅನಗತ್ಯ ಕ್ರಮಗಳು

ಚಿದಂಬರಂ ಮಧ್ಯಮ ವರ್ಗಗಳ ಜನರಿಗೆ ಆದಾಯ ತೆರಿಗೆಗಳಲ್ಲಿ ಪರಿಹಾರ ನೀಡಿದ್ದಾರೆ. ಇದೊಂದು ಸಕಾರಾತ್ಮಕ ಹೆಜ್ಜೆ. ಇನ್ನೊಂದೆಡೆ, ಅಲ್ಪಾವಧಿ ಬಂಡವಾಳ ಲಾಭದ ಮೇಲೆ ತೆರಿಗೆ. ದರವನ್ನು 10 ಶೇ.ದಿಂದ 15ಶೇ. ಕ್ಕೆ ಏರಿಸಲಾಗಿದೆ ಹಾಗೂ ಹೊಸದಾಗಿ ಸರಕು ವ್ಯವಹಾರ ತೆರಿಗೆ ಆರಂಭಿಸಲಾಗಿದೆ. ಇದು ಕೂಡಾ ಸ್ವಾಗತಾರ್ಹ. ಆದರೆ ಇವನ್ನೆಲ್ಲಾ ಅಳಿಸಿ ಬಿಡುವಂತೆ ದೊಡ್ಡ ಬಂಡವಳಿಗರಿಗೆ ಹಲವಾರು ರಿಯಾಯ್ತಿಗಳನ್ನು ನೀಡಲಾಗಿದೆ. ಉದಾ: ಕೇಂದ್ರ ಸರಕಾರದ ವ್ಯಾಟ್ ದರವನ್ನು 16 ಶೇ. ದಿಂದ 14ಶೇ. ಕ್ಕೆ ಇಳಿಸಿದ್ದು, ಖಾಸಗಿ ಹೋಟೇಲುಗಳಿಗೆ ತೆರಿಗೆ ರಜಾದಂತಹ ಅನಗತ್ಯ ಕ್ರಮಗಳು.

ಇನ್ನೊಂದು ಆತಂಕದ ಸಂಗತಿಯೆಂದರೆ ವಿಶ್ವ ಆರ್ಥಿಕ ಇಳಿಮುಖಗೊಳ್ಳುವ ಲಕ್ಷಣಗಳು ಕಾಣುತ್ತಿದ್ದು, ಡಾಲರಿಗೆ ಎದುರಾಗಿ ರೂಪಾಯಿ ಮೌಲ್ಯ ಏರಿರುವುದರಿಂದ ನಮ್ಮ ದೇಶದ ಬೆಳವಣಿಗೆ ಮತ್ತು ಉದ್ಯೋಗವಕಾಶ ನಿರ್ಮಾಣಕ್ಕೆ ಪ್ರತಿಕೂಲ ಪರಿಣಾಮ ಉಂಟಾಗಿರುವ ಸಂದರ್ಭದಲ್ಲಿ ಬಜೆಟ್ ದೇಶದ ಆರ್ಥಿಕಕ್ಕೆ ಉತ್ತೇಜನೆ ಒದಗಿಸುವ ಕ್ರಮಗಳನ್ನು ರೂಪಿಸಬೇಕಾಗಿತ್ತು. ಆದರೆ ಅದನ್ನು ಮಾಡುವಲ್ಲಿ ಈ ಬಜೆಟ್ ವಿಫಲವಾಗಿದೆ. ತೆರಿಗೆ ರೆವಿನ್ಯೂ 2007-08ರಲ್ಲಿ 17.5ಶೇ. ದಷ್ಟು ಹೆಚ್ಚುತ್ತದೆ ಎಂಬುದು ಹಣಕಾಸು ಮಂತ್ರಿಗಳ ಪರಿಷ್ಕೃತ ಅಂದಾಜು. ಆದರೆ ನಿವ್ವಳ ರೆವಿನ್ಯೂ ಖರ್ಚು 12.2ಶೇ. ಎಂದೂ ಬಂಡವಾಳ ಖರ್ಚು ಕೇವಲ 8.8ಶೇ. ಎಂದೂ ಬಜೆಟ್ ಹೇಳುತ್ತದೆ. ತೆರಿಗೆ ಆದಾಯಗಳು ಹೆಚ್ಚುತ್ತಿರುವುದರಿಂದ ದೊರೆತಿರುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿನ ವಿಫಲತೆ ಇಲ್ಲಿ ಕಾಣುತ್ತದೆ. ಹನ್ನೊಂದನೇ ಯೋಜನಾವೆಚ್ಚಕ್ಕೆ ಕೂಡಾ ಸಾಕಷ್ಟು ಉತ್ತೇಜನೆ ಕಾಣ ಬಂದಿಲ್ಲ. ಹನ್ನೊಂದನೇ ಪಂಚವಾರ್ಷಿಕ ಯೋಜನೆಗೆ ಒಟ್ಟು ಬಜೆಟ್ ಬೆಂಬಲ 60000ಕೋಟಿ ರೂಪಾಯಿಗಳಷ್ಟು ಹೆಚ್ಚಿಸಬೇಕು ಎಂದು ಎಡ ಪಕ್ಷಗಳು ಆಗ್ರಹಿಸಿದ್ದವು. ಆದರೆ ಚಿದಂಬರಂ ಹೆಚ್ಚಿಸಿರುವುದು 38286ಕೋಟಿ ರೂ. ಮಾತ್ರ.

ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು ಮತ್ತು ಮಹಿಳೆಯರು ಮುಂತಾದ ವಂಚಿತ ಜನವಿಭಾಗಗಳಿಗೆ ಹಣ ನೀಡಿಕೆಯಲ್ಲಿ ಸ್ವಲ್ಪ ಹೆಚ್ಚಳ ಮಾಡಲಾಗಿದೆ. ಸಚಾರ್ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿ ಅಲ್ಪ ಸಂಖ್ಯಾತರು ಹೆಚ್ಚಾಗಿ ಕೇಂದ್ರೀಕೃತವಾಗಿರುವ ಜಿಲ್ಲೆಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಶಾಖೆಗಳ ವಿಸ್ತರಣೆ, ಬಹು-ವಲಯ ಅಭಿವೃದ್ಧಿ ಯೋಜನೆಗಳಿಗೆ ಮತ್ತು ಮದರಸ ಆಧುನೀಕರಣಕ್ಕೆ ಹೆಚ್ಚಿನ ಹಣನೀಡಿಕೆ ಕೂಡಾ ಸ್ವಾಗತಾರ್ಹ ಹೆಜ್ಜೆಗಳು.

ಉನ್ನತ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಹಣ ನೀಡಿಕೆಯನ್ನು ಹೆಚ್ಚಿಸಲಾಗಿದೆ. ಆದರೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಳ ಬಹಳ ಅಲ್ಪ. ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ) ಶಾಲಾ ಶಿಕ್ಷಣವನ್ನು ಸಾರ್ವತ್ರೀಕರಿಸಲಾಗುವುದು ಮತ್ತು ಶಿಕ್ಷಣದ ಮೇಲಿನ ಖರ್ಚನ್ನು ಒಟ್ಟು ರಾಷ್ಟ್ರಿಯ ಉತ್ಪನ್ನ(ಜಿಡಿಪಿ)ದ 6ಶೇ.ಕ್ಕೆ ಏರಿಸಲಾಗುವುದು ಎಂಬ ವಚನ ನೀಡಿತ್ತು. ಆದರೆ ಈ ಕೊನೆಯ ಬಜೆಟಿನ ನಂತರವೂ ಅದು ಈಡೇರುವ ಲಕ್ಷಣಗಳೇನೂ ಇಲ್ಲ. 2007-08ರಲ್ಲಿ ಇದು 3.8ಶೇ. ಮಾತ್ರವಿತ್ತು ಎಂದು ಸರಕಾರದ ಆರ್ಥಿಕ ಸರ್ವೆಯೇ ಹೇಳಿತ್ತು.

ಆರೋಗ್ಯ ವಲಯದಲ್ಲೂ ಹೀಗೇ ಆಗಿದೆ. ಯುಪಿಎ ದ ಸಿಎಂಪಿ ಖರ್ಚನ್ನು ಜಿಡಿಪಿಯ2ರಿಂದ 3ಶೇ.ಕ್ಕೆ ಹೆಚ್ಚಿಸುವ ಭರವಸೆ ನೀಡಿತ್ತು. ಆದರೆ ಆರ್ಥಿಕ ಸರ್ವೆ ಪ್ರಕಾರ ಅದು ಕೇವಲ 1.39ಶೇ. ತಲುಪಿದೆ. ಈ ಬಾರಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನಕ್ಕೆ 12ಶೇ. ಹೆಚ್ಚಳ ನೀಡಿದರೂ ಜಿಡಿಪಿಯ ಶೇಕಡಾವಾರಾಗಿ ಇಳಿಕೆಯೇ ಆಗುತ್ತದೆ.

ಅಂಗನವಾಡಿ ನೌಕರರಿಗೆ ಮತ್ತು ಸಹಾಯಕಿಯರ ಗೌರವ ಧನವನ್ನು ಸ್ವಲ್ಪ ಮಟ್ಟಿಗೆ

ಪುಟ 10 ಕ್ಕೆ

ಪ್ರತಿಕ್ರಿಯೆ

ಒಟ್ಟಾರೆಯಾಗಿ, ಯುಪಿಎ ಸರಕಾರದ ಈ ಕೊನೆಯ ಬಜೆಟ್‌ನ ಈ ಅರೆಮನಸ್ಸಿನ ಕ್ರಮಗಳನ್ನು ನೋಡಿದರೆ ರಾಷ್ಟ್ರೀಯ ಸಮಾನ ಕನಿಷ್ಟ ಕಾರ್ಯಕ್ರಮ(ಎನ್‌ಸಿಎಂಪಿ)ದಲ್ಲಿ ಜನಗಳ ಕಲ್ಯಾಣ ಕುರಿತಂತೆ ನೀಡಿದ ನಿರ್ಣಾಯಕ ಭರವಸೆಗಳು ಈಡೇರುವಂತೆ ಕಾಣುವುದಿಲ್ಲ

-ಸಿಪಿಐ(ಎಂ) ಪೊಲಿಟ್‌ಬ್ಯೂರೊ

★

2008ರ ಬಜೆಟ್ ಪ್ರಸ್ತಾವಗಳು ಕೆಲವು ಪರಿಹಾರಗಳೇನೇ ಇದ್ದರೂ ಅದೇ ಜಾಗತೀಕರಣದ ನೀತಿಗಳ ಮುಂದುವರಿಕೆಯೇ ಆಗಿದೆ ....ಹಣಕಾಸು ಮಂತ್ರಿಗಳ ಪ್ರಸ್ತಾವಗಳಲ್ಲಿ ಈಗಿರುವ ಸ್ಕೀಮುಗಳಿಗೆ ಹಣ ನೀಡಿಕೆಯಲ್ಲಿ ಸ್ವಲ್ಪ ಹೆಚ್ಚಳವಿದ್ದರೂ, ಗಮನಾರ್ಹ ಪ್ರಭಾವ ಏನು ಇರುವುದಿಲ್ಲ. ಕೆಲವು ಈ ಸ್ಕೀಂಗಳು ಇನ್ನು ಕಾಗದದ ಮೇಲೆಯೇ ಇವೆ. ಏಕೆಂದರೆ ನೇಮಕಾತಿಯನ್ನು ನಿಷೇಧಿಸಲಾಗಿದೆ. ಈ ಸ್ಕೀಂಗಳನ್ನು ಪರಿಣಾಮಕಾರಿಗೊಳಿಸುವುದು ಮಾತ್ರವಲ್ಲ ಕಾರ್ಯಗತಗೊಳಿಸಲು ಕೂಡ ಮಾನವ ಶಕ್ತಿ ಇಲ್ಲ, ...

ಒಟ್ಟಾರೆಯಾಗಿ, ಬಜೆಟ್ ಪ್ರಸ್ತಾವನೆಯನ್ನು ಕೇಳಿದ ಮೇಲೆ ಕಾರ್ಮಿಕ ವರ್ಗ ಮತ್ತು ಬಡಜನರಿಗೆ ಸಂತೋಷವೇನೂ ಆಗುವುದಿಲ್ಲ.

-ಸಿಐಟಿಯು

★

ಲಿಂಗ ಹಣ ನೀಡಿಕೆ ಸಂಬಂಧಪಟ್ಟಂತೆ ಹೆಚ್ಚು ಇಲಾಖೆಗಳು ತಮ್ಮ ಖರ್ಚುಗಳ ಲಿಂಗ ಪ್ರಮಾಣದ ವಿಶ್ಲೇಷಣೆಯನ್ನು ಒದಗಿಸಿವೆ ಎಂಬುದು ಸ್ವಾಗತಾರ್ಹ. ಆದರೆ ಹಣಕಾಸು ಮಂತ್ರಿಗಳು ಉದ್ಧರಿಸಿರುವ ಅಂಕಿ ಸಂಖ್ಯೆಗಳು ವಂಚನೆ ಮಾಡುತ್ತವೆ. ಏಕೆಂದರೆ ಜಿ.ಡಿ.ಪಿ.ಯ ಪ್ರಮಾಣದಲ್ಲಿ ನಿರ್ದಿಷ್ಟ ಮಹಿಳಾ ಯೋಜನೆಗಳಿಗೆ ನೀಡಿರುವ ಹಣ 0.5 ಶೇ.ದಿಂದ 0.52 ಕ್ಕೆ ಏರಿದೆ. ನಾವು ಆದಾಯ ತೆರಿಗೆಯ ಮೇಲಿನ ಮಿತಿಯನ್ನು ವಿಶೇಷವಾಗಿ ಮಹಿಳೆಯರು ಮತ್ತು ಹಿರಿಯ ನಾಗರೀಕರಿಗೆ ಹೆಚ್ಚಿಸಿದ ಮಿತಿಯನ್ನು ಕೂಡ ಸ್ವಾಗತಿಸುತ್ತೇವೆ.

-ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ.

ಬಜೆಟ್ ಮುಖ್ಯಾಂಶಗಳು

- ಸಣ್ಣ ಮತ್ತು ಅಂಚಿನ ರೈತರ, ಅಂದರೆ ಎರಡು ಹೆಕ್ಟೇರ್ ವರೆಗೆ ಜಮೀನಿರುವ ರೈತರ ಡಿಸೆಂಬರ್ 31, 2007ರ ವೇಳೆಗೆ ಬಾಕಿಯಿದ್ದ ಎಲ್ಲಾ ಸಾಲಗಳ ಮನ್ನಾ. ಈ ಕ್ರಮದಿಂದ 4ಕೋಟಿ ರೈತರ ಸುಮಾರು 60,000ಕೋಟಿ ರೂ. ಸಾಲ ಮನ್ನಾ ಆಗುತ್ತದೆ ಎಂದು ಅಂದಾಜು ಮಾಡಲಾಗಿದೆ.
- ಆಹಾರ ಸಬ್ಸಿಡಿಯಲ್ಲಿ 3.5ಶೇ. ಹೆಚ್ಚಳ; ಆದರೆ ಹಣದುಬ್ಬರ 6ಶೇ. ತಲುಪುವ ಅನುಮಾನ.
- ಆದಾಯ ತೆರಿಗೆ ಮಿತಿ ರೂ. 1.1 ಲಕ್ಷದಿಂದ 1.5ಲಕ್ಷಕ್ಕೆ ಏರಿಕೆ. ತೆರಿಗೆ ದರಗಳ ಪುನರ್‌ರಚನೆಯಿಂದ ಮಧ್ಯಮ ವರ್ಗಗಳಿಗೆ ಪ್ರಯೋಜನ.
- ಅಲ್ಪಾವಧಿ ಬಂಡವಾಳ ಲಾಭದ ಮೇಲಿನ ತೆರಿಗೆ 10ರಿಂದ 15ಶೇ. ಕ್ಕೆ ಏರಿಕೆ. ಆದರೆ ದೊಡ್ಡ ಬಂಡವಳಿಗರಿಗೆ ಕೆಲವು ಅನಗತ್ಯ ರಿಯಾಯ್ತಿಗಳು.
- ಶಿಕ್ಷಣಕ್ಕೆ 34400ಕೋಟಿ ರೂ.ಗಳು(20ಶೇ. ಏರಿಕೆ) ಮತ್ತು ಆರೋಗ್ಯಕ್ಕೆ 16534ಕೋಟಿ ರೂ.ಗಳು(ಶೇ.15 ಏರಿಕೆ). ಅದರೂ ಸಿಎಂಪಿ ಭರವಸೆ ನೀಡಿದ ಪ್ರಮಾಣಗಳಿಂದ ಇನ್ನೂ ದೂರ.
- 90 ಅಲ್ಪಸಂಖ್ಯಾತರು ಹೆಚ್ಚಿರುವ ಜಿಲ್ಲೆಗಳಲ್ಲಿ 3780ಕೋಟಿ ರೂ.ಗಳ ಬಹುವಲಯ ಅಭಿವೃದ್ಧಿ ಯೋಜನೆ.
- ಐಸಿಡಿಎಸ್ ಗೆ 880 ಕೋಟಿ ರೂ. ಹೆಚ್ಚಳ. ಅಂಗನವಾಡಿ ನೌಕರರಿಗೆ ಮತ್ತು ಸಹಾಯಕಿಯರಿಗೆ ಅನುಕ್ರಮವಾಗಿ ರೂ.500 ಮತ್ತು ರೂ.250 ಹೆಚ್ಚಳ.
- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ರೇಗಾ)ಕ್ಕೆ 20ಶೇ. ಹೆಚ್ಚಳ, ಆದರೆ ವ್ಯಾಪ್ತಿ ಇಮ್ಮಡಿ.



ರೈಲ್ವೆ ಬಜೆಟ್ 2008-09

ಪ್ರಯಾಣ ದರ ಏರಲಿಲ್ಲ ಎಂಬುದು ಅದು ಕಡಿಮೆಯಾಗಿದೆ ಎಂಬುದು ಸ್ವಾಗತಾರ್ಹ ಅಂಶ. ಆದರೆ ಕೆಲವು ವಿಭಾಗಗಳಲ್ಲಿ ಖಾಸಗೀಕರಣದ ಪ್ರಸ್ತಾವ ಅಪಾಯಕಾರಿ. ಮತ್ತು...

ಸ್ಟೇಷನ್ ತಲುಪದ ರೈಲು!

ರೈಲ್ವೆ ಮಂತ್ರಿ ಲಾಲೂಪ್ರಸಾದ್ ಯಾದವ್‌ರವರು ಫೆಬ್ರವರಿ 26 ರಂದು ಮಂಡಿಸಿದ ರೈಲ್ವೆ ಬಜೆಟ್ ಹಲವಾರು ಸ್ವಾಗತಾರ್ಹ ಅಂಶಗಳನ್ನು ಒಳಗೊಂಡಿದೆ. ಆದರೆ ಖಾಸಗೀಕರಣಕ್ಕೆ ಒತ್ತು ಕೊಡುವ ಅವರ ನಿಲುವ, ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಗಮನ ನೀಡದೆ ಇರುವುದು ಆಕ್ಷೇಪಾರ್ಹವಾದುದು.

ದಿನೇ ದಿನೇ ಎಲ್ಲಾ ವಸ್ತುಗಳ, ಸೇವೆಗಳ ಬೆಲೆ ಏರುತ್ತಿರುವ ಇಂದಿನ ದಿನಗಳಲ್ಲಿ ಐದು ವರ್ಷಗಳಿಂದ ಸತತವಾಗಿ ಬೆಲೆ ಹೆಚ್ಚಿಸದೆ, ಈ ಬಾರಿ ಇಳಿಸಿರುವುದು ಗಮನಾರ್ಹ. ಎರಡನೇ ದರ್ಜೆ ಪ್ರಯಾಣದರ ಶೇ.5 ರಷ್ಟು ಇಳಿಸಲಾಗಿದೆ. ಆದರೆ 50 ರೂ. ವರೆಗಿನ ಟಿಕೆಟ್ ದರದಲ್ಲಿ ಕೇವಲ 1 ರೂ. ಮಾತ್ರ ಕಡಿತ ಮಾಡಿರುವುದು ಸರಿಯಲ್ಲ. ಇನ್ನೊಂದು ಪ್ರಮುಖವಾದ ಅಂಶವೆಂದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಹೆಚ್ಚುತ್ತಿದೆ ಎಂಬ ಕಾರಣ ನೀಡಿ, ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕೇಂದ್ರ ಸರ್ಕಾರ ಹೆಚ್ಚಿಸುತ್ತಿರುವಾಗ, ಅದರ ಸಾಗಾಣಿಕೆ ದರವನ್ನು ಶೇ 5 ರಷ್ಟು ಇಳಿಸಿರುವುದು ಸ್ವಾಗತಾರ್ಹ ಅಂಶ. 50 ವರ್ಷ ದಾಟಿದ ಮಹಿಳೆಯರಿಗೆ ಶೇ. 50 ರಷ್ಟು ರಿಯಾಯಿತಿ, ಪದವಿವರೆಗೆ ವಿದ್ಯಾಭ್ಯಾಸ ಮಾಡುವ ಬಾಲಕಿಯರಿಗೆ ಉಚಿತ ಸೀಸನ್ ಟಿಕೆಟ್ ಇತ್ಯಾದಿ ಅಂಶಗಳು ಸಾಮಾನ್ಯ ಜನರಿಗೆ ಅನುಕೂಲವಾಗುವಂತಹುಗಳು.

ಹಮಾಲಿ ಕಾರ್ಮಿಕರಿಗೆ ಖಾಯಂ ನೌಕರಿ

ಪ್ರಮುಖ ರೈಲ್ವೆ ಸ್ಟೇಷನ್‌ಗಳಲ್ಲಿ ಹಮಾಲಿ (ಪೋರ್ಟರ್) ಕಾರ್ಮಿಕರಾಗಿ ಲೈಸೆನ್ಸ್ ಪಡೆದು ಕೆಲಸ ಮಾಡುತ್ತಿರುವವರನ್ನು ಗ್ಯಾಂಗ್ ಮನ್ ಮತ್ತು ಇತರೆ ಹುದ್ದೆಗಳಿಗೆ ಖಾಯಂ ನೇಮಕಾತಿ ಮಾಡಿಕೊಳ್ಳುವುದಾಗಿ ಹೇಳಿರುವುದು ಇನ್ನೊಂದು ಪ್ರಮುಖ ಅಂಶ. ಹಿಂದಿನ ಎನ್.ಡಿ.ಎ. ಸರ್ಕಾರದಲ್ಲಾಗಲೀ, ಇಂದಿನ ಯುಪಿಎ ಸರ್ಕಾರದಲ್ಲಾಗಲೀ, ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸಗಾರರ ಸಂಖ್ಯೆಯನ್ನು ಕಡಿತ ಮಾಡುವುದರಲ್ಲಿ ಹಾಗೂ ಕಾಂಟ್ರಾಕ್ಟ್ ಪದ್ಧತಿ ಮೂಲಕ ಕಡಿಮೆ ವೇತನ ನೀಡಿ ದುಡಿಸಿಕೊಳ್ಳುತ್ತಿರುವ ಜಾಗತೀಕರಣ ನೀತಿಗಳ ಈ ಸಂದರ್ಭದಲ್ಲಿ ಹಮಾಲಿ ಕಾರ್ಮಿಕರನ್ನು ಖಾಯಂ ನೇಮಕ ಮಾಡುವ ನೀತಿ ನಿಜಕ್ಕೂ ಸ್ವಾಗತ. ಇದರಿಂದ ಸುಮಾರು 38,000 ನೌಕರರಿಗೆ ಲಾಭವಾಗಲಿದೆ ಎಂದು ಅಂದಾಜಿಸಲಾಗಿದೆ.

ಆದರೂ 1.5 ಲಕ್ಷದಷ್ಟು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದೆ ಇರುವುದು ಹಾಗೂ ವಿವಿಧ ಯೋಜನೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವವರನ್ನು ಹಂತ ಹಂತವಾಗಿ ಖಾಯಂಗೊಳಿಸಲು ಯಾವುದೇ ಕಾರ್ಯಕ್ರಮವಿಲ್ಲದಿರುವುದು ಆಕ್ಷೇಪಾರ್ಹ.

ಮೂಲಭೂತ ಸೌಕರ್ಯ: 53 ಹೊಸ ರೈಲುಗಳ ಸಂಚಾರವನ್ನು ಘೋಷಿಸಿದ ಲಾಲೂ ಅವರು 10 ಗರೀಬ್‌ರಥಗಳನ್ನೂ ಚಾಲೂ ಮಾಡುವುದಾಗಿ ಹೇಳಿದ್ದಾರೆ. ಆದರೆ ಹಿಂದುಳಿದ ಪ್ರದೇಶಗಳಾದ ಈಶಾನ್ಯ ರಾಜ್ಯಗಳಿಗಾಗಲೀ, ಜಮ್ಮು ಕಾಶ್ಮೀರಕ್ಕಾಗಲೀ ಹೇಳಿಕೊಳ್ಳುವಂತಹ ಯಾವ ಕೊಡುಗೆಯನ್ನೂ ನೀಡಿಲ್ಲ, ಹಾಗೆ ನೋಡಿದರೆ ಗಾತ್ರ ಮತ್ತು ಅವಕಾಶಗಳಿಗೆ ಹೋಲಿಸಿದರೆ ಕರ್ನಾಟಕಕ್ಕೆ ಅವರು ಘೋಷಿಸಿದ ಯೋಜನೆಗಳು ಸಾಲದು. (ವಿವರ ಮುಂದೆ ನೀಡಲಾಗಿದೆ).

25,000 ಕೋಟಿ ರೂ. ಲಾಭ ಬಂದಿದೆ ಎಂದು ಘೋಷಿಸಿಕೊಂಡ ಲಾಲೂರವರ ರೈಲ್ವೆ ಬಜೆಟ್ ಹೊಸ ಹಳಿಗಳನ್ನು ಹಾಕುವುದಕ್ಕಾಗಲೀ, ಗೇಜ್ ಪರಿವರ್ತನೆಗಳಾಗಲೀ, ಜೋಡಿ ಮಾರ್ಗಗಳನ್ನು ರೂಪಿಸುವುದಕ್ಕಾಗಲೇ ಅಥವಾ ವಿದ್ಯುತೀಕರಣ ಗೊಳಿಸುವುದಕ್ಕಾಗಲೀ ಮೀಸಲಾಗಿಟ್ಟ ಹಣ ಸಾಲದು. ಮಾಜಿ ರೈಲ್ವೆ ಮಂತ್ರಿ ಜಾಫರ್ ಷರೀಪ್‌ರವರು ಹೇಳಿದಂತೆ, ಅಗತ್ಯ ಸೇವೆಯಾದ ರೈಲ್ವೆಯಲ್ಲಿ ಲಾಭ ತೋರಿಸುವುದು ಮಾತ್ರವೇ ಪ್ರಮುಖ ಉದ್ದೇಶವಾಗಿರದೆ, ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಮೂಲಕ ಮುಂದಿನ ವರ್ಷಗಳ ಅಗತ್ಯಗಳಿಗೆ ಅಡಿಪಾಯ ಹಾಕಬೇಕಾಗಿತ್ತು. ಅದೇ ಸಂದರ್ಭದಲ್ಲಿ ರೈಲ್ವೆ ಸುರಕ್ಷತೆಗೂ ಸಾಕಷ್ಟು ಗಮನ ನೀಡಬೇಕಾಗಿತ್ತು. ಭಯೋತ್ಪಾದಕ ಶಕ್ತಿಗಳು, ಸಾರ್ವಜನಿಕ ಉದ್ದಿಮೆಗಳನ್ನು ಅದರಲ್ಲೂ ರೈಲ್ವೆಯನ್ನು ಗುರಿಮಾಡುತ್ತಿರುವ ಹಿನ್ನಲೆಯಲ್ಲಿ ಸುರಕ್ಷತೆಗೆ ಹೆಚ್ಚು ಗಮನ ನೀಡಬೇಕಾಗಿತ್ತು.

ಖಾಸಗೀಕರಣ ಖಂಡನಾರ್ಹ

ಸಾರ್ವಜನಿಕ ಕ್ಷೇತ್ರದಲ್ಲಿ ಅಗಾಧವಾಗಿ ಬೆಳೆಯುತ್ತಿರುವ ರೈಲ್ವೆಯನ್ನು ಜಗತ್ತಿನ 500 ಅತಿ ದೊಡ್ಡ ಕಂಪನಿಗಳಲ್ಲಿ ಒಂದನ್ನಾಗಿಸಬೇಕೆಂಬ ರೈಲ್ವೆ ಸಚಿವರ ಆಕಾಂಕ್ಷೆ ತಪ್ಪಿಲ್ಲ. ಆದರೆ ಲಾಭದಾಯಕವಾದ ಸೇವೆಗಳನ್ನು ಖಾಸಗಿಯವರಿಗೆ



ವಹಿಸಿಕೊಡುವುದು ಶೋಭೆ ತರುವಂತಹುದಲ್ಲ. ಉದಾಹರಣೆಗೆ ರೈಲ್ವೆಯಲ್ಲಿ ಹೆಚ್ಚು ಲಾಭದಾಯಕವಾದ ಸೇವೆ ಎಂದರೆ, 'ಕಂಟೈನರ್' ಮೂಲಕ ಸಾಮಾನು ಸರಂಜಾಮುಗಳನ್ನು ಸಾಗಿಸುವುದು. ವಿದೇಶಗಳಿಗೆ ರಫ್ತು ಮಾಡುವ ವಸ್ತುಗಳನ್ನು 'ಕಂಟೈನರ್' ನಲ್ಲಿ ಲೋಡ್ ಮಾಡಿ ಹಾಗೆಯೇ ಹಡಗುಗಳಿಗೆ ಹಾಕಲಾಗುತ್ತದೆ. ಈಗಾಗಲೇ ಇಂತಹ 45 ಕಂಟೈನರ್ ರೈಲ್ವೆ ಸೇವೆಗಳು ಖಾಸಗಿಯವರ ಕೈಯಲ್ಲಿದೆ. ಇದನ್ನು 50 ಅಥವಾ 55ಕ್ಕೆ ಏರಿಸಲು ಸೂಚನೆಗಳಿವೆ. ಇದಲ್ಲದೆ, ಮುಂದಿನ ವರ್ಷ 40 ಹೊಸ ಕಂಟೈನರ್ ಡಿಪೋಗಳನ್ನು ರಚಿಸಲು ಉದ್ದೇಶಿಸಲಾಗಿದ್ದು ಅವೆಲ್ಲವನ್ನೂ ಖಾಸಗಿಯವರಿಗೆ ನೀಡಲು ನಿರ್ಧರಿಸಲಾಗಿದೆ. ಇದರಿಂದ ಖಾಸಗಿ ಕಾರ್ಪೋರೇಟ್ ಸಂಸ್ಥೆಗಳಿಗೆ ಅನುಕೂಲವಾಗಲಿದೆ ಹಾಗೂ ಸರಕಾರಿ ಖಜಾನೆಗೆ ಖೋತಾ ಆಗಲಿದೆ.

ನವದೆಹಲಿ ಮುಂಬೈ, ಪಟ್ನಾ ಮತ್ತು ಸಿಕಂದರಾಬಾದ್ ರೈಲ್ವೆ ಸ್ಟೇಷನ್‌ಗಳನ್ನು ಆಧುನೀಕರಣಗೊಳಿಸಿ ಅಭಿವೃದ್ಧಿಗೊಳಿಸುವ



ಕೆಲಸವನ್ನು ಸಹ ಖಾಸಗಿಯವರಿಗೆ ನೀಡಲಾಗುವುದೆಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ವ್ಯಾಗನ್ ತಯಾರಿಸುವುದು, ಡೀಸೆಲ್ ಮತ್ತು ಎಲೆಕ್ಟ್ರಿಕ್ ಇಂಜಿನ್‌ಗಳನ್ನು ತಯಾರಿಸುವಂತಹ. ಕೆಲಸಗಳನ್ನು ಸಹ ಖಾಸಗಿಯವರಿಗೆ ನೀಡುವ ಹುನ್ನಾರ ನಡೆಯುತ್ತಿದೆ.

ಈ ಖಾಸಗೀಕರಣ ನೀತಿಗಳ ವಿರುದ್ಧ ಪ್ರಬಲವಾದ ಪ್ರತಿಭಟನೆ ನಡೆಸುವುದು ಮಾತ್ರವಲ್ಲದೆ, ವಿಶಾಲವಾದ ಹೋರಾಟಗಳನ್ನು ರೂಪಿಸಬೇಕಾಗಿದೆ. ಇದರಲ್ಲಿ ರೈಲು ಇಲಾಖೆಯ ವಿವಿಧ ನೌಕರ, ಕಾರ್ಮಿಕ ಸಂಘಟನೆಗಳು ಮುತುವರ್ಜಿ ವಹಿಸಬೇಕಾಗಿದೆ.

ರಾಜ್ಯಕ್ಕೆ ದೊರೆತದ್ದು

ರಾಜ್ಯಕ್ಕೆ 6 ಹೊಸ ರೈಲುಗಳು ದೊರೆತಿವೆ. ಅದರಲ್ಲಿ ಮೈಸೂರು-ನಂಜನಗೂಡು ಪ್ಯಾಸೆಂಜರ್ ಪ್ರತಿದಿನ ಓಡಲಿದೆ. ಐದು ರೈಲು ಮಾರ್ಗಗಳ ವಿಸ್ತರಣೆಗೆ ಅವಕಾಶ ಮಾಡಿದ್ದು ಗೇಜ್ ಪರಿವರ್ತನೆ ನಂತರ ಸೊಲ್ಲಾಪುರ-ಬಾಗಲಕೋಟೆ ಎಕ್ಸ್‌ಪ್ರೆಸ್ ಗದಗ ತನಕವೂ ಧಾರವಾಡ-ಗದಗ ಪ್ಯಾಸೆಂಜರ್ ವಿಜಾಪುರದವರೆಗೂ ಚಲಿಸಲಿವೆ. ಆದರೆ ಗೇಜ್ ಪರಿವರ್ತನೆಯ ಕೆಲಸಕ್ಕೆ ಇನ್ನಷ್ಟು ಒತ್ತಡ ತರಬೇಕಾಗಿದೆ. ಇದರ ಜತೆಯಲ್ಲಿ ಬಾಗಲಕೋಟೆ- ಯಶವಂತಪುರ ಎಕ್ಸ್‌ಪ್ರೆಸ್ ಸದ್ಯಕ್ಕೆ ವಾರಕ್ಕೆ 3 ಬಾರಿ ಓಡುತ್ತಿದ್ದು ಅದನ್ನು ಪ್ರತಿನಿತ್ಯ ಮಾಡಲಾಗಿದೆ. ಇದರಿಂದ ಬಾಗಲಕೋಟೆ, ಬಿಜಾಪುರ ಜಿಲ್ಲೆಯ ಜನರಿಗೆ ಅನುಕೂಲವಾಗುವುದು ಮಾತ್ರವಲ್ಲದೆ, ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳನ್ನು ಬೆಂಗಳೂರಿಗೆ ಸಂಪರ್ಕಿಸುವುದರಿಂದ ಈ ಭಾಗದ ಜನರಿಗೆ, ಅಲ್ಲಿನ ಅಭಿವೃದ್ಧಿಗೆ ಅನುಕೂಲವಾಗಲಿದೆ. ಇಲ್ಲಿನ ಜನರು ರೈಲುಗಳಲ್ಲಿ ಸೀಟು ಸಿಗದೆ, ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಲ್ಲಿ 2 ಪಟ್ಟು, 3 ಪಟ್ಟು ಹಣ ತೆತ್ತು ಸಂಚರಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ.

ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದಿರುವ ಕಡೂರು-ಚಿಕ್ಕಮಗಳೂರು ರೈಲ್ವೆ ಲೈನಿಗೆ 10 ಕೋಟಿ ರೂ. ಒದಗಿಸಲಾಗಿದೆ. ಕೊಟ್ಟೂರು-ಹರಿಹರ 30 ಕೋಟಿ, ಹಾಸನ-ಬೆಂಗಳೂರು 55 ಕೋಟಿ, ಹುಬ್ಬಳ್ಳಿ-ಅಂಕೋಲಾ 10 ಕೋಟಿ, ರಾಯದುರ್ಗ-ತುಮಕೂರು ಮಾರ್ಗಕ್ಕೆ 15 ಕೋಟಿ ರೂ. ಹಣವನ್ನು ನೀಡಲಾಗಿದ್ದು ಆಯಾ ಪ್ರದೇಶದ ಕಾಮಗಾರಿಗೆ ಅನುಕೂಲ ವಾಗಲಿದೆ.

ಕಾಂ: ಬಸುದೇವ್ ಆಚಾರ್ಯ ರವರ ಪಾತ್ರ

ಲೋಕಸಭೆಯಲ್ಲಿ ಸಿಪಿಐ(ಎಂ) ನಾಯಕ ಹಾಗೂ ರೈಲ್ವೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಕಾಮ್ರೆಡ್ ಬಸುದೇವ್ ಆಚಾರ್ಯರವರು ಕರ್ನಾಟಕದ ಹಲವಾರು ರೈಲ್ವೆ ಯೋಜನೆಗಳನ್ನು ಕಾರ್ಯಗತ ಗೊಳಿಸುವುದರಲ್ಲಿ ಶ್ರಮ ವಹಿಸಿದ್ದಾರೆ. ವಿವಿಧ ಭಾಗಗಳಲ್ಲಿ ಜನತೆ ನಡೆಸಿದ ಹೋರಾಟದ ಜತೆಯಲ್ಲೇ, ಸಿಪಿಐ(ಎಂ), ಎಫ್‌ಕೆಸಿಸಿಐ, ಕರ್ನಾಟಕ-ಕೇರಳ ಪ್ರಯಾಣಿಕರ ವೇದಿಕೆ (ಕೆಕೆಟಿಎಫ್) ಇತ್ಯಾದಿ ಸಂಘಟನೆಗಳು ನಡೆಸಿದ ಪ್ರಚಾರ, ಹೋರಾಟ ಹಾಗೂ ಕಾಂ: ಬಸುದೇವ್ ಆಚಾರ್ಯರವರ ಮೂಲಕ ರೈಲ್ವೆ ಸಚಿವರಿಗೆ ತಂದ ಒತ್ತಡದ ಫಲವಾಗಿ ಹಲವಾರು ಯೋಜನೆಗಳು ಜಾರಿಗೆ ಬಂದಿವೆ ಎನ್ನುವುದನ್ನು ಗಮನಿಸಬೇಕು.

ಬಿಜೆಪಿಗೆ ನೈತಿಕ ಹಕ್ಕಿಲ್ಲ

ಬಿಜೆಪಿ ಮುಖಂಡರು ರೈಲ್ವೆ ಸಚಿವರ ಮೇಲೆ ಹರಿಹಾಯ್ದಿದ್ದಾರೆ. ಕರ್ನಾಟಕಕ್ಕೆ ಏನೇನೂ ಕೊಟ್ಟಿಲ್ಲ ಎಂದು ಕೂಗಾಡುತ್ತಿದ್ದಾರೆ. 1998 ರಲ್ಲಿ ಹುಬ್ಬಳ್ಳಿ-ಅಂಕೋಲಾ ರೈಲ್ವೆ ಮಾರ್ಗಕ್ಕೆ ಅಡಿಪಾಯ ಹಾಕಿದ ಪ್ರಧಾನ ಮಂತ್ರಿ ವಾಜಪೇಯಿಯವರು ಮುಂದಿನ 6 ವರ್ಷ ಕರ್ನಾಟಕಕ್ಕೆ ಏನು ಕೊಟ್ಟಿದ್ದರು ಎಂದು ಜನ ಪ್ರಶ್ನಿಸಬೇಕಾಗಿದೆ. ರೈಲ್ವೆ ಖಾತೆಯ ಸ್ಟೇಟ್ ಸಚಿವರಾಗಿದ್ದ ಬಸವರಾಜ ಪಾಟೀಲ್ ಯತ್ನಾಳ್ ಪ್ರಚಾರದ 'ರೈಲು' ಬಿಟ್ಟರೇ ಹೊರತು ಕರ್ನಾಟಕಕ್ಕೆ ಅವರು ಕೊಟ್ಟ ಕೊಡುಗೆ ತೀರಾ ಕಡಿಮೆ. ಕರ್ನಾಟಕಕ್ಕೆ ಅನ್ಯಾಯವಾಗಿದೆಯೆಂದು ಕೇಂದ್ರದ ಮೂವರು ಸಚಿವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸುವ ಯಡಿಯೂರಪ್ಪನವರು ಹೇಳಬೇಕು - 1998 ರಿಂದ 2004 ರಲ್ಲಿ 6 ವರ್ಷಗಳ ಕಾಲ ಬಿಜೆಪಿ ನೇತೃತ್ವದಲ್ಲಿ ಅಧಿಕಾರ ನಡೆಸುತ್ತಿದ್ದಾಗ ಕರ್ನಾಟಕಕ್ಕೆ ಅನ್ಯಾಯವಾಗಿಲ್ಲವೇ? ಆಗ ಬಿಜೆಪಿಯ ಯಾವುದಾದರೂ ಸಚಿವರು ರಾಜೀನಾಮೆ ನೀಡಿದ್ದಾರೆಯೇ? ಮುಖ್ಯಮಂತ್ರಿ ಆಗಬೇಕೆಂದು ಹಗಲುಗನಸು ಕಾಣುತ್ತಿರುವ ಯಡಿಯೂರಪ್ಪನವರಿಗೆ ಇಷ್ಟೆಲ್ಲಾ ಆಲೋಚಿಸಲು ಪುರಸೊತ್ತಿಲ್ಲವೆ?

ನೆನೆಗುದಿಗೆ ಬಿದ್ದಿರುವ ಯೋಜನೆಗಳು

ಕರ್ನಾಟಕದಲ್ಲಿ ಹಲವಾರು ಯೋಜನೆಗಳು ನೆನೆಗುದಿಗೆ ಬಿದ್ದಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದಾದ್ಯಂತ ಹಲವಾರು ಯೋಜನೆಗಳು ಕಾರ್ಯಗತ ಗೊಂಡಿಲ್ಲ. ಬಂಡವಾಳಶಾಹಿ ವ್ಯವಸ್ಥೆಯು ಸಮಾನವಾದ ಬೆಳವಣಿಗೆಗೆ ಆಸಕ್ತಿ ವಹಿಸುವುದಿಲ್ಲ. ಬಂಡವಾಳಗಾರರಿಗೆ ಅದರಲ್ಲೂ ದೊಡ್ಡ ಬಂಡವಾಳಗಾರರಿಗೆ ಲಾಭವಾಗುವುದಕ್ಕೆ ಹೆಚ್ಚು ಗಮನ ನೀಡುತ್ತಾರೆ. ಆದ್ದರಿಂದ ನೆನಗುದಿಗೆ ಬಿದ್ದಿರುವ, ಅಪೂರ್ಣವಾದ ಯೋಜನೆ ಗಳನ್ನು ಕೈಗೆತ್ತಿ ಕೊಳ್ಳಲು ನಿರಂತರ ಹಾಗೂ ವಿಶಾಲವಾದ ಹೋರಾಟ ಅಗತ್ಯ. ಆ ಹೋರಾಟಗಳು ಪ್ರತ್ಯೇಕತೆಯ, ಛಿದ್ರಕಾರಿ ರೂಪು ಪಡೆಯದೆ ಪ್ರಜಾಸತ್ತಾತ್ಮಕ ಹೋರಾಟವಾಗಬೇಕು.

■ ಬಾಲಕೃಷ್ಣಶೆಟ್ಟಿ



ಆತ ಎರಡು ರೂಪಾಯಿ ಹಿಡಿದು ಸುಲಿಗಾಯಿ ಕೊಡು ಅಂದ. ಆಕಿ ಕೊಟ್ಟಳು. ಆತ ಹೊರಡಲಿಲ್ಲ. ಅಲ್ಲೇ ನಿಂತ. "ಮತ್ತೇನು ಬೇಕ್ರಿ? ಯಾಕೆ ನಿಂತಿದಿ?" ಕೇಳಿದಳು. ಆತ ತುಂಬಾ ಅಮಾಯಕನಂತೆ. "ಏನಿಲ್ಲ, ನಾ ಹಳ್ಳೀ ಮನಶ್ಯಾ ಗಂಜಿನ ಕೆಲ್ಸಕ್ಕ ಬಂದಿನಿ. ರಾತ್ರಿ ಉಳಿಲಾಕ ಜಾಗಾ ಬೇಕಿತ್ತು..." ಅಂದು ಸರೂಬಾಯಿನತ್ತ ನೋಡಿದ.

'ನಮಗ ನಾವೇ ರಕ್ಷಣಾ ಮಾಡಿಕೊಂಡ್ರಾಯ್ತು'

..........ಟ್ರೇನಿನ ದಡ-ಬಡ ಸದ್ದಿನ ನಡುವೆ ಫೋನಿನಲ್ಲಿ ಸುದ್ದಿ ಬಂದ ಸದ್ದು ಕೇಳಿಸಿತು. ಸಂಗಾತಿ ತಮ್ಮ ಐ-ಪಾಡ್(ಸಂಗೀತ ಆಲಿಸುವ, ಧ್ವನಿ ಮುದ್ರಿಸಿಕೊಳ್ಳುವ ಸಾಧನ) ನೆನಪಿಸಿದ್ದರು. ಮರೆತು ಜೊತೆಗೆ ತಂದಿದ್ದೆ. ಒಳ್ಳೆಯದೇ ಆಯ್ತಲ್ಲ... ರೆಕಾರ್ಡಿಗಾಗಿ ಬಟನ್ ಒತ್ತಿ ಚಂದಮ್ಮಳೊಂದಿಗೆ ಮಾತಿಗಿಳಿದೆ.

ಪಿಹೆಚ್‌ಡಿಗಾಗುವಷ್ಟು ಮಾಹಿತಿ

ಅಬ್ಬಾ! ಒಂದು ಪಿಹೆಚ್‌ಡಿ ಗಾಗುವಷ್ಟು ಮಾಹಿತಿ. ಛೇ ಅದು ಮಾಹಿತಿಯಲ್ಲ. ಚಂದಮ್ಮಳಂಥವರ ಸ್ವಂತ ಅನುಭವ. ಅಕ್ಷರದಲಭ್ಯಾಸವ ಮಾಡಿ ಓದು-ಬರೆವ ಪರಿಗಳೆಲ್ಲ ಬರೀ ಧಿಮಾಕಿನ ಗರಿಗಳೇ ಕೆಲವೊಮ್ಮೆ. ಭಾರತದಂತಹ ದೇಶಗಳಲ್ಲಿ ನಿರುದ್ಯೋಗ, ಬಡತನ, ಅನಕ್ಷರತೆ ಸೃಷ್ಟಿ ಮಾಡಿ ತನ್ನ ಅಡಿಯಾಳಾಗಿಸಿಕೊಳ್ಳಲು ಅಮೇರಿಕಾ ಮತ್ತದರ ದುಷ್ಟ (ಅಪ್ಪ)ಕೂಟಗಳು ಸಂಚು ಹೂಡುತ್ತಿರುವಾಗ ಈ ನೆಲದ ದುಡಿವ ವರ್ಗ ಅಷ್ಟೇ ಛಲದಿಂದ ಎದಿರೇಟು ಕೊಡುತ್ತಿರುವುದು ನೋಡುವ ಕಣ್ಣು ಪಡೆಯಲೇ ಬೇಕು. ಬಂಡವಾಳದ ದೊರೆಗಳು ಮತ್ತು ಸರಕಾರಿ ಯಂತ್ರ ತನ್ನ ಲಾಭ ದಿಢೀರ್ ದಿಢೀರೆಂದು ಹೆಚ್ಚಾಗಲೆಂದು ಎಲ್ಲ ಕಾಮಗಾರಿಗಳಿಗೂ ಯಂತ್ರಗಳನ್ನು ಬಳಸುತ್ತಿದೆ. ಮನುಷ್ಯರು ಬೇಕಿಲ್ಲ. ಮೊದಲೆಲ್ಲ ಕಟ್ಟಡಗಳನ್ನು ಸೃಷ್ಟಿಸುವ ಬ್ರಹ್ಮರು ಈ ಕೂಲಿ ಕಾರ್ಮಿಕರು ಮುಂಜಾನೆದ್ದು ಗಂಜಿ (ನಾಷ್ಟಾ) ಮಾಡಿ, ಬುತ್ತಿ ಕಟ್ಟಿಕೊಂಡು ಸಲಿಕೆ ಗುದ್ದಲಿಯನ್ನು ಕಬ್ಬಿಣದ ಬುಟ್ಟಿಯಲ್ಲಿಟ್ಟುಕೊಂಡು ಹೊಂಟರೆಂದರೆ ಅದೊಂದು ಅದ್ಭುತ ಇರುವೆಗಳ ಸಾಲು. ವೈಯಕ್ತಿಕ ಸಂಕಟ-ನೋವುಗಳನ್ನು ಹಿಂದಿಟ್ಟು ಸಂಗಾತಿಗಳ ಸಮೂಹದಲ್ಲಿ ನಗುತ ಕಲೆಯುತ, ಮಾತು ಮಾತಿಗೆ ಜೋಕುಗಳನ್ನು ಚೆಲ್ಲಾಡುತ ಬಿಸಿಲು ಸೂರ್ಯನೂ ನಾಚುವಂತೆ ದಿನಕ್ಕೆ ರಂಗೇರಿಸಿ, ಅದಕ್ಕೆ ತಕ್ಕಂತೆ ಕೆಲಸದ ವೇಗಕ್ಕೂ ಲಯಬದ್ಧಗೊಳಿಸಿ ಸಂಜೆಯ ಹೊತ್ತಲ್ಲಿ ವಾಪಸ್ ಮನೆಗೆ ಹೊರಡುತ್ತಿದ್ದರು. ಆದರೆ ಈಚೆಗೆ ಮೊದಲಿನಂತೆ ಕೆಲಸ ಸಿಗುತ್ತಿಲ್ಲ. ಎರಡು ದಿನ ಕೆಲಸವಿದ್ದರೆ ವಾರಗಟ್ಟಲೇ "ಮತ್ಯಾರಾದರೂ ಗುತ್ತೇದಾರಿ ಕರೆಯುವನೇ?" ಎಂದು ದಾರಿ ಕಾಯುತ ದಿನಗಳನು ದೂಡಬೇಕು. ಒಂದು ಕಟ್ಟಡದ ಮಾಳಿಗೆ ಹಾಕಲು ಮೊದಲೆಲ್ಲ(ಒಂದು ಅಂತಿಸ್ತಿಗೆ) 30 ರಿಂದ 40 ಜನ ಕೂಲಿಕಾರ್ಮಿಕರು ಬೇಕಿತ್ತು. ಈಗ 6 ಅಥವಾ 8 ಜನ ಮಾತ್ರ. ಲಿಫ್ಟ್‌ಗಳು ಬಂದಿವೆ. ಎಲ್ಲ ಕೆಲಸ ಯಂತ್ರಗಳದ್ದೇ. ನೋಡ-ನೋಡುತ್ತಲೇ ಭವ್ಯ ಬಂಗಲೆಗಳು ಉದ್ಭವವಾಗುತ್ತದೆ. ಏನು ಮಾಡುವುದು? ಏನು ಮಾಡುತ್ತಿದ್ದಾರೆ ಕೂಲಿ ಕಾರ್ಮಿಕರು?

ಕೆಲಸಗಳ ಆವಿಷ್ಕಾರ

ಅನೇಕ ಜನ ಬೇರೆ ಬೇರೆ ಕೆಲಸಗಳ ಆವಿಷ್ಕಾರ ಮಾಡಿದ್ದಾರೆ. ಶ್ರಮ ಸಂಸ್ಕೃತಿಗೆ ಹೇಡಿತನದ ಪರಂಪರೆಯಿಲ್ಲ. ಭೂ ಮಂಡಲಕೆ ಮೆರಗು ತಂದ ಕೈಗಳವು. ಕೆಲಸ ಹುಡುಕಿ ಅಥವಾ ಸೃಷ್ಟಿಸಿ ಬದುಕು ಕಟ್ಟಿಕೊಳ್ಳುವ ಸ್ವಾಭಿಮಾನದ ಕಲೆ ಅವರಿಗೆ ಗೊತ್ತು. ನವೆಂಬರ್ ಡಿಸೆಂಬರ್ ಜನವರಿ ಮತ್ತು ಫೆಬ್ರವರಿಯಲ್ಲಿ ಹಸಿಗಡಲೆ (ಸುಲಗಾಯಿ) ಹೊಲಗಳ ಗುತ್ತಿಗೆ ಹಿಡಿದು ಮಾರಾಟ ಮಾಡಿ ಬಂದ ಲಾಭದಲ್ಲಿ ಮನೆ ನಡೆಸುತ್ತಾರೆ. ಪರವಾಯಿಲ್ಲ. ಖುಷಿ ಕೊಡುವ ಲಾಭವೇ. ಸಾವಿರಾರು ಕೂಲಿ-ಕಾರ್ಮಿಕರು ಮಾರುಕಟ್ಟೆಯ ರಸ್ತೆ-ಇಕ್ಕೆಲಗಳಲ್ಲಿ ಗಲ್ಲಿಗಳಲ್ಲಿ "ಸುಲಿಗಾಯಿ ಬೇಕೆನ್ರಿ...?" ಎಂಬ ಕಂಚಿನ ಕಂಠದ ದನಿಗಳು ಎಷ್ಟು ದೂರವಿದ್ದರೂ ನಿಮಗೆ ಕೇಳಿಸುತ್ತದೆ. ಹರೆಯದ ಹೆಂಗಸರು, ವಯಸ್ಸಾದ ಅಜ್ಜಿಯರು ನಸುಕಿನಿಂದ ರಾತ್ರಿಯವರೆಗೆ ದುಡಿದದ್ದೇ ದುಡಿದದ್ದು. ಆದರೆ ದುಡಿತದ ದಿನಗಳನ್ನು ರಂಜನೆಯಿಂದ, ಉಲ್ಲಾಸದಿಂದ ಸ್ವಾಭಿಮಾನದಿಂದ ನಡೆಸುವ ಪರಿ ಖಂಡಿತ ಗಾಬರಿ, ಅಚ್ಚರಿ ಮತ್ತು ಹೆಮ್ಮೆ ತರುತ್ತದೆ.

ವಿನಂತಿಯೋ ಧಮಕಿಯೋ?

ಯಾವ ಲೈಸೆನ್ಸ್ ಇಲ್ಲದೆ, ರಸ್ತೆಯ ಬದಿಯಲ್ಲಿ ಮಾರುವಾಗ ಟ್ರಾಫಿಕ್ ಪೋಲಿಸಣ್ಣರ ಕಾಟ. ಸುಲಿಗಾಯಿ ಮಾರುವವರೆಲ್ಲ ಹೆಂಗಸರೇ. ಅದರಲ್ಲೂ ಬಹುತೇಕ ಜನ ಹರೆಯದವರು. ಈ ಸಮಾಜ ಮಹಿಳೆಯರನ್ನು ಯಾವ ದೃಷ್ಟಿಯಿಂದ ನೋಡುತ್ತದೆ ಎಂಬುದು ನಾನು ವಿವರಿಸಬೇಕಿಲ್ಲ. ಅದರಲ್ಲೂ ಬಡ ಮಹಿಳೆಯರನ್ನು ಎಲ್ಲ ನಮೂನೆಯ ಶೋಷಣೆಗೆ ದೂಡಲು ತಂತ್ರ ಹೆಣೆಯುತ್ತಿರುತ್ತದೆ. ಕೂಲಿ ಮಹಿಳೆಯರು ಇದೆಲ್ಲದಕ್ಕೂ ಸಡ್ಡು ಹೊಡೆದು ಬದುಕು ನಡೆಸಲೇಬೇಕು. ದೊರೆತ ಕೊಂಚ ಅವಕಾಶದಲ್ಲಿಯೇ ಬಂದ ಗಿರಾಕಿಗಳು ಸುಲಿಗಾಯಿ ತಗೊಳ್ಳುವಾಗಲೋ, ಹಣ ಕೊಡುವಾಗಲೋ ಬೇಕೆಂದೇ ಕೈ ಸೋಕಿಸುತ್ತಾರೆ.... ಆಗೆಲ್ಲ "ಏಯ್ ಭಾಡಕಾವ್, ನಿನಗ ಸುಲಿಗಾಯಿ ತಗೊಳ್ಳಾದಿಲ್ಲ ಕಾಣಸ್ತದ...ತಗೋ ನಿನ ರೊಕ್ಕ. ಇಡು ಇಲ್ಲಿ" ಜೋರ್ ದನಿಯಿಂದ ಬಯ್ಯುವ ಪರಿಗೆ ಲೈನಿಗೆ ಕೂಡ ಇತರ ಮಹಿಳೆಯರಾದ ಹುಸೇನಕ್ಕ, ರಂಗಮ್ಮ, ಮರೆಮ್ಮ, ಮತ್ತಿತರರು, "ಯಾಕೆ ಯಕ್ಕ ಏನಂತಾನ...?" ಅಂತ ಒಂದೇ ಬಾರಿ ಬಂದ ದನಿಗಳ ಧಾಳಿಗೆ ಕುತ್ಸಿತ ಮನಸಿನ ಗಿರಾಕಿ ಥರ ಥರ ನಡುಗಲೇಬೇಕು. ಇನ್ನೂ ನಕ್ರಾ ಮಾಡಿದರೆ "ಹಿಡಿ ಅಂವ್ನಿಗಿ" ಅಂತ ಬಂದೇ ಬಿಟ್ಟರೆ ಅವನು ಕಾಲಿಗೆ ಬುದ್ಧಿ ಹೇಳಲೇಬೇಕು.

ಹೀಗೆ ವಾರಕ್ಕೊಮ್ಮೆ ಏನಾದರೂ ಘಟಿಸಿದ ಘಟನೆಯನ್ನು ಎದುರಿಸಿದ್ದು ಹೇಗೆ ಎಂಬುದೆಲ್ಲ ಮತ್ತೆ ಮತ್ತೆ ವರ್ಣರಂಜಿತವಾಗಿ ವಿವರಿಸುತ್ತಾ, ಪರಸ್ಪರ ಹಂಚಿಕೊಳ್ಳುತ್ತಾ, ತಾವೆಲ್ಲ ಒಕ್ಕಟ್ಟಿನಿಂದ ಇದ್ದು ಇಂಥ ಸಂಕಟಗಳನ್ನು ಧೂರ ಮಾಡಿಕೊಳ್ಳಬೇಕೆಂದು ಮಾತಾಡುತ ರಾತ್ರಿಗೆ ಮನೆಯ ಕಡೆಗೆ ನಡೆವರು.

ಕೇಳುತ ಕೇಳುತ ನನಗೂ ನಗು ತಡೆಯಲಾಗಲಿಲ್ಲ. "ನೀವೇ ಪೋಲೀಸರಾದ್ರೆಲ್ಲ....?" ಅಂದೆ. "ಹುಂನ್ರೀ... ನಾವೇನು ಪೋಲೀಸರಿಗೆ ಹಫ್ತಾ ಕುಡಾದಿಲ್ಲ. ಅದೇ ಅವ್ರಿಗೆ ಸಿಟ್ಟು. ಮತ್ತ ಕೂಲಿ ಮಾಡಾ ಮಂದಿಗಿ "ಯಾಕಪ್ಪ, ನಾವು ಬಡವ್ರು ಹ್ಯಾಂಗ ಬದುಕಬೇಕು? ನಿಮ್ಮಂಥವರ ಮಕ್ಕಳ ಚಲೋ ಸಾಲಿಗಿ ಹೋಗ್ತಾರ. ನಮ್ಮ ಮಕ್ಕಳಿಗೆ ಒಂದ ಹೊತ್ತ ಲರಾಟಾನಾದ್ರೂ ದುಡದು ಹಾಕಬೇಕು. ನಮ್ಮ ಹೊಟ್ಟೆ ಮ್ಯಾಲ ಕಲ್ಲ ಹಾಕಿ ನೀ ನೆಮ್ಮದಿಲಿಂದ ಇರ್ತಿಯಾ...?" ಅಂತ ಕೇಳುವ ಇವರ ದನಿಯಲ್ಲಿ ವಿನಂತಿ ಇರುವುದೇ-ಜೋರಿರುವುದೇ ಅಥವಾ ಧಮಕಿ....!? ಅನೇಕ ಹೋರಾಟಗಳ ಮೆರವಣಿಗೆಯಲ್ಲಿ ಕಾಣಿಸಿಕೊಳ್ಳುವ ಈ ಹೆಣ್ಣು ಮಕ್ಕಳ ಒಂದೇ ಝುಟಕಿಗೆ ಪೋಲೀಸಪ್ಪ ಸುಮ್ಮನಾಗಲೇಬೇಕು. ಇವರು ಮನಶಾಸ್ತ್ರಜ್ಞರೂ ಹೌದು. ಎದುರು ನಿಂತ ಗಿರಾಕಿಯ ಮನಸಿನೊಳಗೇನಿದೆ ಎಂಬುದನ್ನು ಒಂದು ನೋಟದಲ್ಲಿಯೇ ಥಕ್ಕಂತ ಗುರ್ತಿಸಬಲ್ಲರು. ಪೋಲೀಸರು ಎಂದಾನಾ ರಕ್ಷಣಾ ಮಾಡ್ತಾರಾ...? ಬರ್‍ದು ಕೊಡು. ಠಾಣಾಕ ಬಂದು ಕೊಡು ಅಂತ ನೂರು ಯಾಕ್ದಾ ಹೇಳ್ತಾರ. ಅಲ್ಲಿತನಾ ಯಾಕ? ನಮಗ ನಾವೇ ರಕ್ಷಣಾ ಮಾಡಿಕೊಂಡ್ರಾಯ್ತು" .... ಅಬ್ಬಾ ಸಾಹಸವೇ! ಚಂದಮ್ಮ ಒಂದು ಪ್ರಮುಖ ಘಟನೆ ಹೇಳತೊಡಗಿದಳು.

ಅದೊಂದು ಸಂಜೆ

ಅದೊಂದು ಸಂಜೆಯ ಹೊತ್ತು. ಇನ್ನೇನು ವ್ಯಾಪಾರ ಮುಗಿಬೇಕು. ಕೊನೆಗಿತ್ತು ಹಿಡಿಸುಲಿಗಾಯಿ. ಒಬ್ಬ ಚಿಗುರು ಮೀಸೆಯ ಚಂಚಲಗಣ್ಣಿನ ಗಂಡಸು ಸ್ವಲ್ಪ ಹೊತ್ತಿನಿಂದ ಠಳಾಯಿಸುತ್ತಿದ್ದ. ಸರೂಬಾಯಿ ಸುಂದರ ಹೆಂಗಸು. ಅವಳಲ್ಲಿ ಇನ್ನೂ ಸುಲಿಗಾಯಿ ಇತ್ತು. ಆತ ಎರಡು ರೂಪಾಯಿ ಹಿಡಿದು ಸುಲಿಗಾಯಿ ಕೊಡು ಅಂದ. ಆಕಿ ಕೊಟ್ಟಳು. ಆತ ಹೊರಡಲಿಲ್ಲ. ಅಲ್ಲೇ ನಿಂತ. "ಮತ್ತೇನು ಬೇಕು? ಯಾಕೆ ನಿಂತಿದಿ?" ಕೇಳಿದಳು. ಆತ ತುಂಬಾ ಅಮಾಯಕನಂತೆ. "ಏನಿಲ್ಲ, ನಾ ಹಳ್ಳೀ ಮನಶ್ಯಾ ಗಂಜಿನ ಕೆಲ್ಸಕ್ಕ ಬಂದಿನಿ. ರಾತ್ರಿ ಉಳಿಲಾಕ ಜಾಗಾ ಬೇಕಿತ್ತು..." ಅಂದು ಸರೂಬಾಯಿ ನತ್ತ ನೋಡಿದ. "ಹಿಂಗೋ... ಅಕೋ ಅಲ್ಲಿ ಹೋಗು. ಆಕಿನ ಮನ್ಯಾಗ ಜಾಗಾ ಅದಾ. ಕುಡ್ತಾಳ..." ಅಂತ ಇನ್ನೊಬ್ಬಾಕಿ ಕಡಿಗೆ ಕಳಿಸಿದಳು. ಅವನ ಮನಸಿನ ಮರ್ಮ ಅರಿತ ಸರೂಬಾಯಿ ಸ್ವಲ್ಪ ಸಮಯದಲ್ಲಿಯೇ ಎಲ್ಲ ಹೆಣ್ಣುಮಕ್ಕಳಿಗೂ ಸುದ್ದಿ ರವಾನಿಸಿದಳು. ನೋಡ ನೋಡುತ್ತಲೇ ಇಪ್ಪತ್ತು ಮೂವತ್ತು ಹೆಂಗಸರು ಪಾದರಸದಂತೆ ಹರಿದು ಬಂದವರೇ, ಅವನ ಕಾಲರ್ ಪಟ್ಟಿ ಹಿಡಿದಿದ್ದೇ ಚಪ್ಪಲಿಯಿಂದ ಆಶೀರ್ವಾದ ಮಾಡುತ್ತ, "ಈಟ್ ದೊಡ್ಡ ಕಲ್ಬುರ್ಗಿದಾಗ ನಿನ್ನಂಥ ಮೀಸಿ ಹೊತ್ತ ಗಂಣಸಗ ಇರಲಾಕ ಜಾಗಾ ಸಿಗಾದಿಲ್ಲ....? ಹೆಣಮಕ್ಕಳ ಮನ್ಯಾಗೇ ಇರಲಾಕ ಜಾಗಾ ಕೇಳ್ತೀ ಮೂಳಾ... ಪಿಸರ್‍ಯಾ.... ನಿನ್ ಹೆಣಾ ಎತ್ಲಿ.... ಬಡೂರ ಹೆಣಮಕ್ಕಳಂದ್ರ ಬೀದಿಗಿಬಿದ್ದಾರ ಅಂತ ತಿಳಿದಿ ಏನು...?" ಬಯ್ಗಳ ಸುರಿಮಳೆ. ಒದೆಗಳ ಜಡಿಮಳೆ.. ಜನಾ ಜಮಾಯಿಸಿದರು. ಅವರೂ ಕೈಲಾದ ಸೇವೆ ಮಾಡಿದರು. ಅಷ್ಟರಲ್ಲಿ ನಾಟಕೀಯವಾಗಿ ಲಾಠಿ ತಿರುಗಿಸುತ, ತನಗೇನಾದರೂ ಕಿಸೆ ಬೆಚ್ಚಗಾಗಬಹುದೇ ಎಂದು ಇಣುಕಿ ನೋಡಿದ ಪೋಲೀಸಣ್ಣ ಹೆಣ್ಣು ಮಕ್ಕಳ ಕಣ್ಣಿಗೆ ಬಿದ್ದ. "ಓಯೆ ಸಾಬ್ರೆ, ಕರ್‍ಕೊಂಡು ಹೋಗ್ರಿ ಇಂವ್ನಿಗ, ಜೇಲಿಗಿ ಕಳಸ್ರಿ. ರೊಕ್ಕ ತಗೊಂಡು ಬಿಟ್ರ ನೆಟ್ಟಗಿರಾದಿಲ್ಲ..." ಅಂತ ಆದೇಶ ಹೊರಡಿಸಿದರು! ಪೊಲೀಸು ಗೊಣಗುತ ಗಂಡಸು ಗಿರಾಕಿಯನ್ನು ಎಳೆದೊಯ್ದ ಈ ಹೆಣ್ಣು ಮಕ್ಕಳ ಸಾಹಸಕ್ಕೆ ನೆರೆದವರ ಶಹಾಬ್ಬಾಸಗಿರಿ !

ಹತ್ತರಲ್ಲೊಂದೇ ನನಸು....

ಪುಟ 8 ರಿಂದ

ಹೆಚ್ಚಿಸಲಾಗಿದೆ. ಇದು ಸ್ವಾಗತಾರ್ಹವಾದರೂ ಅವರ ಶ್ರಮಕ್ಕೆ ನೀಡುವ ಪ್ರತಿಫಲ ಈ ಹೆಚ್ಚಳದ ನಂತರವೂ ಕನಿಷ್ಟ ಕೂಲಿಗಿಂತ ಕಡಿಮೆ ಎಂಬುದನ್ನು ಗಮನಿಸಬೇಕು. ಅಲ್ಲದೆ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ(ಐಸಿಡಿಎಸ್)ಗೆ ಬಜೆಟಿನಲ್ಲಿ ಕೇವಲ 880 ಕೋಟಿ ರೂ.ಗಳ ಹೆಚ್ಚಳ ಮಾಡಿರುವುದು ಅದನ್ನು ಸಾರ್ವತ್ರೀಕರಿಸಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶ ಪಾಲಿಸಲು ಏನೇನೂ ಸಾಲದು.

ಅಸಂಘಟಿತ ವಲಯದಲ್ಲಿ 35ಕೋಟಿಗಿಂತಲೂ ಹೆಚ್ಚು ಕಾರ್ಮಿಕರಿದ್ದಾರೆ. ಬಜೆಟ್ ಈಗಿರುವ ಕೆಲವು ವಿಮಾಯೋಜನೆಗಳನ್ನು ವಿಸ್ತರಿಸಿರುವುದರಿಂದ ಅವರಲ್ಲಿ ಕೇವಲ ಕೆಲವೇ ಮಂದಿಗೆ ನೆರವಾಗುತ್ತದೆ. ರಾಷ್ಟ್ರೀಯ ಅಸಂಘಟಿತ ವಲಯದ ಉದ್ದಿಮೆಗಳ ಆಯೋಗದ ಶಿಫಾರಸಿನ ಸಮೀಪಕ್ಕೂ ಇದು ಬರುವುದಿಲ್ಲ. ಅಲ್ಲದೆ ಹಣಕಾಸು ಮಂತ್ರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಹಣನೀಡಿಕೆಯನ್ನು ಅಗತ್ಯಕ್ಕೆ ಅನುಗುಣವಾಗಿ ಹೆಚ್ಚಿಸಲಾಗುವುದು ಎಂಬ ಭರವಸೆ ನೀಡಿದ್ದರು. ಆದರೆ ಈಗ ಈ ಯೋಜನೆಯ ಅಡಿಯಲ್ಲಿ ಬರುವ ಜಿಲ್ಲೆಗಳ ಸಂಖ್ಯೆ ಇಮ್ಮಡಿಗೊಂಡರೂ ಬಜೆಟಿನಲ್ಲಿ ಹಣನೀಡಿಕೆಯಲ್ಲಿ ಮಾಡಿರುವ ಹೆಚ್ಚಳ ಕೇವಲ ಸುಮಾರು 20ಶೇ.

ಒಟ್ಟಾರೆಯಾಗಿ, ಯುಪಿಎ ಸರಕಾರದ ಈ ಕೊನೆಯ ಬಜೆಟ್‌ನ ಈ ಅರೆಮನಸ್ಸಿನ ಕ್ರಮಗಳನ್ನು ನೋಡಿದರೆ ಅದು ಸಮಾನ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ದಲ್ಲಿ ಜನಗಳ ಕಲ್ಯಾಣ ಕುರಿತಂತೆ ನೀಡಿದ ಭರವಸೆಗಳನ್ನು ಈಡೇರಿಸುವಂತೆ ಕಾಣುವುದಿಲ್ಲ ಎಂದು ಯುಪಿಎ ಸರಕಾರವನ್ನು ಹೊರಗಿನಿಂದ ಬೆಂಬಲಿಸುವ ಪ್ರಮುಖ ಎಡ ಪಕ್ಷವಾದ ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

'ವಚನ ಈಡೇರಿಕೆಗೆ ಇದೇನೂ ಸಾಲದು'

ದೇಶಾದ್ಯಂತ ಅಂಗನವಾಡಿ ನೌಕರರ ಹಾಗೂ ಸಹಾಯಕಿಯರ ನಿರಂತರ ಮತ್ತು ಸಮರಧೀರ ಹೋರಾಟಗಳಿಂದಾಗಿ ಸರ್ಕಾರ ಅವರ ಪ್ರತಿಫಲವನ್ನು ಹೆಚ್ಚಿಸಬೇಕಾಗಿ ಬಂದಿದೆ. ಅಖಿಲ ಭಾರತ ಅಂಗನವಾಡಿ ನೌಕರರ ಮತ್ತು ಸಹಾಯಕಿಯರ ಒಕ್ಕೂಟ ಹಣಕಾಸು ಮಂತ್ರಿಗಳು ಪ್ರಕಟ ಪಡಿಸಿದ ಹೆಚ್ಚಳ ಬಹಳ ಕಮ್ಮಿ ಮತ್ತು ಬಹಳ ವಿಳಂಬದ್ದು ಎಂದು ನಿರಾಶೆ ವ್ಯಕ್ತಪಡಿಸುತ್ತಿದೆ. ಎಲ್ಲಾ ಜೀವನಾವಶ್ಯಕ ವಸ್ತುಗಳ(ಸರಕುಗಳ) ಬೆಲೆಗಳು ಹಲವು ಪಟ್ಟು ಹೆಚ್ಚಿದ್ದರೂ, ರೂ. 1,000 ಮತ್ತು ರೂ.500 ಇರುವ ಅಂಗನವಾಡಿ ನೌಕರರ ಮತ್ತು ಸಹಾಯಕಿಯರ ಶೋಚನೀಯ ಗೌರವ ಧನದಲ್ಲಿ ಕಳೆದ 6 ವರ್ಷಗಳಲ್ಲಿ ಏನೂ ಹೆಚ್ಚಳವಾಗಿರಲಿಲ್ಲ. ಅಲ್ಲದೆ ಈ ಅವಧಿಯಲ್ಲಿ ಅವರ ಕೆಲಸದ ಹೊರೆ ವಿಪರೀತವಾಗಿ ಹೆಚ್ಚಿದೆ.... ಐಸಿಡಿಎಸ್‌ಗೆ ಹಣ ನೀಡಿಕೆಯನ್ನು 5293 ಕೋಟಿ ರೂಪಾಯಿಗಳಿಂದ 6300 ಕೋಟಿ ರೂ.ಗಳಿಗೆ ಏರಿಸಿರುವುದು ಐಸಿಡಿಎಸ್‌ನ್ನು ಸಾರ್ವತ್ರಿಕಗೊಳಿಸುವ ಯುಪಿಎಯ ವಚನವನ್ನು ಈಡೇರಿಸಲು ಏನೇನೂ ಸಾಲುವುದಿಲ್ಲ.

-ಅಖಿಲ ಭಾರತ ಅಂಗನವಾಡಿ ನೌಕರರ ಮತ್ತು ಸಹಾಯಕಿಯರ ಒಕ್ಕೂಟ.

ಅಭಿವೃದ್ಧಿಯೆಂದರೆ ಬರೀ ಮೇಲ್ಸೆತುವೆ, ರಸ್ತೆ, ಕಟ್ಟಡಗಳಲ್ಲ, ಉಳ್ಳವರ ಅಭಿವೃದ್ಧಿಯೂ ಅಲ್ಲ. ಮಾನವ ಅಭಿವೃದ್ಧಿಯಾಗಬೇಕು. ದಲಿತ ಬದುಕಿನಲ್ಲಿನ ಬದಲಾವಣೆಯ ಮೂಲಕ ಅಭಿವೃದ್ಧಿ ಎಂದರೆ ಏನೆಂದು ಕಂಡುಕೊಳ್ಳುವಂತಾಗಬೇಕು.

ಕರ್ನಾಟಕ ದಲಿತ ಮಾನವ ಅಭಿವೃದ್ಧಿ ಸೂ

ದಲಿತರ ಸ್ಥಾನ ಎಲ್ಲಿ?

ಕರ್ನಾಟಕ ಸರ್ಕಾರ 2005, 06ರ ಮಾನವ ಅಭಿವೃದ್ಧಿ ವರದಿಯನ್ನು ಬಿಡುಗಡೆ ಮಾಡಿದೆ. ಭಾರತ ದೇಶ ಮಾನವ ಅಭಿವೃದ್ಧಿಯಲ್ಲಿ ಕೊನೆ ಕೊನೆಯ ಸ್ಥಾನ ಅಲಂಕರಿಸಿರುವ ನಡುವೆ ರಾಜ್ಯದ ಮಾನವ ಅಭಿವೃದ್ಧಿಯಲ್ಲಿ ಪ್ರತ್ಯೇಕವಾಗಿ 'ದಲಿತ ಮಾನವ ಅಭಿವೃದ್ಧಿ ವರದಿಯನ್ನು ಬಿಡುಗಡೆ ಮಾಡಲಾಗಿದೆ. ದಲಿತರ ಬಗ್ಗೆ ಮಾತನಾಡುವ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಗೋಸುಂಬೆತನದ ನಗ್ನದರ್ಶನ ಈ ವರದಿ ಮೂಲಕ ಬಹಿರಂಗಗೊಂಡಿದೆ.

ಮಾನವ ಅಭಿವೃದ್ಧಿ ಎಂಬುದು ಜೀವನ ಪರಿಸ್ಥಿತಿ, ಶಿಕ್ಷಣ, ಧೀರ್ಘಾಯುಷ್ಯ, ಉತ್ತಮ ಜೀವನ ನಿರ್ವಹಣೆ ಬೇಕಾಗುವ ಆರ್ಥಿಕ ಸಂಪನ್ಮೂಲದ ಮೇಲಿನ ಹಿಡಿತ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಅಭಿವೃದ್ಧಿ ಎಂದರೆ ಕೇವಲ ರಸ್ತೆಗಳು, ಫ್ಲೈ ಓವರ್‌ಗಳು, ಗಗನಚುಂಬಿ ಕಟ್ಟಡಗಳು ನಿರ್ಮಿಸುವುದೇ ಆಗಿದೆ ಎಂದು ವಾದಿಸುವ ಒಂದು ವರ್ಗವಿದೆ. ರಾಜ್ಯದ ಜಿಡಿಪಿ ಹೆಚ್ಚಾಗಿದೆ ಎಂದೂ ರಾಜ್ಯದ ಅಭಿವೃದ್ಧಿಯಾಗಿದೆ ಎಂದೂ ವಾದಿಸುವವರಿಗೇನು ಕಮ್ಮಿಯಿಲ್ಲ. ಆದರೆ ರಾಜ್ಯದಲ್ಲಿ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟ ದಲಿತರು ಮತ್ತು ಮಹಿಳೆಯರ ಏಳಿಗೆಯಾದಾಗ ಮಾತ್ರವೇ ಕರ್ನಾಟಕದ ಸಮಗ್ರ ಜನತೆಯ ಏಳಿಗೆಯಾಗಿರುತ್ತದೆ. ಇದು ಸಾಧ್ಯವಾಗದೇ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ.

ಕರ್ನಾಟಕದ ದಲಿತರ ಭೂಮಿ, ಉದ್ಯೋಗ, ಶಿಕ್ಷಣ, ಆದಾಯ, ವೆಚ್ಚ, ನೈರ್ಮಲ್ಯ, ರಸ್ತೆ, ವಿಚಾರಗಳ ತುಲನೆ ಮಾಡಿದಾಗ ಈ ವರ್ಗದ ಹೀನಾಯ ಸ್ಥಿತಿಯ ದರ್ಶನವಾಗುತ್ತದೆ.

ರಾಜ್ಯದ ಒಟ್ಟು ಜನಸಂಖ್ಯೆಯ ಶೇ.16.21ರಷ್ಟು ಇರುವ ದಲಿತರ ಕೈಯಲ್ಲಿ ಕೇವಲ ಶೇ.8.7 ಭೂಮಿಯಿದೆ ಮತ್ತು ಇವರು ಹೊಂದಿರುವ ಭೂಮಿಗೆ ಬಹುತೇಕ ನೀರಾವರಿ ಸೌಲಭ್ಯವಿಲ್ಲ. ಆದಾಯ ಅತ್ಯಂತ ಕಡಿಮೆ ಇರುವ ಕೃಷಿ ವಲಯದಲ್ಲಿ ಪರಿಶಿಷ್ಟ ಜಾತಿಯ ಶೇ.79ರಷ್ಟು ಉದ್ಯೋಗ ಅವಲಂಬಿಸಿದ್ದಾರೆ. ಇನ್ನು ಇದಕ್ಕೆ ತದ್ವಿರುದ್ಧವಾಗಿ ಕೈಗಾರಿಕೆ ಹಾಗೂ ಸೇವಾ ವಲಯದಲ್ಲಿ ಕ್ರಮವಾಗಿ ಶೇ.10.43 ಮತ್ತು ಶೇ.10.74 ಇದ್ದಾರೆ. ಜಾಗತೀಕರಣದ ಪರಿಣಾಮ ಈ ಅಂಕಿ ಅಂಶಗಳು ಇನ್ನಷ್ಟು ಇಳಿಮುಖಗೊಂಡಿದೆ. ಅಂದರೆ ಆದಾಯ ಹೆಚ್ಚು ತರುವ ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ದಲಿತರ ಸಂಖ್ಯೆ ಅತ್ಯಲ್ಪ ಎಂದಾಯಿತು.


ಇವರ ಆದಾಯ ಕಡಿಮೆ ಇರುವುದರಿಂದಾಗಿ ಮಾಸಿಕ ಆದಾಯವೂ ಸಹಜವಾಗಿ ಕಡಿಮೆಯಾಗಿರುತ್ತದೆ.

ಪರಿಶಿಷ್ಟ ಜಾತಿ ಜನರ ವೆಚ್ಚ ಗ್ರಾಮೀಣ ಪ್ರದೇಶದಲ್ಲಿ 419 ರೂ. ಇದ್ದರೆ, ಇತರೆ ವರ್ಗದ ಜನರ ಮಾಸಿಕ ವೆಚ್ಚ 560 ರೂ. ಆಗಿದೆ.

ದಲಿತರು ಸಾಕ್ಷರತೆಯಲ್ಲೂ ಕೂಡ ತೀರ ಹಿಂದುಳಿದ ವರ್ಗವಾಗಿದ್ದಾರೆ. 1981ರಲ್ಲಿ ದಲಿತರಲ್ಲಿ ಶೇ.27.62 ಇತ್ತು. 1991ರಲ್ಲಿ ಶೇ.38.1 ಮತ್ತು 2001ರಲ್ಲಿ 52.87 ಪ್ರಮಾಣವಿದೆ.

ಶಿಕ್ಷಣದ ವಿಚಾರಕ್ಕೆ ಬಂದರೆ 2002, 03ರಲ್ಲಿ ಪದವಿ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ದಾಖಲಾತಿ ಶೇ.6.8 ಇದ್ದರೆ, ಡಿಪ್ಲೊಮಾ ಕೋರ್ಸುಗಳಲ್ಲಿ ಕೇವಲ 0.8 ರಷ್ಟಿದೆ. ಅಂದರೆ ಅಧಿಕ ಆದಾಯ ತರುವ ಉದ್ಯೋಗಗಳು ತಾಂತ್ರಿಕ ಕೌಶಲ್ಯ ಹೊಂದಿದವುಗಳಾಗಿವೆ ಯಾದ್ದರಿಂದ ಇವರ ಆದಾಯವೂ ಕೂಡ ಕಡಿಮೆ ಎಂದಾಯಿತು.

1991ರ ಜನಗಣತಿ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿದ ಶೇ.9.24 ಕುಟುಂಬಗಳು ಮಾತ್ರ ಶೌಚಾಲಯಗಳನ್ನು ಹೊಂದಿದ್ದಾರೆ. ಇತರೆ ಜಾತಿಗಳಲ್ಲಿ ಈ ಪ್ರಮಾಣ ಶೇ.26.97. 2001ರ ಜನಗಣತಿಯಲ್ಲಿ ಶೇ.27.18 ಪ್ರಮಾಣ ಏರಿಕೆ ಕಂಡಿದ್ದರೂ ಇತರೆ ಮೇಲ್ಜಾತಿಗಳ ಪ್ರಮಾಣ 40.8ಗೆ ಏರಿಕೆಯಾಗಿದೆ. ಅಂದರೆ ಇದರಲ್ಲೀಗ ಅಂತರ ಹೆಚ್ಚಿದೆ ಎಂದಾಯಿತು.



ಶೇ.17.2ರಷ್ಟು ಪರಿಶಿಷ್ಟ ಜಾತಿ ಕಾಲೋನಿ/ಗ್ರಾಮಗಳು ಮಾತ್ರ ಸಮುದಾಯ ಶೌಚಾಲಯಗಳನ್ನು ಹೊಂದಿವೆ. ಶೇ.43.69ರಷ್ಟು ಪರಿಶಿಷ್ಟ ಜಾತಿ ಕುಟುಂಬಗಳು ಚರಂಡಿ ವ್ಯವಸ್ಥೆ ಹೊಂದಿಲ್ಲ. ಅಂದರೆ ನೈರ್ಮಲ್ಯದಿಂದ ಕೂಡ ದೂರ ಉಳಿದಿದ್ದಾರೆ. ಇದರಿಂದಾಗಿ ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಜನರ ಆರೋಗ್ಯವು ಸಮರ್ಪಕವಾದ ಆಹಾರ ಸೇವನೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಪೌಷ್ಠಿಕ ಆಹಾರ ಸೇವನೆ ಅತ್ಯಗತ್ಯ. ಆದರೆ ಶೇ.55.7ರಷ್ಟು ಪರಿಶಿಷ್ಟ ಜಾತಿ ಮಹಿಳೆಯರು ಮಾತ್ರ ತಮ್ಮ ಆಹಾರದಲ್ಲಿ ಹಾಲು ಅಥವಾ ಮೊಸರನ್ನು ಬಳಸುತ್ತಾರೆ ಮತ್ತು ಕೇವಲ ಶೇ.39.8 ಮಂದಿ ಪರಿಶಿಷ್ಟ ಜಾತಿ ಮಹಿಳೆಯರು ಹಣ್ಣು ಬಳಕೆ ಮಾಡುತ್ತಿದ್ದಾರೆ.

ಅಂದರೆ ಮಾನವ ಅಭಿವೃದ್ಧಿ ಎಂಬುದು ಮೇಲೆ ಹೇಳಿದಂತೆ ಜೀವನ ನಿರ್ವಹಣೆ, ಶಿಕ್ಷಣ, ಉದ್ಯೋಗ, ಆರ್ಥಿಕ ಸಂಪನ್ಮೂಲದ ಹಿಡಿತ ಇತರ ಅಂಶಗಳನ್ನು ಒಳಗೊಂಡಿರುತ್ತದೆ. ಆದರೆ ಈ ಎಲ್ಲಾ ಕ್ಷೇತ್ರಗಳಲ್ಲಿ ದಲಿತರ ಸ್ಥಿತಿಗತಿ ಅತ್ಯಂತ ಕೆಳಮಟ್ಟದಲ್ಲಿದೆ.

ದೇಶ ಹಾಗೂ ರಾಜ್ಯ ಮಾನವ ಅಭಿವೃದ್ಧಿಯಲ್ಲಿ ಹಿಂದಿದೆ ಎಂಬುದನ್ನು ಗಮನಿಸುವಾಗಲೇ ದಲಿತ ಮಾನವ ಅಭಿವೃದ್ಧಿ ಇನ್ನಷ್ಟು ಹೀನಾಯ ಸ್ಥಿತಿಯಲ್ಲಿದೆ ಎಂದಾಯಿತು. ಆದ್ದರಿಂದ ಬಡತನ ನಿವಾರಣೆ ಕಾರ್ಯಕ್ರಮಗಳು ಎಲ್ಲಾ ಜಾತಿಯ ಬಡವರ ಮೇಲೆ ಕೇಂದ್ರೀಕರಿಸುವ ಜೊತೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳನ್ನು ಹೆಚ್ಚು ಕೇಂದ್ರೀಕರಿಸಬೇಕಿದೆ.

ಇಂತಹ ಪರಿಸ್ಥಿತಿಯಲ್ಲಿರುವ ದಲಿತರ ಬದುಕನ್ನು ನಿವಾರಿಸಲು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ದಲಿತರ ಬದುಕಿಗೆ ಅಪ್ಪಳಿಸುತ್ತಿವೆ. ದಲಿತರ ಏಳ್ಗೆಗೆ ಮುಖ್ಯವಾದ ಭೂಮಿ ಹಕ್ಕನ್ನು ಭೂಸುಧಾರಣೆ ಕಾನೂನನ್ನು ತಿರುಚುವ ಮೂಲಕ ಕಸಿದುಕೊಳ್ಳಲಾಗಿದೆ. ಹಾಗೆಯೇ ಖಾಸಗೀಕರಣ, ಯಾಂತ್ರೀಕರಣ ನೀತಿಗಳು ಉದ್ಯೋಗದ ಹಕ್ಕನ್ನು ಕಸಿದುಕೊಂಡಿವೆ. ಆರೋಗ್ಯ ಮತ್ತು ಶಿಕ್ಷಣದಿಂದ ದಲಿತರು ವಂಚಿತರಾಗುತ್ತಿದ್ದಾರೆ. ಆಹಾರ ಸೇವನೆ ದಿನೇ ದಿನೇ ಕುಸಿಯುತ್ತಿದೆ. ಆಹಾರಕ್ಕೆ ನೀಡುವ ಸಬ್ಸಿಡಿ ಕಡಿತದಿಂದಾಗಿ ಹಾಗೂ ಬೆಲೆಯೇರಿಕೆ ನೀತಿಯಿಂದಾಗಿ ಆಹಾರ ಭದ್ರತೆಗೆ ಧಕ್ಕೆ ಬಂದಿದೆ.

ಈ ಹಿನ್ನೆಲೆಯಲ್ಲಿ ದಲಿತರ ಹಕ್ಕುಗಳಿಗಾಗಿ ಹೋರಾಟ ನಡೆಸುವಾಗ ಉದಾರೀಕರಣದ ನೀತಿಗಳನ್ನು ಹಿಮ್ಮೆಟ್ಟಿಸುವುದು ಅನಿವಾರ್ಯವಾಗಿದೆ.

ಕೇಂದ್ರ ಸರ್ಕಾರದ ನಿರ್ದೇಶನದಂತೆ ಕರ್ನಾಟಕ ಸರ್ಕಾರ ಪರಿಶಿಷ್ಟ/ಪಂಗಡದ ಏಳ್ಗೆಗಾಗಿ ಜನಸಂಖ್ಯೆಗೆ ಅನುಗುಣವಾಗಿ 41000 ಕೋಟಿ ರೂಗಳನ್ನು ಒದಗಿಸಲಾಗಿದೆ. ಆದರೆ ಹಣದ ಹೆಚ್ಚಿನ ಭಾಗ ಸೋರಿಹೋಗುತ್ತಿದೆ. ಬದಲಾಗಿ ಉದ್ಯೊಗ ಸೃಷ್ಠಿ, ಆರೋಗ್ಯ ಮತ್ತಿತರ ಪ್ರಮುಖ ವಿಷಯಗಳಿಗೆ ಬಳಸಬೇಕಿದೆ ಮತ್ತು 4100 ಕೋಟಿ ರೂ.ಗಳನ್ನು ಏಕೀಕೃತಗೊಳಿಸಿ ಏಕಗವಾಕ್ಷಿ ಯೋಜನೆ ಮೂಲಕ ಜಾರಿಗೊಳಿಸಿದಾಗ ಮಾತ್ರ ಸೋರಿಕೆ ತಡೆಗಟ್ಟಲು ಹಾಗೂ ಸದ್ಬಳಕೆ ಸಾಧ್ಯವಾಗುವುದು.

○ ಲಿಂಗರಾಜು

ದಲಿತರ ಸರ್ವತೋಮುಖ ಪ್ರಗತಿ ತುರ್ತು ಅಗತ್ಯ

- ಸಂವಾದದಲ್ಲಿ ಹೊಮ್ಮಿದ ಅಭಿಪ್ರಾಯ -

ದಲಿತ ಮಾನವ ಅಭಿವೃದ್ಧಿ ಕುರಿತ ಸಂವಾದ ಕಾರ್ಯಕ್ರಮವನ್ನು ಫೆಬ್ರವರಿ 27ರಂದು ಬೆಂಗಳೂರಿನ ಶಾಸಕರ ಭವನದಲ್ಲಿ ಸಿಪಿಐ(ಎಂ) ರಾಜ್ಯಸಮಿತಿ ಸಂಘಟಿಸಿತು.

ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಕೆ.ವರದರಾಜನ್ "ಸ್ವಾತಂತ್ರ್ಯ ನಂತರದಲ್ಲಿ ಯಾವುದೇ ರಾಜಕೀಯ ಪಕ್ಷಗಳು ದಲಿತರ ಏಳ್ಗೆಗೆ ಕನಿಷ್ಠ ಕಾರ್ಯಕ್ರಮಗಳನ್ನು ರೂಪಿಸದೇ ಕೇವಲ ಮತಬ್ಯಾಂಕ್‌ಗಳಾಗಿ ಬಳಸಿಕೊಂಡಿರುವುದು ಬೆಳೆದುಬಂದಿದೆ" ದಲಿತರು ವರ್ಗಶೋಷಣೆಯ ಜೊತೆಗೆ ಜಾತಿಶೋಷಣೆ ಸಿಲುಕಿ ಬಳಲುವಂತಾಗಿದೆ. ಈ ಹಿನ್ನೆಲೆಯಲ್ಲಿ "ವರ್ಗ ಹೋರಾಟದ ಜೊತೆ ಜೊತೆಯಲ್ಲಿ ಸಾಮಾಜಿಕ ಅಸಮಾನತೆಯ, ಜಾತಿ ವ್ಯವಸ್ಥೆ ವಿರುದ್ಧ ಚಳುವಳಿ ಬೆಳೆದು ಬರಬೇಕಿದೆ ಎಂದು ಹೇಳಿದರು.

ವಿಚಾರ ಮಂಡಿಸಿ ಮಾತನಾಡಿದ ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ಟಿ.ಆರ್. ಚಂದ್ರಶೇಖರ್ ಮಾನವ ಅಭಿವೃದ್ಧಿ ಎಂಬುದು ಪರಿಮಾಣಾತ್ಮಕವಾಗಿ ಅಳತೆ ಮಾಡುವ ಸೂಚ್ಯಾಂಕವಾಗಿದೆ. "ಸರ್ಕಾರಗಳು ಆಹಾರ ಭದ್ರತೆಯನ್ನು ಸಾಧಿಸಿದ್ದೇವೆ ಎಂದು ಹೇಳುತ್ತಿವೆಯೇ ವಿನ: ಜನರ ಆಹಾರಭದ್ರತೆ ಕಾಪಾಡಲಾಗಿದೆಯೇ? ಎಂಬುದನ್ನು ಹೇಳುತ್ತಿಲ್ಲ" ಕೇವಲ ಆಹಾರ ಉತ್ಪಾದನೆ ಹೆಚ್ಚಿಸಿದರೆ ಸಾಲದು ಬದಲಾಗಿ ಬಡವರಿಗೆ ಆಹಾರ ದಕ್ಕುವಂತೆ ಮಾಡುವುದು ಆದ್ಯತೆಯಾಗಿದೆ. ಆಗ ಮಾತ್ರವೇ ಜನರ ಹಸಿವನ್ನು ಹಿಂಗಿಸಲು ಸಾಧ್ಯ. ಉದ್ಯೋಗ, ಆಹಾರ ಉತ್ಪಾದನೆ, ಶಿಕ್ಷಣ ಹೆಚ್ಚಿದಂತೆ ಕಾಲಾನುಕ್ರಮದಲ್ಲಿ ಎಲ್ಲರಿಗೂ ಅವು ಅಂದರೆ ದಲಿತರು ಕೆಳ ವರ್ಗಗಳಿಗೂ ಪಸರಿಸುತ್ತವೆ ಎಂಬ ವಾದಗಳು ಅಧ್ಯಯನದಿಂದ ಸುಳ್ಳಾಗಿವೆ. ಆದ್ದರಿಂದ ಆದ್ಯತೆಯನ್ನು ಕಂಡುಕೊಳ್ಳಬೇಕಿದೆ. ಲಿಂಗತಾರತಮ್ಯ ಸಮಾಜದಲ್ಲಿ ಹೆಚ್ಚುತ್ತಿದೆ. ಪುರುಷರಿಗಿಂತ ಮಹಿಳೆಯರ ಸಂಖ್ಯೆ ಹೆಚ್ಚಿರಬೇಕೆಂದು ವೈದ್ಯಕೀಯ ವಿಜ್ಞಾನ ಹೇಳುತ್ತದೆ.

ಆದರೆ ನಮ್ಮ ಅಂಕಿಅಂಶಗಳು ಇದಕ್ಕೆ ತದ್ವಿರುದ್ಧ ಅಂಶದಿಂದ ಕೂಡಿವೆ. 1991ರಲ್ಲಿ 1000 ಪುರುಷರಿಗೆ 960 ಮಹಿಳೆಯರಿದ್ದರು. ಅದು 2000ರಲ್ಲಿ 1000ಕ್ಕೆ 948 ಆಗಿದೆ. ಅಂದರೆ ಅಂತರ ಹೆಚ್ಚಾಗುತ್ತಿವೆ. ಪ್ರತಿ ಸಾವಿರಕ್ಕೆ 52 ಮಹಿಳೆಯರು ಕಾಣೆಯಾಗಿದ್ದಾರೆ ಎಂಬ ವರದಿಗಳು ಆತಂಕ ಸೃಷ್ಟಿಸಿವೆ ಎಂದರು. "ಆಯ್ಕೆಗೆ ಅವಕಾಶಗಳಿಲ್ಲದಿರುವುದನ್ನು ಬಡತನ" ಎಂದು ಅಮರ್ತ್ಯಸೇನ್ ಕರೆದಿದ್ದಾರೆ. ಹೀಗಾಗಿ ಅವಕಾಶಗಳು ಸಮಾಜದ ಕಟ್ಟಕಡೆಯ ಜನರಿಗೆ ದಕ್ಕುವಂತಾಗಬೇಕು. ಕೊನೆಯದಾಗಿ "ಮಾನವ ಅಭಿವೃದ್ಧಿ ಎಂಬುದು ಜನತೆಯ ಘನತೆಯ ಮೇಲೆ ರೂಪಿತವಾಗಬೆಕೆಂದು" ಹೇಳಿದರು.

ಮಾಜಿ ಶಾಸಕ, ಸಾಹಿತಿ ಎಲ್.ಹನುಮಂತಯ್ಯ ದಲಿತರ ಆರ್ಥಿಕ ವಿಚಾರಗಳ ಕುರಿತು ಚರ್ಚೆ ಹುಟ್ಟುಹಾಕಿರುವುದು ಅಭಿನಂದನಾರ್ಹ ಎಂದು ಮಾತು ಆರಂಭಿಸಿ "ಮನುಷ್ಯರ ಶ್ರಮವನ್ನು ಲೆಕ್ಕಹಾಕದೆ ಮಾನವ ಅಭಿವೃದ್ಧಿ ಸೂಚ್ಯಾಂಕ ರೂಪಿಸುವುದರಲ್ಲಿ ಅರ್ಥವಿಲ್ಲ" ದಲಿತರ ಅಭಿವೃದ್ಧಿ ಪರಿಕಲ್ಪನೆ ಎಂದರೆ ಕೇವಲ ವಿದ್ಯಾರ್ಥಿ ವೇತನ, ಹಾಸ್ಟೆಲ್‌ಗಳನ್ನು ಒದಗಿಸುವುದಷ್ಟೇ ಎಂಬಂತಾಗಿದೆ. ಈ ತಪ್ಪು ಕಲ್ಪನೆಯಿಂದ ಹೊರ ಬರಬೇಕಿದೆ. ಕೇವಲ ಮೀಸಲಾತಿಯಿಂದ ಮಾನವ ಅಭಿವೃದ್ಧಿ ಸಾಧ್ಯವಿಲ್ಲ. ಸರ್ಕಾರದ ಹಣ ಎಂದರೆ ಜನಸಂಖ್ಯೆಯ ಆಧಾರದಲ್ಲಿ ಹಂಚಿಕೆಯಾಗಬೇಕು ಮಾತ್ರವಲ್ಲ ಆದ್ಯತೆಯ ಮೇರೆಗೆ ಹಂಚಿಕೆಯಾಗಬೇಕು ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ಮಾತನಾಡಿ ಬಜೆಟ್‌ನಲ್ಲಿ ದಲಿತರಿಗೆ ಮೀಸಲಾಗಿರುವ ಹಣ ಅಪವ್ಯಯವಾಗದಂತೆ ಏಕಗವಾಕ್ಷಿಯಡಿ ಖರ್ಚಾಗಬೇಕು. ಕೇವಲ ಆರ್ಥಿಕ ಅಂಶಗಳಲ್ಲದೆ ಸಾಮಾಜಿಕ ನ್ಯಾಯದಲ್ಲಿನ ಕಾನೂನುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಭೂಹೀನರಿಗೆ ಭೂಮಿ ನೀಡುವ ಭೂ ಸುಧಾರಣೆ ಜಾರಿಯಾಗಬೇಕು. ಆಗ ಮಾತ್ರವೇ ದಲಿತರ ಅಭಿವೃದ್ಧಿ ಸಾಧ್ಯ ಎಂದರು.

ಡಿ.ಎಸ್.ಎಸ್ ಮುಖಂಡ ಮಾವಳ್ಳಿ ಶಂಕರ್ ಮಾತನಾಡಿ ಮೀಸಲಾತಿ ಕುರಿತು ತಪ್ಪು ಮಾಹಿತಿಗಳನ್ನು ಹರಿಬಿಟ್ಟು ಮೇಲ್ವರ್ಗದ ಶಿಕ್ಷಿತ ಯುವಜನರಲ್ಲಿ ಅಸಹನೆ ಉಂಟಾಗುವಂತೆ ವ್ಯವಸ್ಥಿತಿ ಪ್ರಯತ್ನ ನಡೆಸಲಾಗುತ್ತಿದೆ. ಇದು ತಪ್ಪಾಗಬೇಕು. ದಲಿತರ ಪರ ಐಕ್ಯ ಹೋರಾಟದಲ್ಲಿ ಡಿಎಸ್‌ಎಸ್ ಭಾಗಿಯಾಗುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್‌ರವರು ವರ್ಗ ಹೋರಾಟದ ಜೊತೆಯಲ್ಲಿ ಜಾತಿ ತಾರತಮ್ಯದ ವಿರುದ್ಧ ನಡೆಸಿದ ಸಮರಧೀರ ಹೋರಾಟದ ಪರಿಣಾಮ ಕೇರಳ, ಪಶ್ಚಿಮ ಬಂಗಾಳ ಹಾಗೂ ತ್ರಿಪುರಾಗಳಲ್ಲಿ ದಲಿತರ ಸ್ಥಿತಿ ಉತ್ತಮವಾಗಿದೆ. ಭೂಮಿಗಾಗಿ, ಅಸ್ಪೃಷ್ಯತೆ ವಿರುದ್ಧ ಧೀರೋದ್ಧಾತ ಹೋರಾಟದಲ್ಲಿ ಸಾವಿರಾರು ಜನರು ಪ್ರಾಣ ಕೊಟ್ಟಿದ್ದಾರೆ. ಇಂಥ ಹೋರಾಟಗಳು ಎಲ್ಲೆಡೆ ಬೆಳೆದು ಬರಬೇಕಿದೆ ಎಂದರು.


ಪ್ರಾಸ್ತವಿಕವಾಗಿ ಸಿಪಿಐ(ಎಂ) ಮುಖಂಡ ಮಾರುತಿ ಮಾನ್ಪಡೆ ಮಾತನಾಡಿದರು. ಗೋಪಾಲಕೃಷ್ಣ ಸ್ವಾಗತಿಸಿ ರಾಜಶೇಖರ್‌ಮೂರ್ತಿ ವಂದಿಸಿದರು.

ಆಸಿಡ್ ಧಾಳಿ ಕಾನೂನು ಕನಸಿನ ಗಂಟಾಗದಿರಲಿ

ಆಸಿಡ್ ಧಾಳಿ ಎಂಬುದೊಂದು ವಿಕೃತ ಮನಸ್ಸಿನ ಹೀನಕೃತ್ಯ. ಇದಕ್ಕೆ ಬಲಿಯಾದ ಹೆಣ್ಣಿನ ನೋವು ಅವರ್ಣನೀಯ. ಈ ಕ್ರೌರ್ಯದ ತಡೆ ನಿಟ್ಟಿನಲ್ಲಿ ಚರ್ಚೆ, ಕಾನೂನು ತರುವ ಯತ್ನ ಸಾಗಿದೆ. ಇದರಿಂದ ಉದ್ದೇಶ ಈಡೇರಬಹುದೇ? ಕಾನೂನಿಲ್ಲದೇ ಮತ್ತೇನಾಗಬೇಕು?



ಕೆ.ಎಸ್.ವಿಮಲ



"ನಾನಿರುವ ಬಾಡಿಗೆ ಮನೆಯಿಂದ ನನ್ನನ್ನು ಓಡಿಸುವ ಪ್ರಯತ್ನ ನಡೆದಿದೆ. ಬೇರ ಕಡೆ ಬಾಡಿಗೆಗೆ ಮನೆ ಕೇಳಲು ಹೋದರೆ ಬಾಡಿಗೆಗೆ ಮನೆ ಕೊಡುವುದಿಲ್ಲ. ನನ್ನ ಮುಖ ನೋಡಲು ಯಾರೂ ಇಷ್ಟಪಡುವುದಿಲ್ಲ" - ಶಾಂತಿ. ಆ್ಯಸಿಡ್ ಧಾಳಿಯಿಂದ ಮುಖ ಪೂರ್ಣ ಸುಟ್ಟು ಕಣ್ಣಿನ ದೃಷ್ಟಿಗೂ ತೊಂದರೆಯಾದ ಮಹಿಳೆ. ಶಾಂತಿಯ ಇಬ್ಬರು ಮಕ್ಕಳ ಭವಿಷ್ಯವೂ ತೂಗುಯ್ಯಾಲೆಯಲ್ಲಿ.

"ನನ್ನ ಜೀವಮಾನವಿಡೀ ನಾನು ಈ ವಿಕಾರ ಸ್ವರೂಪದಲ್ಲಿ ಪ್ರತಿ ಕ್ಷಣ ಸಾಯುತ್ತಿರುತ್ತೇನೆ. ಆದರೆ ನನ್ನ ಈ ಸ್ಥಿತಿಗೆ ಕಾರಣನಾದ ಗಂಡ ಶಿಕ್ಷೆ ಮುಗಿಸಿ ಹೊರ ಬಂದ. ಏನೂ ಆಗದವನಂತೆ ನನ್ನೆದುರೇ ನಿರಾತಂಕವಾಗಿ ತಿರುಗಾಡುತ್ತಿದ್ದಾನೆ. ಇದೆಷ್ಟು ಸರಿ?" ಹಸೀನಾ-ಮುಖವೊಂದು ಮಾಂಸದ ಮುದ್ದೆಯಾಗಿ ಮಾತ್ರ ಉಳಿದ ಆ್ಯಸಿಡ್ ವಿಕ್ಟಿಮ್.

ಕಣ್ಣೀರು ಉಳಿದಿರಲಿಲ್ಲ

ಈ ಎರಡು ಹೃದಯ ಕಲಕುವ ಮಾತುಗಳು ಈ ವ್ಯವಸ್ಥೆಗೆ ಹಿಡಿದ ಕನ್ನಡಿ. ಈ ನೆಲದಲ್ಲಿ ಕಾನೂನುಗಳಿಗೆ ಕೊರತೆ ಇಲ್ಲ. ಆದರೆ ಕಾನೂನಿನ ಸಮರ್ಪಕ ಜಾರಿಯಲ್ಲಿರುವ ದೋಷಗಳೇ ಬಹಳ ಸಾರಿ ತೊಡಕಾಗುವ ಸಂದರ್ಭಗಳುಂಟು. ಈ ಮೇಲಿನ ಇಬ್ಬರು ಸಹೋದರಿಯರು ತಮ್ಮ ಕಥೆಯನ್ನು ಹೇಳುವಾಗ ಸಭಾಂಗಣದಲ್ಲಿದ್ದವರ ಕಣ್ಣಲ್ಲಿ ನೀರಾಡಿತು. ಆದರೆ ಅವರಿಬ್ಬರ ಕಣ್ಣಲ್ಲಿ ಹೊರಬರಲು ನೀರೇ ಉಳಿದಿರಲಿಲ್ಲ. ಇದು ನಡೆದದ್ದು 23.02.2008ರಂದು ರಾಷ್ಟ್ರೀಯ ಮಹಿಳಾ ಆಯೋಗ ಬೆಂಗಳೂರಿನಲ್ಲಿ ನಡೆಸಿದ ಕಾರ್ಯಾಗಾರದ ಸಂದರ್ಭದಲ್ಲಿ, ದೇಶದಲ್ಲಿ ಆ್ಯಸಿಡ್ ಧಾಳಿಯ ಪ್ರಕರಣಗಳು ಹೆಚ್ಚುತ್ತಿವೆ. ಕ್ರೌರ್ಯದ ಪರಿಮೋಚ್ಛ ಮಟ್ಟದ ಹಿಂಸೆಯೆಂದರೆ ಇದು. ಆ್ಯಸಿಡ್ ಧಾಳಿಗೆ ಒಳಗಾದವರ ಮಾತಿನಲ್ಲಿಯೇ ಹೇಳುವುದಾದರೆ, ವಿಷ ಕುಡಿಸಿ, ನೇಣು ಹಾಕಿ ಸಾಯಿಸಿದಲ್ಲಿ ಒಮ್ಮೆಲೆ ನಮ್ಮ ಜೀವ ಹೋಗಿ ಬಿಡುತ್ತದೆ. ಮತ್ತೆ ನೋವು ಅನುಭವಿಸುವ ಸಂದರ್ಭ ಬರುವುದಿಲ್ಲ. ಆದರೆ ಇದು ಒಮ್ಮೆ ನಡೆಸಿದ ಕ್ರೌರ್ಯ ಜೀವ ಮಾನವಿಡೀ ಅನುಭವಿಸುತ್ತಲೇ ಇರುತ್ತೇವೆ. ಇದು ಅಕ್ಷರಶಃ ಸತ್ಯ. ಹಿಂದೊಮ್ಮೆ ನಾನೇ ಇದೇ ಪತ್ರಿಕೆಗೆ ಬರೆದಂತೆ ಹಿಂದೆಲ್ಲ ಹೊಡೆತ, ಬಡಿತ, ಕೊಲೆ.... ಸಹ್ಯ ಎನಿಸುವ ದೌರ್ಜನ್ಯದ ಕ್ರಿಯೆಗಳಾಗಿ ಮಾರ್ಪಟ್ಟಿವೆ.

ಕರಡು ಕಾನೂನು ಮತ್ತು ಕಾಡುವ ಪ್ರಶ್ನೆ

ರಾಷ್ಟ್ರೀಯ ಮಹಿಳಾ ಆಯೋಗದ ಆ್ಯಸಿಡ್ ಪ್ರಕರಣಗಳನ್ನು ತಡೆಯುವತ್ತ ಒಂದು ಕರಡು ಮಸೂದೆಯ ಪ್ರಸ್ತಾಪವನ್ನು ತಯಾರಿಸಿದೆ. ಇದೊಂದು ಸ್ವಾಗತಾರ್ಹ ಕ್ರಮವೆಂದು ಒಪ್ಪಿಕೊಳ್ಳುತ್ತಲೇ-ಕೇವಲ ಕಾನೂನು ಬಂದರೆ ಮಾತ್ರ ಸಾಲದೆಂಬುದಕ್ಕೆ ಮೇಲಿನ ನೊಂದ ದನಿಗಳ ಮಾತುಗಳೇ ಸಾಕ್ಷಿಯಾಗುತ್ತವೆ. ಹಸೀನಾ ಜೀವಂತ ಮಾಂಸದ ಮುದ್ದೆಯಾಗಿರುವಾಗ ಅದಕ್ಕೆ ಕಾರಣನಾದ ವ್ಯಕ್ತಿ ಜೈಲಿನಿಂದ ಹೊರಬಂದು ನಿರಾಳ ಜೀವನ ನಡೆಸುತ್ತಾನೆ. ಅಂತಹ ಹೀನ ಕ್ರೌರ್ಯ ಎಸಗಿದ ವ್ಯಕ್ತಿಗೆ ಕನಿಷ್ಟ ಜೀವಾವಧಿ ಶಿಕ್ಷೆ ನೀಡದಿದ್ದಲ್ಲಿ ಅವಳಿಗೆಂತಹ ಯಾತನೆಯಾಗಬಹುದು. ಇದು ಅವಳೇ ಕೇಳಿದ ಪ್ರಶ್ನೆ. ಅದಕ್ಕಾಗಿ ಒಂದು ಹೊಸ ಕಾನೂನು ಬೇಕೆಂದು ಕಾಯಬೇಕೇ? ಈಗಿರುವ ಕ್ರಿಮಿನಲ್ ಪೀನಲ್ ಕೋಡ್, ಇಂಡಿಯನ್ ಪೀನಲ್ ಕೋಡ್‌ಗಳ ಅಡಿಯಲ್ಲಿ ಉಗ್ರ ಶಿಕ್ಷೆಗೆ ಅವಕಾಶವಿದ್ದರು ಅದೇಕೆ ಬಳಕೆಯಾಗುವುದಿಲ್ಲ. ಇದು ನಮ್ಮನ್ನೆಲ್ಲ ಕಾಡಬೇಕಾದ ಪ್ರಶ್ನೆ. ಬಹುಶಃ ಇದು ಅಧಿಕಾರದಾಚೆ ಇರುವವರನ್ನು ಕಾಡುತ್ತದೆ. ಆದರೆ ಅಧಿಕಾರದ ಒಳಗಿರುವ ವ್ಯಕ್ತಿಗಳು ಇಂತಹ ಹೀನ ಕ್ರೌರ್ಯದ ಬಗೆಗೂ ಎಷ್ಟು ನಿಷ್ಕರುಣೆಗಳಾಗಿರುತ್ತಾರೆಂಬುದಕ್ಕೆ ಜೀವಂತ ಸಾಕ್ಷಿಯೂ ಅದೇ ಸಂದರ್ಭದಲ್ಲಿ ಹೊರಗೆ ಬಂತು.

"ನನಗೆ ಕೊಡಬೇಕಾದ 10,000 ಪಡೆಯಲು ಮಹಿಳಾ ಆಯೋಗದ ಕಛೇರಿಗೆ ನನ್ನ ತಂದೆ ರಜಾ ಹಾಕಿ 10 ಬಾರಿ ಹೋಗಿದ್ದರೂ ಇನ್ನೂ ಸಿಕ್ಕಿಲ್ಲ." ಇದು ಹಸೀನಾಳ ಅಳಲು. ಅವಳ ಮಾತು ಮುಗಿಯುವ ಮೊದಲೇ ಸಂಬಂಧಪಟ್ಟ ಅಧಿಕಾರಿಯಿಂದ ಸತ್ಯದ ತಲೆ ಮೇಲೆ ಹೊಡೆಯುವಂತಹ ಸುಳ್ಳು ಮಾತು ತೂರಿ ಬಂತು. "ಹಣ ಕೊಟ್ಟರೆ ಬೇಡವೆಂದು ಬಿಟ್ಟು ಹೋದರು". ಧೃತಿಗೆಡದ ಹಸೀನಾಳ ಪ್ರತಿರೋಧಕ್ಕೆ ಸಭಾಂಗಣದಲ್ಲಿದ್ದ ನಾವೆಲ್ಲ ದನಿ ಸೇರಿಸಿದಾಗ ವಾತಾವರಣದ ಬಿಗು ಅರಿತ ಅಧಿಕಾರಿ ಸಭೆ ಮುಗಿಯುವ ಮುನ್ನ ಹಣ ತರಿಸಿ ಕೊಟ್ಟರು. ಹಂಗೆ ಕೊಡುವಾಗ ಒಂದು ಪಿಸು ಮಾತು. "ನಮ್ಮ ಬಳಿ ಹಣವಿರಲಿಲ್ಲ. ಹಾಗಾಗಿ ಕೊಡಲಾಗಲಿಲ್ಲ". ಆ್ಯಸಿಡ್ ಎಸೆತದಷ್ಟೇ ಕ್ರೂರ ಇದೂ ಅಲ್ಲವೇ?

ಈಗ ಬರಲಿರುವ ಕಾನೂನು ಎಷ್ಟರಮಟ್ಟಿಗೆ ಫಲಕಾರಿಯಾದಿತೆಂಬುದು ಯಕ್ಷ ಪ್ರಶ್ನೆ. ಯಾಕೆಂದರೆ ಈಗಾಗಲೇ ಕರ್ನಾಟಕದಲ್ಲಿ ಹಿಂದಿನ ಸರ್ಕಾರ ಒಂದು ಪುನರ್ವಸತಿ ಪ್ಯಾಕೇಜ್ ಪ್ರಕಟಿಸಿತ್ತು. ಅದರಂತೆ ವೈದ್ಯಕೀಯ ಸೌಲಭ್ಯಗಳನ್ನು ಕೊಡುವ ಪ್ರಸ್ತಾಪವಿತ್ತು. ಅದು ಪ್ರಸ್ತಾಪಕಷ್ಟೇ ನಿಂತಿತು.

'ಪರಿಹಾರ' ಮಾರ್ಗ ಸೂಚಿ

ಈಗ ಕರ್ನಾಟಕ ಸರ್ಕಾರ-ಸುರಕ್ಷಾ ಯೋಜನೆ ಎಂಬ ಹೆಸರಿನಲ್ಲಿ ಆ್ಯಸಿಡ್ ಧಾಳಿಗೆ ಒಳಗಾದ ಮಹಿಳೆ ಮತ್ತು ಹೆಣ್ಣು ಮಕ್ಕಳ ರಕ್ಷಣೆ ಮತ್ತು ಪರಿಹಾರ, ಪುನರ್ವಸತಿಗೆ ಮಾರ್ಗ ಸೂಚಿಗಳನ್ನು ನೀಡಿದೆ. ಅದರ ಪ್ರಕಾರ-ಧಾಳಿಗೆ ಒಳಗಾದ ಮಹಿಳೆ, ಹೆಣ್ಣು ಮಕ್ಕಳು-ಅವರ ಕುಟುಂಬ 2 ಲಕ್ಷ ರೂ.ಗಳ ಪರಿಹಾರಕ್ಕೆ ಅರ್ಹರಾಗುತ್ತಾರೆ.

ಹಾಗೆ ತೆಗೆದುಕೊಳ್ಳಲು 1. ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯಲ್ಲಿ ದೂರು ದಾಖಲಿಸಬೇಕು.


2. ಅವರು ಯಾವುದೇ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದು ಸರ್ಟಿಫಿಕೇಟ್ ಹೊಂದಿದ್ದಲ್ಲಿ ಅಲ್ಲಿಂದ ಹಣ ಪಡೆದಿಲ್ಲವೆಂದು ದೃಢೀಕರಿಸಬೇಕು ಅಥವಾ ತೆಗೆದುಕೊಂಡ ಹಣ 2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಉಳಿದ ಹಣವನ್ನಷ್ಟೇ ಈ ಯೋಜನೆಯಡಿಯಲ್ಲಿ ಪಡೆಯಬಹುದು.

ಅನರ್ಹತೆ: ಸರ್ಕಾರಿ ಉದ್ಯೋಗಿಗಳಾಗಿದ್ದು ವೈದ್ಯಕೀಯ ಸೌಲಭ್ಯ ಮರುಪಾವತಿ ಕಾನೂನು 1963ರ ಅಡಿಯಲ್ಲಿ ಬರುವವರಾಗಿದ್ದರೆ ಅವರು ಈ ಯೋಜನೆಗೆ ಅರ್ಹರಲ್ಲ. ಆತ್ಮಹತ್ಯೆಗೆ ಪ್ರಯತ್ನವಾಗಿದ್ದರೆ ಅರ್ಹರಲ್ಲ.

ಪುನರ್ವಸತಿ ಸೌಲಭ್ಯಗಳು : ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ, ಅಲ್ಲಿ ಸೌಲಭ್ಯಗಳಿಲ್ಲದಿದ್ದಲ್ಲಿ, ಯಾವುದೇ ಖಾಸಗೀ ಆಸ್ಪತ್ರೆಯ ಚಿಕಿತ್ಸೆಗೆ, ಜಿಲ್ಲಾ ಸರ್ಜನ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ದೃಢೀಕೃತಗೊಳಿಸಿದ ಮೊತ್ತ ನೀಡಲಾಗುವುದು. ವೈದ್ಯಕೀಯ ಚಿಕಿತ್ಸೆಗಳ ಜೊತೆ ಶೇ.40 ಕ್ಕಿಂತ ಹೆಚ್ಚು ಹಾನಿಗೊಳಗಾದವರಿಗೆ ಅಂಗವಿಕಲರಿಗೆ ಸಿಗುವ ಇತರ ಸೌಲಭ್ಯಗಳನ್ನು ನೀಡುವುದು. ಉಚಿತ ಕಾನೂನು ನೆರವು, ಸ್ವಯಂ ಉದ್ಯೋಗಕ್ಕೆ ಅವಕಾಶ ಇತ್ಯಾದಿ.

ಆ್ಯಸಿಡ್ ಧಾಳಿಗೆ ಒಳಗಾದ ಮಹಿಳೆ ಸತ್ತು, ಮಕ್ಕಳು ಅನಾಥರಾದರೆ ಸ್ಟೇಟ್ ಹೋಂಗಳಲ್ಲಿ ಅವರಿಗೆ ವಸತಿ ಮತ್ತು ಶಿಕ್ಷಣಕ್ಕೆ ಅವಕಾಶ ಮತ್ತು ಚಿಕಿತ್ಸೆಯ ವೆಚ್ಚ, ಅವಳ ಫಲಾನುಭವಿಗಳಿಗೆ ನಿಗದಿತ ಫಾರಂ ಭರ್ತಿ ಮಾಡಿಸಿಕೊಳ್ಳುವ ಮೂಲಕ ಕೊಡಲಾಗುವುದು.

ಈ ಎಲ್ಲ ಕ್ರಮ ಕೈಗೊಳ್ಳಲು ಆ್ಯಸಿಡ್ ಧಾಳಿಯನ್ನ ತಡೆಗಟ್ಟಲು ಒಂದು ಪರಿಶೀಲನಾ ಸಮಿತಿಯ ರಚನೆಗೂ ಕೂಡ ಪ್ರಸ್ತಾಪ ಮಾಡಲಾಗಿದೆ. ಉದ್ದೇಶ ಉತ್ತಮವಾದದ್ದೇ ಆದರೆ ಜಾರಿಯ ಕುರಿತು ಇರುವ ಬದ್ಧತೆ ಮಾತ್ರ ಇತರ ಕಾನೂನುಗಳಂತೆ ಇಲ್ಲಿಯೂ ಪ್ರಶ್ನೆಯೇ. ○



...ರಾಜಕೀಯದ ಅಪಹಾಸ್ಯ ಪರಿಹಾರವೇ ?

ಪುಟ 5 ರಿಂದ

ಆಡಳಿತ ನೀಡದ ರಾಜಕಾರಣಿಗಳಿಗೆ, ಪಕ್ಷಗಳಿಗೆ ಮತದಾನದ ಮೂಲಕ ಏನು ಪಾಠವನ್ನು ಹೇಗೆ ಕಲಿಸಬೇಕೆಂಬ ಕಾತರದಲ್ಲಿದ್ದಾರೆ. ಎಲ್ಲಾ ಭ್ರಷ್ಟತೆಯ ನಡುವೆಯೂ ಜನ ಗ್ರಾಮಮಟ್ಟದಿಂದ ಹಿಡಿದು ರಾಜ್ಯಮಟ್ಟ ದವರೆಗೆ ಚುನಾಯಿತ ಪ್ರತಿನಿಧಿಗಳ ಮನೆಯ ಮುಂದೆ ನೆರೆಯುತ್ತಾರೆ. ತಮ್ಮ ಮನವಿ , ಅಹವಾಲುಗಳನ್ನು ಮುಂದಿಡುತ್ತಾರೆ. ಗೊಣಗಾಡುತ್ತಲೇ, ತಮ್ಮ ಅತೃಪ್ತಿ, ಅಸಮಾಧಾನಗಳನ್ನು ಹೊರಹಾಕುತ್ತಲೇ ಇಂದೋ ನಾಳೆಯೋ ತಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿತೆಂದು ಕಾಯುತ್ತಾರೆ.

ಆದರೆ ಚುನಾಯಿತ ಪ್ರತಿನಿಧಿಗಳ ಸರ್ಕಾರವೆಂಬ ಸ್ವರೂಪವೇ ಜನತೆಗೆ, ವಿವಿಧ ವ್ಯಕ್ತಿ, ಸಂಘಟನೆ, ಸಂಸ್ಥೆಗಳಿಗೆ, ಪತ್ರಿಕೆ ಮಾಧ್ಯಮಗಳಿಗೆ ನ್ಯಾಯಾಂಗಕ್ಕೆ ಕೂಡ ಸರ್ಕಾರವನ್ನು ಓಗ್ಗಾಮುಗ್ಗ ಟೀಕಿಸುವ, ಹಕ್ಕು ನೀಡುತ್ತದೆ. ಆದ್ದರಿಂದಲೇ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ರಂಗದೊಳಗಿನಿಂದಲೇ ಹಾಗೂ ಇತರೆ ರಂಗಗಳಿಂದಲೂ ಹೆಚ್ಚು ಟೀಕೆಗೆ ಅಪಹಾಸ್ಯಕ್ಕೆ ಒಳಗಾಗುತ್ತದೆ. ಆದರೆ ಜನತೆಗೆ ಯಾವುದೇ ಉತ್ತರ ನೀಡಬೇಕಾದ ಹೊಣೆಗಾರಿಕೆಯಿಲ್ಲದ ಬೇರೆರಂಗಗಳು, ಕಾರ್ಯಾಂಗ, ನ್ಯಾಯಾಂಗ, ಪತ್ರಿಕೆ ಮಾಧ್ಯಮಗಳು, ಖಾಸಗಿ ಕೈಗಾರಿಕೆ, ವ್ಯಾಪಾರ, ಶಿಕ್ಷಣ, ಆರೋಗ್ಯರಂಗದ ಸಂಸ್ಥೆಗಳು ಹಾಗೂ ಅದರ ಮುಖ್ಯಸ್ಥರೂ/ಮಾಲೀಕರು, ಅದರ ಅಧಿಕಾರಿಗಳು ವೈಯಕ್ತಿಕವಾಗಿ ಅಥವಾ ಸಂಸ್ಥೆಯಾಗಿ ಘೋರ ಪಾತಕಗಳನ್ನೆಸಗಿದರೂ, ಇಡೀ ಸಮಾಜಕ್ಕೆ ಅಥವಾ ಸಮಾಜದ ವಿವಿಧ ಜನಸಾಮಾನ್ಯ ಸಮುದಾಯಗಳಿಗೆ ಅನ್ಯಾಯವೆಸಗಿದರೂ ಅನೇಕ ಬಾರಿ ಬಹಿರಂಗಗೊಳ್ಳುವುದಿಲ್ಲ. ವಿಮರ್ಶೆಗೆ ಒಳಗಾಗುವುದಿಲ್ಲ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಪರ್ಯಾಸ, ಪ್ರಜಾಪ್ರಭುತ್ವ ವ್ಯವಸ್ಥೆಯ ಇತ್ತನ್ನೇ ತಿರುಚುವಷ್ಟು ಹಾನಿಕರವಾದ ಅಪಾಯ ಇದೆ. ಜನತೆಗೆ ಅಲ್ಪಸ್ವಲ್ಪ ಉತ್ತರದಾಯಿಗಳಾಗಿರುವವರನ್ನು ಅಪರಾಧ ಸ್ಥಾನದಲ್ಲಿ ನಿಲ್ಲಿಸಲಾಗಿದೆ. ಜನತೆಗೆ ಯಾವುದೇ ರೀತಿ ಹೊಣೆಗಾರರಲ್ಲದವರು ಘೋರ ಅಪರಾಧಗಳನ್ನು ನಿತ್ಯ ಎಸಗುತ್ತಿದ್ದರೂ ರಾಜಕಾರಣದತ್ತ ಕೈತೋರಿ ಟೀಕೆಯಿಂದ ನುಣುಚಿಕೊಳ್ಳಲು ಅವಕಾಶ ನೀಡಲಾಗಿದೆ. ಈ ಎಲ್ಲಾ ರಂಗಗಳ ಅಪರಾಧದ ಹೊಣೆಯನ್ನು ರಾಜಕೀಯ ರಂಗವೇ ಹೊತ್ತುಕೊಳ್ಳಬೇಕಾಗಿದೆ.

ಅಧಿಕಾರಶಾಹಿಯ ಮದದಿಂದ, ಸಂಪತ್ತಿನ ಒಡೆತನದ ಮದದಿಂದ, ಜನತೆಗೆ ಉತ್ತರ ನೀಡುವ ಅವಶ್ಯಕತೆಯಿಲ್ಲವೆನ್ನುವ ಮದದಿಂದ ಕೊಬ್ಬಿ ಜನ ಸಾಮಾನ್ಯರ ಹಿತಗಳನ್ನು ಒಟ್ಟು ಸಮಾಜದ, ದೇಶದ ಹಿತಗಳನ್ನು ಕಾಲ ಕೆಳಗೆ ತುಳಿಯುವ ಈ ಸಂಸ್ಥೆಗಳನ್ನು ಜನತೆಗೆ ಉತ್ತರದಾಯಿಯಾಗಿಸಿದಾಗಲೇ ಪ್ರಜಾಪ್ರಭುತ್ವೀಕರಿಸಿದಾಗಲೆ ಟೀಕೆಗೆ ಒಳಪಡಿಸಿದಾಗಲೇ ನೈಜ ಪ್ರಜಾಪ್ರಭುತ್ವ ಸ್ಥಾಪನೆಯಾಗುವುದು.



ಲಿಸ್ಬನ್ : ಪೋರ್ಚುಗಲ್ ಕಾರ್ಮಿಕ ಸಮ್ಮೇಳನ

ಯುರೋಪಿಯನ್ ಒಕ್ಕೂಟದ ಒಂದು ದೇಶ ಪೋರ್ಚುಗಲ್ ತೀವ್ರ ಕಾರ್ಮಿಕ ವಿರೋಧಿ ನೀತಿಗಳನ್ನು ಕಂಡ ದೇಶ. ಕಾರ್ಮಿಕದ್ರೋಹಿ ನೀತಿಗಳ ವಿರುದ್ಧ ಸಮರ ಸಾರಿರುವ ಅಲ್ಲಿನ ಎಡಪಂಥೀಯ ಕಾರ್ಮಿಕ ಸಂಘಟನೆಯ ಸಮ್ಮೇಳನದಲ್ಲಿ ಸಿಐಟಿಯು ಸಂಘಟನೆಯ ಪರವಾಗಿ ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಪಾಲ್ಗೊಂಡಿದ್ದರು. ಅದರ ವರದಿ ಇಲ್ಲಿದೆ.

ಸಮರಾಂಗಣದಲ್ಲಿರುವ ಕಾರ್ಮಿಕರ ಸಮ್ಮೇಳನದಿಂದ..

ಭಾರತ ಉಪಖಂಡಕ್ಕೆ ಯೂರೋಪ್ ಖಂಡದಿಂದ ತಲುಪಲು ಜಲಮಾರ್ಗವನ್ನು ಅನ್ವೇಷಣೆ ಮಾಡಿದ ವಾಸ್ಕೊಡ ಗಾಮಾ ಅವರ ತವರು ದೇಶವಾಗಿರುವ ಪೋರ್ಚುಗಲ್ ದೇಶದ ಕಾರ್ಮಿಕರ ರಾಷ್ಟ್ರ ಸಮ್ಮೇಳನ ಫೆಬ್ರವರಿ 14-16ರವರೆಗೆ ಆ ದೇಶದ ರಾಜಧಾನಿ 'ಲಿಸ್ಬನ್' ನಗರದಲ್ಲಿ ಸಮರೋತ್ಸಾಹದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ 932 ಪ್ರತಿನಿಧಿಗಳು ಹಲವು ಸಂಘರ್ಷಮಯ ಹೋರಾಟಗಳಲ್ಲಿ ಮಾಲಿಕರ, ಪೋಲೀಸರ, ಸರ್ಕಾರ ದಮನವನ್ನು ಹಿಮ್ಮೆಟ್ಟಿಸಲು ಎದೆಕೊಟ್ಟು ಎದುರಿಸಿದ ಅನುಭವಗಳೊಂದಿಗೆ ಭಾಗವಹಿಸಿದ್ದರು. ಕಳೆದ ವರ್ಷ 2007ರಲ್ಲಿ 3 ದೇಶವ್ಯಾಪಿ ಪ್ರತಿಭಟನೆಗಳನ್ನು ನಡೆಸಿದ್ದೂ 2-3-2007ರಲ್ಲಿ 1,50,000 ಕಾರ್ಮಿಕರು, 30-5-2007, 5-7-2007ರಂದು ಮೇಲಿಂದ ಮೇಲೆ ಅಷ್ಟೇ ಕಾರ್ಮಿಕರು ಬೃಹತ್ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೇ ಯೂರೋಪಿನ 22 ದೇಶಗಳು ಸರ್ಕಾರಗಳು ಒಳಗೊಂಡ ಯೂರೋಪಿನ್ ಯೂನಿಯನ್ ಶೃಂಗ ಸಮಾವೇಶ, 18ನೇ ಅಕ್ಟೋಬರ್ 2007ರಂದು ಲಿಸ್ಬನ್ ನಗರದಲ್ಲಿ "ಲಿಸ್ಬನ್ ಒಪ್ಪಂದ"ವನ್ನು ಅಂತಿಮಗೊಳಿಸಲು ಸೇರಿದಾಗ 2 ಲಕ್ಷಕ್ಕೂ ಅಧಿಕ ಕಾರ್ಮಿಕರು ಭಾಗವಹಿಸಿ ಪ್ರಬಲ ಪ್ರತಿಭಟನೆ ನಡೆಸಲಾಗಿದೆ. ಈ ಎಲ್ಲಾ ಹೋರಾಟಗಳು ಪೋರ್ಚುಗಲ್ ದೇಶದ ಹಾಗೂ ಬಲಿಷ್ಠ ಬಂಡವಾಳಗರರ ಅಭಿವೃದ್ಧಿ ಹೊಂದಿದ ದೇಶಗಳ ಕಾರ್ಮಿಕರ ಬದುಕಿನ ಮೇಲಿನ ಧಾಳಿಗಳ ಗಂಭೀರ ಪರಿಣಾಮಗಳು ಹಾಗೂ ಅದಕ್ಕೆ ಪ್ರತಿಸ್ಪಂದನೆಯ ಸಂಕೇತವಾಗಿದೆ.

ಬಂಡವಾಳಿಗರಿಗಾಗಿ ಯುರೋಪಿಯನ್ ಒಕ್ಕೂಟ

ಯೂರೋಪಿನ್ ಯೂನಿಯನ್ (22 ದೇಶಗಳ) ಸಂವಿಧಾನಕ್ಕೆ ಜನಾಭಿಪ್ರಾಯ ಪಡೆಯದೇ ಸರ್ಕಾರಗಳೇ ಒಪ್ಪಿಗೆ ನೀಡುವಂತಹ ಪರಮಾಧಿಕಾರ ಪಡೆಯಲು "ಲಿಸ್ಬನ್ ಒಪ್ಪಂದ" ನಾಂದಿಯಾಗಿದೆ. ಏಕೆಂದರೇ ಏಕ ರೂಪದ ಯೂರೋಪಿಯನ್ ಸಂವಿಧಾನಕ್ಕೆ ಜನಾಭಿಪ್ರಾಯ ಮತದಾನದಲ್ಲಿ ಜನರ ತೀವ್ರ ವಿರೋಧ ಹಲವು ದೇಶಗಳಲ್ಲಿ ವ್ಯಕ್ತವಾಗಿದೆ. ಜನರ ವಿರೋಧಕ್ಕೆ ಮುಖ್ಯ ಕಾರಣವೇನೆಂದರೆ ಈ ಏಕರೂಪದ ಸಂವಿಧಾನದಿಂದಾಗಿ ಬಂಡವಾಳಗಾರರಿಗೆ ಯಾವುದೇ ನಿಯಂತ್ರಣವಿಲ್ಲದೇ ಮುಕ್ತ ಅವಕಾಶಗಳನ್ನೂ ತೆರೆದಿಡುತ್ತದೆ. ಲೇಆಫ್, ಕಾರ್ಮಿಕರ ವಜಾ ಮಾಡಲು ಮಾಲಿಕರಿಗೆ ಯಾವುದೇ ಕಾನೂನು ನಿರ್ಬಂಧಗಳು ಇರಬಾರದು. ಕೆಲಸದ ಅವಧಿ ಹೆಚ್ಚಿಸಲು, ಹಾಗೂ "ಖಾಯಂ ಉದ್ಯೋಗ" ಎಂಬುದನ್ನು ತೆಗೆದು ಅಲ್ಪಕಾಲದ ಒಪ್ಪಂದಗಳನ್ನು ಜಾರಿಗೊಳಿಸುವುದು ಇವುಗಳೆಲ್ಲವನ್ನು ಸೇರಿಸಿ ಒಂದು ಶಬ್ದ ಬಳಸಲಾಗಿದೆ. ಅದೇ "ಫ್ಲೆಕ್ಸಿಕ್ಯೂರಿಟಿ". ಫ್ಲೆಕ್ಸಿಕ್ಯೂರಿಟಿ ಎಂದರೇ ಸಡಿಲವಾದ ಸಂರಕ್ಷಣೆ. ಈ ಫ್ಲೆಕ್ಸಿಕ್ಯೂರಿಟಿ ನೀತಿಗಳ ವಿರುದ್ಧ ಪೋರ್ಚುಗಲ್, ಫ್ರೆಂಚ್ ಮುಂತಾದ ದೇಶದ ಕಾರ್ಮಿಕರು ಹೋರಾಟದ ರಣರಂಗಕ್ಕೆ ಧುಮುಕುತ್ತಿದ್ದಾರೆ.

ಸಿಐಟಿಯು ಪ್ರತಿನಿಧಿ

ಜನರಲ್ ಕಾನ್‌ಫೆಡರೇಷನ್ ಆಫ್ ಪೋರ್ಚುಗಲ್ ಟ್ರೇಡ್ ಯೂನಿಯನ್ಸ್ (CGTP) 11ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಆ ದೇಶದ ಇಬ್ಬರು ಮಾಜಿ ದೇಶಾಧ್ಯಕ್ಷರುಗಳು ಹಾಗೂ ಕಮ್ಯುನಿಸ್ಟ್‌ಗಳ ಹಲವು ಪಾರ್ಲಿಮೆಂಟ್ ಸದಸ್ಯರು ಭಾಗವಹಿಸಿದ್ದರು. ಅಲ್ಲದೇ 74 ವಿದೇಶಿ ಪ್ರತಿನಿಧಿ ತಂಡಗಳು ಭಾಗವಹಿಸಿದ್ದರು. ಭಾರತ ದೇಶದಿಂದ ಸಿಐಟಿಯು ಪರವಾಗಿ ಕಾಂ.ಎಸ್.ಪ್ರಸನ್ನಕುಮಾರ್ ಭಾಗವಹಿಸಿದ್ದರು.

ಯೂರೋಪ್, ಉತ್ತರ ಅಮೆರಿಕಾ, ಮಧ್ಯ ಅಮೆರಿಕಾ, ಆಫ್ರಿಕಾ, ಏಷಿಯಾ, ಅರಬ್ ಹಾಗೂ ILO, WFTU, ITUC, ETUC ಮುಂತಾದ ಜಾಗತಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. 14-02-2008ರಂದು ಅಂತರ್‍ರಾಷ್ಟ್ರೀಯ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ ಸಿಐಟಿಯು ಪರವಾಗಿ ಪ್ರಬಂಧ ಮಂಡನೆಯನ್ನು ಎಸ್.ಪ್ರಸನ್ನಕುಮಾರ್ ಮಂಡಿಸಿ ಜಾಗತಿಕ ಕಾರ್ಮಿಕ ಸಂಘಟನೆಗಳ ಐಕ್ಯ ಚಳುವಳಿ ಬಗ್ಗೆ ಒತ್ತು ನೀಡಿ ಗಮನ ಸೆಳೆಯಲಾಯಿತು. 1,68,000 ಸದಸ್ಯತ್ವ ಹೊಂದಿರುವ ಸಿಜಿಟಿಪಿ ಸಮ್ಮೇಳನ ಆರಂಭವನ್ನು ಪ್ರಧಾನ ಕಾರ್ಯದರ್ಶಿ ಕಾಂ.ಕರ್ವಾಲೋ ಡಸಿಲ್ವ ಅವರು ಹುರಿದುಂಬುವ ಭಾಷಣದೊಂದಿಗೆ ಉದ್ಘಾಟಿಸಿದರು. ಪೋರ್ಚುಗಲ್ ಪರಿಸ್ಥಿತಿ ವಿವರಿಸುತ್ತಾ, 'ಆ ದೇಶದ ನ್ಯಾಯಾಂಗವೂ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ಮಾಡುವಲ್ಲಿ ಹಿಂದೆ ಇಲ್ಲ. ಇತ್ತೀಚೆಗೆ ಕಾರ್ಮಿಕ ಚಳುವಳಿಯಲ್ಲಿ ನಾಯಕತ್ವ ವಹಿಸಿದ್ದನ್ನೆ ಅಪರಾಧವೆಂದು ಒಂದು ಕೋರ್ಟ್ ತೀರ್ಪು ನೀಡಿದೆ' ಎಂಬ ಬಗ್ಗೆ ಗಮನ ಸೆಳೆದರು. ಅಲ್ಲದೇ 'ಸರ್ಕಾರದ "ಹೊಸ ಪಿಂಚಣಿ ಯೋಜನೆ" ಹೆಸರಲ್ಲಿ ಹಾಲಿ ಜಾರಿಯಲ್ಲಿರುವ ನಿವೃತ್ತಿ ವೇತನ ಕಿತ್ತುಕೊಳ್ಳುವ ಪ್ರಯತ್ನವನ್ನು ಸಿಜಿಟಿಪಿ ಹೋರಾಟದಿಂದ ತಡೆಯಲಾಗಿದೆ. ಬಂಡವಾಳಗಾರರು ತೆರಿಗೆ ಕಟ್ಟದೇ ಎತ್ತಿ ಹಾಕುವುದರ ವಿರುದ್ಧ ಹೋರಾಟ, ಹಾಗೂ ಕನಿಷ್ಠ ವೇತನ ಪ್ರತಿ ತಿಂಗಳು 500 ಯೂರೋಗಳಿಗಾಗಿ ಹೋರಾಟ ವಿಸ್ತಾರವಾಗಿ ನಡೆದಿದೆ.

ವಿಜ್ಞಾನ ಎಷ್ಟೆ ಅಭಿವೃದ್ಧಿ ಆಗುತ್ತಲಿದ್ದಿರೂ ಅದು ಕಾರ್ಮಿಕರ ಬದುಕನ್ನು ಉತ್ತಮಪಡಿಸಲು ಬಳಸಲಾಗುತ್ತಿಲ್ಲ. ನೂತನ ಉದಾರವಾದಿ ನೀತಿಗಳು ವ್ಯಕ್ತಿವಾದವನ್ನು ಪ್ರೋತ್ಸಾಹ ಮಾಡುತ್ತಿವೆ. ಯೂರೋಪಿಯನ್ ಯೂನಿಯನ್ ಮೂಲಕ ಸುಧಾರಣೆ ಹೆಸರಲ್ಲಿ ನಿರುದ್ಯೋಗ ಹಾಗೂ ಬಡತನವನ್ನು ಹೆಚ್ಚಿಸುತ್ತಿವೆ. ಸಾರ್ವಜನಿಕ ಸೇವೆಗಳನ್ನು ಯೂರೋಪಿನಾದ್ಯಂತ ಖಾಸಗೀಕರಣಗೊಳಿಸುವುದು ತೀವ್ರವಾಗುತ್ತಿದೆ. ಅಲ್ಲದೇ ಸರ್ಕಾರಿ ನೌಕರರ ವೇತನ ಭತ್ಯೆಗಳನ್ನು ಕಡಿತಗೊಳಿಸಲಾಗುತ್ತಿದೆ. ನಿವೃತ್ತಿ ವೇತನಗಳನ್ನು ಕಿತ್ತುಕೊಳ್ಳುವ ಸರ್ಕಾರಗಳ ಧೋರಣೆಗಳು ಸರ್ಕಾರಿ ದರೋಡೆ ಆಗಿವೆ' ಎಂದು ಬಣ್ಣಿಸಿದರು ಅಲ್ಲದೇ ಸಾಮೂಹಿಕ ಚೌಕಾಸಿ ಹಕ್ಕನ್ನು ಉಳಿಸಿಕೊಳ್ಳಲು ಹೋರಾಟ ತೀವ್ರಗೊಳಿಸಲು ಅಗತ್ಯವೆಂದು ಒತ್ತಿ ಹೇಳುತ್ತಾ ಈ ಎಲ್ಲಾ ಹೋರಾಟಗಳಲ್ಲಿ ಯುವ ಕಾರ್ಮಿಕರು ಕ್ರಿಯಾಶೀಲವಾಗಲು ಕರೆ ನೀಡಿದರು. ಈ ಸಮ್ಮೇಳನದಲ್ಲಿ ವೈದ್ಯರ ಸಂಘಗಳು, ಶಿಕ್ಷಕರ ಸಂಘಗಳು ಒಳಗೊಂಡು ಭಾಗಿಯಾಗಿದ್ದೂ ವೈದ್ಯಕೀಯ ರಂಗದಲ್ಲಿ ಖಾಸಗೀಕರಣ, ಡಾಕ್ಟರುಗಳ ಉದ್ಯೋಗ ಭದ್ರತೆ ಹಾಗೂ ವೇತನ ಭತ್ಯೆಗಳ ಮೇಲೆ ಧಾಳಿ ಆಗುತ್ತಿರುವುದನ್ನು ಆತಂಕದಿಂದ ಆ ಪ್ರತಿನಿಧಿಗಳ ಚರ್ಚೆಯಲ್ಲಿ ವಿವರಿಸಿದರು. ಮತ್ತೊಬ್ಬ ಪ್ರತಿನಿಧಿ ಮಾತನಾಡುತ್ತಾ, ಸಾಮಾಜಿಕ ಸುರಕ್ಷತಾ ಯೋಜನೆಗಳ ಕಡಿತ, ಕೆಲಸದ ಗುಣಮಟ್ಟ ಕುಸಿತ ಮುಂತಾದ ಧಾಳಿಗಳು ಹೆಚ್ಚುತ್ತಿದ್ದೂ ಕಾರ್ಮಿಕ ಕಾನೂನುಗಳನ್ನು ಬಂಡವಾಳಗಾರರ ಪರವಾಗಿ ಬದಲಾಯಿಸಲಾಗುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಹೋರಾಟಗಳಿಗೆ ಫಲಿತಾಂಶಗಳು ಕೂಡಲೇ ದೊರೆಯದಿದ್ದರೂ ದೃಢವಾಗಿ ಹೋರಾಟಗಳನ್ನೂ ಮುನ್ನಡೆಸಬೇಕೆಂಬ ತೀರ್ಮಾನ ಹಾಗೂ ತಮ್ಮ ಅನುಭವವನ್ನು ಹಂಚಿಕೊಂಡರು. ಅಲ್ಲದೇ ಕಾರ್ಮಿಕ ಕಾನೂನುಗಳ ಜಾರಿ, ತಪಾಸಣೆ ನಿದ್ರಾವಸ್ಥೆಯಲ್ಲಿವೆ ಎಂದು ವಿವರಿಸಿದರು.

ಈ ಎಲ್ಲಾ ಚರ್ಚೆಗಳ ಪ್ರಕ್ರಿಯೆಗಳಲ್ಲಿ ನಡು ನಡುವೆ ಒಂದು ಸ್ಫೂರ್ತಿದಾಯವಾದ ಘೋಷಣೆ ಮೊಳಗುತ್ತಿತ್ತು. ಅದು "ಲಾ ಲೂತ ಕಂಟಿನುವ". ಅಂದರೇ "ಹೋರಾಟವನ್ನು ಮುಂದುವರೆಸುತ್ತೇವೆ" ಎಂದು ಅರ್ಥ.

ಇಡೀ ಸಮ್ಮೇಳನದ ಚರ್ಚೆಯು ಉತ್ಸಾಹ ಭರಿತವಾಗಿ ನಡೆದು 7 ತಿದ್ದುಪಡಿಗಳ ಬಗ್ಗೆ ಮತದಾನ ನಡೆಯಿತು. ಅದರಲ್ಲಿ ಪಾರದರ್ಶಕವಾದ ದೃಡವಾದ ಪ್ರಜಾಪ್ರಭುತ್ವ ಅಳವಡಿಸಿಕೊಂಡಿರುವುದು ಗಮನಾರ್ಹ. ಸಮ್ಮೇಳನವು ಅಂತಿಮವಾಗಿ ಉದ್ಯೋಗ ಹಾಗೂ ಸಂಪತ್ತಿನ ನ್ಯಾಯವಾದ ವಿತರಣೆಗಾಗಿ ಹೋರಾಡಲು, ಕಡಿಮೆ ಕೂಲಿಯ ಕೆಲಸದ ಪದ್ಧತಿ ವಿರೋಧಿಸಲು, ಕೆಲಸಗಳ ಹಂಗಾಮೀಕರಣ, ಕಾಂಟ್ರಾಕ್ಟೀಕರಣ ವಿರೋಧಿಸಲು ಹಾಗೂ ಇಡೀ ಕೆಲಸಗಾರರಲ್ಲಿ ಶೇ.67 ಯುವ ಕಾರ್ಮಿಕರಿರುವ ಕಾರಣ ಕಾರ್ಮಿಕ ಸಂಘಗಳಲ್ಲಿ ಯುವ ಕಾರ್ಮಿಕರ ಪಾಲ್ಗೊಳ್ಳುವಿಕೆ ಕ್ರಿಯಾಶೀಲಗೊಳಿಸುವುದು ಅಗತ್ಯ ಎಂದೂ, ಸೌಹಾರ್ದ ಹೋರಾಟಗಳನ್ನು ತೀವ್ರಗೊಳಿಸಲು ಹಾಗೂ ಕಾರ್ಮಿಕರು ರಾಜಕೀಯ ಹೋರಾಟಗಳಲ್ಲಿ ಹೆಚ್ಚೆಚ್ಚು ಭಾಗವಹಿಸುವಂತೆ ಮಾಡುವುದು ಎಂದು ತೀರ್ಮಾನ ಮಾಡಲಾಯಿತು. ಕೊನೆಯಲ್ಲಿ 15 ಪ್ರಮುಖ ಬೇಡಿಕೆಗಳ ಆಧಾರದಲ್ಲಿ 20ನೇ ಮಾರ್ಚ್ 08ರಂದು ಪೋರ್ಚುಗಲ್ ದೇಶವ್ಯಾಪಿಯಾದ ಪ್ರಬಲ ಚಳುವಳಿ ನಡೆಸಲು ಕರೆ ನೀಡಲಾಗಿದೆ. ಮುಂದಿನ ಮೇ ದಿನವನ್ನು ಹೋರಾಟಗಳ ತೀವ್ರಗೊಳಿಸುವ ದಿನವಾಗಿ ನಡೆಸಲು ಕರೆ ನೀಡಲಾಗಿದೆ. ಸಮ್ಮೇಳನದಲ್ಲಿ 147 ಸದಸ್ಯರ ರಾಷ್ಟ್ರ ಮಂಡಳಿಯನ್ನು ಆಯ್ಕೆ ಮಾಡಲಾಯಿತು.



ಭಾರತದಿಂದ ಸಿಐಟಿಯು ಪರವಾಗಿ ಪಾಲ್ಗೊಂಡ ಎಸ್.ಪ್ರಸನ್ನಕುಮಾರ್ ಚೀನಾದ ಪ್ರತಿನಿಧಿಯೊಂದಿಗೆ

ಎಲ್ಲಾ ಚರ್ಚೆಗಳ ಪ್ರಕ್ರಿಯೆಗಳಲ್ಲಿ ನಡು ನಡುವೆ ಒಂದು ಸ್ಫೂರ್ತಿದಾಯವಾದ ಘೋಷಣೆ ಮೊಳಗುತ್ತಿತ್ತು. ಅದು "ಲಾ ಲೂತ ಕಂಟಿನುವ". ಅಂದರೇ "ಹೋರಾಟವನ್ನು ಮುಂದುವರೆಸುತ್ತೇವೆ" ಎಂದು ಅರ್ಥ.

ಜಗದಗಲ

ಶರತ್‌ಚಂದ್ರ

ಜಗತ್ತಿನ ಮೇಲೆ ಅಮೆರಿಕದ ಮುಗಿಯದ ಭಯೋತ್ಪಾದಕ ಯುದ್ಧ


ಅಫಘಾನಿಸ್ತಾನದಲ್ಲಿ ಅಮೆರಿಕನ್ ಪಡೆ


ಕಳೆದ ಮೂರು ವರ್ಷಗಳಲ್ಲಿ ಅಮೆರಿಕ 'ಭಯೋತ್ಪಾದನೆಯ ಮೇಲೆ ಮುಗಿಯದ ಯುದ್ಧ'ದ ಹೆಸರಲ್ಲಿ ನಡೆಸಿದ್ದು, ಇಡೀ ಜಗತ್ತಿನ ಮೇಲೆ 'ಭಯೋತ್ಪಾದಕ' ಯುದ್ಧ. ಅಫ್ಘಾನಿಸ್ತಾನದಲ್ಲಿ ಆರಂಭವಾದ ಈ ಭಯೋತ್ಪಾದಕ ಯುದ್ಧ ಇರಾಕ್‌ನಲ್ಲಿ ಬೆಳೆದು ಇಡೀ ಜಗತ್ತನ್ನು ಆವರಿಸಿದೆ. ಇರಾನ್ ಮತ್ತು ಇಡೀ ಪಶ್ಚಿಮ ಏಶ್ಯಾವನ್ನು ತನ್ನ ಮೂಗಿನ ನೇರಕ್ಕೆ ನಡೆಸುವುದು, ನಾಟೋವನ್ನು ರಶ್ಯದ ಗಡಿವರೆಗೆ ವಿಸ್ತರಿಸುವುದು ಆ ಮೂಲಕ ಇಡೀ ಯುರೋಪನ್ನು ಬೆದರಿಸುವುದು, ಸಾಧ್ಯವಾದ ಎಲ್ಲಾ ದೇಶಗಳಲ್ಲೂ ತನಗೆ ಇಷ್ಟವಿಲ್ಲದ ಸರ್ಕಾರ ಉರುಳಿಸುವುದು, ಎಲ್ಲರ ಮಾನವ ಹಕ್ಕುಗಳನ್ನು ಹತ್ತಿಕ್ಕುವುದು - ಇದು ಈ ಅವಧಿಯ ಅಮೆರಿಕದ ಪ್ರಮುಖ ಅಪರಾಧಗಳು. ಆದರೆ ಈ ಅವಧಿಯ ಮೊದಲ ಭಾಗದಲ್ಲಿ ತಾರಕಕ್ಕೇರಿದ್ದ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಟಾಟೋಪಗಳು, ಕೊನೆಯ ಹೊತ್ತಿಗೆ ಇಳಿಮುಖ ಕಂಡಿವೆ. ಅದರ ಆಕ್ರಾಮಕ ಯೋಜನೆಗಳೆಲ್ಲಾ ವಿಫಲವಾಗುತ್ತಿವೆ.

ಪಶ್ಚಿಮ ಏಶ್ಯಾದ ತೈಲ ಸಂಪತ್ತಿನ ಮೇಲೆ ಕಣ್ಣು

ಅಮೆರಿಕನ್ ಸಾಮ್ರಾಜ್ಯಶಾಹಿಯ ಕ್ರೂರ ಮುಖ ಇರಾಕಿನಲ್ಲಿ ಕಾಣಬಂದಿದೆ. 2003ರಲ್ಲಿ ಅದನ್ನು ಅತಿಕ್ರಮಿಸಿ ವಶಪಡಿಸಿಕೊಂಡ ನಂತರ ಆರುವರೆ ಲಕ್ಷ ಇರಾಕಿಗಳು, ಅವರಲ್ಲಿ ಹೆಚ್ಚಿನವರು ನಾಗರಿಕರು ಕೊಲ್ಲಲ್ಪಟ್ಟಿದ್ದಾರೆ. ಐದು ವರ್ಷಗಳ ನಂತರ, ಅಮೆರಿಕನ್ ಪಡೆಗಳ ಸಂಖ್ಯೆ ಹೆಚ್ಚಿದರೂ, ಹಲವಾರು ಖಾಸಗಿ ಬಾಡಿಗೆ ಸಿಪಾಯಿ ಪಡೆಗಳಿದ್ದರೂ ಅಮೆರಿಕಾಕ್ಕೆ ತಾನು ಹೇಳಿದಂತೆ ಕೇಳುವ 'ಜೀ ಹುಜೂರ್' ಸರ್ಕಾರಕ್ಕೆ ಸುಲಲಿತವಾಗಿ ಅಧಿಕಾರ ಹಸ್ತಾಂತರ ನಡೆಸಲು ಸಾಧ್ಯವಾಗಿಲ್ಲ. ಐದು ವರ್ಷಗಳ ನಂತರವೂ ಇರಾಕ್‌ನಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯಾಗಲಿ, ಪ್ರಜಾಪ್ರಭುತ್ವವಾಗಲೀ ಸ್ಥಾಪಿತವಾಗಿಲ್ಲ. ಇರಾಕ್‌ನ್ನು ಧಾರ್ಮಿಕ-ಜನಾಂಗೀಯ ಆಧಾರದ ಮೇಲೆ, ಸುನ್ನಿ, ಶಿಯಾ ಮತ್ತು ಕುರ್ದಿಶ್ ಮೂರು ಭಾಗಗಳಾಗಿ ಒಡೆಯಲಾಗಿದೆ. ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವ ಅಮೆರಿಕನ್ ಪಡೆಗಳ ಒಂದು 'ಅಣಕು ವಿಚಾರಣೆ'ಯ ಆಧಾರದಲ್ಲಿ ಏರ್ಪಡಿಸಿದ ಸದ್ದಾಂ ಹುಸೇನ್‌ರ ಹತ್ಯೆ, ಮತ್ತು ಶಿಯಾ-ಸುನ್ನಿಗಳ ನಡುವೆ ಸತತ ಘರ್ಷಣೆಗಳಿಗೆ ಕುಮ್ಮಕ್ಕು ಕೊಟ್ಟರೂ, ಅಮೆರಿಕನ್ ಆಕ್ರಮಣಕ್ಕೆ ದೃಢ ಪ್ರತಿರೋಧವನ್ನು ಮುರಿಯಲು ಆಗಿಲ್ಲ. ಒಬ್ಬೊಬ್ಬರಾಗಿ ಅಮೆರಿಕಾ ನೇತೃತ್ವದ ಮೈತ್ರಿಕೂಟದ ಮಿತ್ರರು ಇರಾಕಿನಿಂದ ತಮ್ಮ ಪಡೆಗಳನ್ನು ಹಿಂತೆದುಕೊಳ್ಳುತ್ತಿದ್ದಾರೆ. ಇರಾಕಿನ ತೈಲ ಸಂಪನ್ಮೂಲಗಳ ಲೂಟಿಯನ್ನು 'ಜೀ ಹುಜೂರ್' ಆಳ್ವಿಕೆಯ ಮೂಲಕ ಕಾನೂನುಬದ್ಧಗೊಳಿಸುವ ಪ್ರಯತ್ನ ನಡೆದಿದೆ. ಪಶ್ಚಿಮ ಏಶ್ಯಾದಲ್ಲಿ ಇತರ ದೇಶಗಳಿಗಿಂತ ಹೆಚ್ಚು ಆಧುನಿಕ ಮತ್ತು ಜಾತ್ಯತೀತ ದೇಶವಾಗಿದ್ದ ಇರಾಕನ್ನು ಸಾಮ್ರಾಜ್ಯಶಾಹಿ ಅತಿಕ್ರಮಣ ಮತ್ತು ಆಕ್ರಮಣ ಧ್ವಂಸಗೊಳಿಸಿದೆ. ಆದರೂ ಇರಾಕ್ ವಿಶ್ವದ ಅತ್ಯಂತ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಯ ಮಿಲಿಟರಿ ಸ್ವಪ್ರತಿಷ್ಠೆಯ ಮಿತಿಗಳನ್ನು ಎತ್ತಿ ತೋರಿಸಿದೆ.

'ಪ್ರಜಾಸತ್ತಾತ್ಮಕ ಪರಿವರ್ತನೆ'!?

ಪಶ್ಚಿಮ ಏಶ್ಯಾದ ತೈಲ ಸಂಪನ್ಮೂಲಗಳ ಮೇಲೆ ಅಮೆರಿಕದ ಕಣ್ಣು. ತೈಲ ಲೂಟಿ ಹೊಡೆಯಲು ಈ ಪ್ರದೇಶದ ನಿಯಂತ್ರಣವೇ ಎಲ್ಲಾ ನೀತಿಗಳ ಸಾರ. ಈ ಪ್ರದೇಶದ ದೇಶಗಳ 'ಪ್ರಜಾಸತ್ತಾತ್ಮಕ ಪರಿವರ್ತನೆ' ಎಂಬುದು ತನ್ನ ಪ್ರಾಬಲ್ಯವನ್ನು ಕಾಯ್ದುಕೊಳ್ಳಲು ಒಂದು ನೆಪ ಅಷ್ಟೇ. ಆದ್ದರಿಂದಲೇ ಅದು ಇರಾನಿನ ಮೇಲೆ ಗುರಿಯಿಟ್ಟಿದೆ ಹಾಗೂ ಈ ತೈಲಭರಿತ ದೇಶದೊಂದಿಗೆ ತಿಕ್ಕಾಟವನ್ನು ಸತತವಾಗಿ ವಿಸ್ತರಿಸುತ್ತಿದೆ. ಅಧ್ಯಕ್ಷ ಬುಶ್ ಸರ್ಕಾರ ಪರಮಾಣು ಪ್ರಶ್ನೆಯ ಮೇಲಷ್ಟೇ ಅಲ್ಲ, ಇರಾಕಿನ ಭಯೋತ್ಪಾದಕರಿಗೆ ಇರಾನ್ ನೆರವು ನಿಡುತ್ತಿದೆ ಎಂಬ ಇತ್ತೀಚಿನ ಅಪಾದನೆಯನ್ನೂ ಬಳಸಿ ಅದರ ವಿರುದ್ಧ ಮಿಲಿಟರಿ ಕಾರ್ಯಾಚರಣೆಯ ಬೆದರಿಕೆ ಹಾಕುತ್ತಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿ ಇರಾಕಿನಲ್ಲಿ ಮಾಡಿದಂತೆ ಇರಾನಿನ ವಿಷಯದಲ್ಲೂ ಹಸೀ ಸುಳ್ಳು ಮಾಹಿತಿಗಳ ಆಧಾರದಲ್ಲಿ ಅದರ ವಿರುದ್ಧ ಆಕ್ರಮಣಕಾರೀ ನಿಲುವುಗಳನ್ನು ಸಮರ್ಥಿಸಿಕೊಳ್ಳುತ್ತಿದೆ. ಆದರೆ ಡಿಸೆಂಬರ್ 2007ರಲ್ಲಿ ಸಾರ್ವಜನಿಕಗೊಳಿಸಿದ ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ಗುಪ್ತಚರ ಮಂಡಳಿಯ 'ಇರಾನಿನ ಪರಮಾಣು ಆಶಯಗಳು ಮತ್ತು ಸಾಮರ್ಥ್ಯ'ಗಳ ಕುರಿತಾದ ವರದಿ ವಿರುದ್ಧ ಮಾತು ಹೇಳಿದೆ. ಇರಾನ್ 2003ರಲ್ಲಿ ನಿಲ್ಲಿಸಿದ ತನ್ನ ಪರಮಾಣು ಶಸ್ತ್ರಾಸ್ತ್ರ ಕಾರ್ಯಕ್ರಮವನ್ನು ಪುನರಾರಂಭಗೊಳಿಸಿಲ್ಲ ಎಂಬ ತೀರ್ಮಾನಕ್ಕೆ ಬಂದಿದೆ. ಇದು ಇರಾಕಿನ ಮೇಲೆ ದಿಗ್ಬಂಧನ ಹೇರಲು, ಧಾಳಿ ಮಾಡಲು ಅವಕಾಶವನ್ನು ಕಲ್ಪಿಸಬೇಕು ಎಂಬ ಬುಶ್ ಆಡಳಿತದ ಯೋಜನೆಯ ಬುಡವನ್ನೇ ಕಿತ್ತು ಹಾಕಿದೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿ ಇರಾನಿನ ಮೇಲೆ ಹೊಸ ನಿರ್ಬಂಧಗಳನ್ನು ಹೇರುವಂತೆ ಮಾಡುವುದು ಅಮೆರಿಕಕ್ಕೆ ಕಷ್ಟಕರವಾಗಿದೆ.


ಅಬುಗ್ರೈಬ್ ಜೈಲಿನಲ್ಲಿ ಖೈದಿಗಳ ಮೇಲೆ ಅಮಾನುಷ ಹಲ್ಲೆ

ಪ್ಯಾಲೆಸ್ತೈನಿನಲ್ಲೂ, ಲೆಬನಾನಿನಲ್ಲೂ ಅಮೆರಿಕಾ ಒಡೆದು ಆಳುವ ಒಂದು ತಂತ್ರವನ್ನು ಅನುಸರಿಸುತ್ತಿದೆ. 2006ರ ಚುನಾವಣೆಗಳಲ್ಲಿ ಹಮಸ್ ಗೆದ್ದ ನಂತರ ಚುನಾಯಿತ ಸರಕಾರವನ್ನು ಏಕಾಂಗಿಯಾಗಿಸಿ, ಪ್ಯಾಲೆಸ್ತೈನ್ ಪ್ರದೇಶಗಳ ಒಂದು ಆರ್ಥಿಕ ದಿಗ್ಬಂಧನವನ್ನು ಏರ್ಪಡಿಸಿ ಇಸ್ರೇಲ್ ಮತ್ತು ಪ್ಯಾಲೆಸ್ತೈನ್ ನಡುವೆ ಒಂದು ಅಸಮಾನ ಒಪ್ಪಂದಕ್ಕೆ ಮಧ್ಯಸ್ಥಿಕೆ ವಹಿಸುವುದು ಅಮೆರಿಕ-ಇಸ್ರೇಲ್ ಕುತಂತ್ರವಾಗಿತ್ತು. ಹೀಗೆ ಇತ್ತೀಚಿನ ಅನ್ನಪೊಲಿಸ್ ಸಮ್ಮೇಳನದ ವಿಫಲವಾಗುತ್ತದೆ ಎಂಬುದು ಖಂಡಿತವಾಗಿತ್ತು. ಏಕೆಂದರೆ ಇದು ಇಸ್ರೇಲಿ ಆಕ್ರಮಣದಿಂದ ಹೊಮ್ಮಿದ ಮೂಲ ಪ್ರಶ್ನೆಗಳನ್ನು ಉತ್ತರಿಸದೆ ಒಂದು ಇತ್ಯರ್ಥದ ಮಧ್ಯಸ್ಥಿಕೆ ವಹಿಸುವ ಅಧ್ಯಕ್ಷ ಬುಶ್‌ರವರ ಇನ್ನೊಂದು ಕಸರತ್ತು.

ಪುಟ 15ಕ್ಕೆ



ಫಿಡೆಲ್, ರಾವುಲ್, ಚೇ - ಮೂವರು ಕ್ರಾಂತಿಕಾರಿಗಳು

ರಾವುಲ್ ಕ್ಯಾಸ್ಟ್ರೋ ಕ್ಯೂಬಾ ಹೊಸ ಅಧ್ಯಕ್ಷ

ರಾವುಲ್ ಕ್ಯಾಸ್ಟ್ರೊ ಅವರನ್ನು ಕ್ಯೂಬಾದ ಹೊಸ ಅಧ್ಯಕ್ಷರಾಗಿ ಆ ದೇಶದ (ಜನತಾ ಅಧಿಕಾರದ ರಾಷ್ಟ್ರೀಯ ಅಸೆಂಬ್ಲಿ ಎಂದು ಕರೆಯಲಾಗುವ) ಪಾರ್ಲಿಮೆಂಟು ಚುನಾಯಿಸಿದೆ. 31 ಸದಸ್ಯರ ರಾಷ್ಟ್ರಿಯ ಕೌನ್ಸಿಲ್ ನ್ನೂ ಚುನಾಯಿಸಿತು. 77 ವರ್ಷದ ರಾವುಲ್ 1953 ರಲ್ಲಿ ಯುವ ಸೋಶಲಿಸ್ಟ್ ಎಂಬ ಸಂಘಟನೆ ಮೂಲಕ ಕಮ್ಯುನಿಸ್ಟ್ ಚಳುವಳಿಯ ಭಾಗವಾದವರು. 1953 ರಲ್ಲಿ ಕ್ಯೂಬಾದ ಆಗಿನ ಸರ್ವಾಧಿಕಾರಿ ಬಾಟಿಸ್ಟಾ ವಿರುದ್ಧ ದಂಗೆಯಲ್ಲಿ ಭಾಗವಹಿಸಿ ಎರಡು ವರ್ಷಗಳ ಜೈಲು ವಾಸ ಅನುಭವಿಸಿದರು. ಆ ಮೇಲೆ ಮೆಕ್ಸಿಕೊಗೆ ತೆರಳಿ ಕ್ಯೂಬಾದ ವಿಮೋಚನೆಗೆ ಇತಿಹಾಸ ಪ್ರಸಿದ್ಧ 'ಗ್ರಾನ್ಮಾ' ಹಡಗಿನಲ್ಲಿ ಹೊರಟ 80 ಗೆರಿಲ್ಲಾಗಳ ಪಡೆಯ ಸಂಘಟನೆಯಲ್ಲಿ ಮತ್ತು ಕ್ಯೂಬಾದ ವಿಮೋಚನಾ ಗೆರಿಲ್ಲಾ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ರಾವುಲ್ ಕ್ರಾಂತಿಯ ನಂತರ ಸರ್ಕಾರದಲ್ಲಿ ಉಪಾಧ್ಯಕ್ಷ ಮತ್ತು ರಕ್ಷಣಾ ಮಂತ್ರಿಯಾಗಿ ಪ್ರಮುಖ ಪಾತ್ರ ನಿರ್ವಹಿಸಿದರು. 1970ರ ದಶಕದಲ್ಲಿ ಆಫ್ರಿಕಾದ ವಿಮೋಚನಾ ಹೋರಾಟದಲ್ಲಿ ಕ್ಯೂಬಾದ ನೆರವು ಸಂಘಟಿಸುವಲ್ಲಿ ರಾವುಲ್ ಪಾತ್ರ ದೊಡ್ಡದು. ರಾವುಲ್ ಐದು ದಶಕಗಳಿಂದ ಕ್ಯೂಬಾದ ರಾಷ್ಟ್ರಿಯ ಕೌನ್ಸಿಲ್ ನ ಸದಸ್ಯರಾಗಿದ್ದರು. ಅವರು ಫಿಡೆಲ್ ಕ್ಯಾಸ್ಟ್ರೊರ ತಮ್ಮ ಎಂಬುದು ಆಕಸ್ಮಿಕ. ಕ್ಯೂಬಾದ ಕ್ರಾಂತಿಕಾರಿ ಕಮ್ಯುನಿಸ್ಟ್ ಚಳುವಳಿಯ ಮುಂಚೂಣಿ ನಾಯಕತ್ವದಲ್ಲಿದ್ದ ರಾವುಲ್ ಅವರು ಸಾಮೂಹಿಕ ನಾಯಕತ್ವದ ಭಾಗವಾಗಿದ್ದವರು. ಈ ಸಾಮೂಹಿಕ ನಾಯಕತ್ವದ ಭಾಗವಾಗಿದ್ದ ಮಚಾಡೊ ಅವರನ್ನು ಉಪಾಧ್ಯಕ್ಷರಾಗಿ (ರಾವುಲ್ ರ ಹಿಂದಿನ ಸ್ಥಾನ) ಆರಿಸಲಾಗಿದೆ. ○

ಕಮ್ಯುನಿಸ್ಟ್ ಕ್ರಿಸೊಫಿಯಾಸ್ ಸೈಪ್ರಸ್ ಅಧ್ಯಕ್ಷರಾಗಿ ಆಯ್ಕೆ

ಸೈಪ್ರಸ್ ಗ್ರೀಸ್ ಮತ್ತು ತುರ್ಕಿ ನಡುವೆ ಇರುವ ಪುಟ್ಟ ಯುರೋಪಿಯನ್ ದ್ವೀಪ ದೇಶ. ಅಲ್ಲಿನ ಅಕೆಲ್ ಕಮುನಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿ ಡೆಮೆಟ್ರಿಸ್ ಕ್ರಿಸ್ಟೋಫಿಯಾಸ್ ಕಳೆದ ವಾರ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದರು. ಅವರು ಶೇ.53.4 ಮತಗಳಿಸಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಸೈಪ್ರಸ್ ಮತ್ತು ಯಾವುದೇ ಯುರೋಪಿಯನ್ ಒಕ್ಕೂಟದ ದೇಶ ಒಂದರಲ್ಲಿ ಕಮುನಿಸ್ಟ್ ಅಧ್ಯಕ್ಷರಾಗುವುದು ಇದೇ ಮೊದಲು. ಈಗಿನ ಅಧ್ಯಕ್ಷ ಪಾಪಾಡಪೊಲೊಸ್ ಮೊದಲ ಸುತ್ತಿನಲ್ಲೇ ಹಿಂದೆ ಬಿದ್ದಿದ್ದರು. ಎರಡನೇ ಸುತ್ತಿನಲ್ಲಿ ಎಡ ಮತ್ತು ಬಲಪಂಥಿಯ ಪಕ್ಷಗಳ ನಡುವೆ ಸ್ಪರ್ಧೆ ಏರ್ಪಟ್ಟು ಎಡ ಅಭ್ಯರ್ಥಿ ಜಯ ಗಳಿಸಿದ್ದಾರೆ. ಸೈಪ್ರಸ್ ಜನಾಂಗೀಯ ಸಮಸ್ಯೆ ಹಲವು ದಶಕಗ'ಳಿಂದ ನೆನೆಗುದಿಗೆ ಬಿದ್ದಿದ್ದು (ಅದರಲ್ಲೂ ತುರ್ಕಿ ನಿಯಂತ್ರಣದಲ್ಲಿರುವ ಭಾಗದ ಜತೆ ಪುನರೈಕ್ಯಗೊಳ್ಳುವ ವಿಷಯ), ಡೆಮೆಟ್ರಿಸ್ ಕ್ರಿಸ್ಟೋಫಿಯಾಸ್ ಅವರ ಅನುಭವ ಮತ್ತು ಮುತ್ಸದಿತನದಿಂದ ಪರಿಹಾರ ಸುಲಭವಾಗಬಹುದು ಎಂದು ನಿರೀಕ್ಷಿಸಲಾಗಿದೆ.



ಹುಡುಕಿಕೊಡು 'ಓ ಗೆಳೆಯ'

ಹುಡುಕಿ ಕೊಡು 'ಓ ಗೆಳೆಯ'
ಕಾವಿ-ಕಾಕಿ ಖಾದಿಗಳ
ನಡುವೆ ಸಮಾಜಿಕ ನ್ಯಾಯ
ಪ್ರೀತಿ-ಸಮಾನತೆಯ ಅಧ್ಯಾಯ :1:

ವಿಸ್ತಾರವಾದ ಈ ವಿಶ್ವದಲ್ಲಿ
'ವಿವಾದ' ವಿರದೇ
ಬದುಕ ಬಾಳಿಸುವ ಅಂತರಂಗದ
ಪ್ರಜ್ಞೆಯ.....! :2:

ನಿಸ್ಸಾರವೆಂದೆನಿಪ ಬಾಳ
ಬದುಕಿನಂಗಳದಿ
ಬಾಳ ರಸತುಂಬಿ ಅರಳಿಸುವ
ಪ್ರಭೆಯ......! :3:

ತನ್ನದಲ್ಲದ ವಸ್ತು-ವಿಷಯಗಳಿಗೆ
ಕೈ ಇಟ್ಟು ಸುಡದಿರುವ
ಜಾತಿ-ಪಂಥದ ನೆಪದಿ ದೊಂಬಿಮಾಡದ
ಹೃದಯ....! :4:

ಗಾಂಧಿ ಬುದ್ಧರ ನಾಡಿನಲಿ
ಕೃಷ್ಣ-ಕ್ರಿಸ್ತರ ಹೆಸರಿನಲ್ಲಿ
ರಾಮ-ರಹೀಮರ ನೆನಪಿನಲ್ಲಿ
ರಕ್ತಹರಿಸದೆ-ಬಲಿಯ ಬಯಸದ
ಶಾಂತಿ-ಸಹನೆಯ-ಬೆಲೆಯ
ದೇಶ ಪ್ರೇಮದ ಅಲೆಯ
ಜೊತೆಗೆ ಬೆರೆಯುವ ಕಲೆಯ :5:

ಧರ್ಮ ಮೀರಿದ ವಿಷಯ
ಜಾತಿ ಕೇಳದ ಮತಿಯ
ದೌಷ್ಟ್ಯ-ದಳ್ಳುರಿ ತರದ
ರೈತ-ಕೂಲಿಗಳ ಧ್ವನಿಯಾಗಿ ಬರುವ
ಬಾಳಬುತ್ತಿಯ ವಿಷ ಹಂಚದಿರುವ
ಆಷಾಢಭೂತಿಗಳಲ್ಲವೆಂದೆನಿಸುವ
ಪ್ರಾಮಾಣಿಕ ಪ್ರಜೆಯ

– ಮೇಘ

ವೈದ್ಯ ವಿದ್ಯಾರ್ಥಿಗಳ ಗ್ರಾಮೀಣ ಸೇವೆ

ಗಮನಿಸಿರದ ಇನ್ನೊಂದು ಮುಖ

'ಹಳ್ಳಿಗಳಿಗೆ ವೈದ್ಯರು ಬೇಡವೇ' ಎಂಬ ತಲೆ ಬರಹದ ಒಂದು ಬರಹ ಪತ್ರಿಕೆಯ ಡಿಸೆಂಬರ್ 30,2007ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಆ ಬರವಣಿಗೆಯೊಳಗೆ ಎಐಡಿಎಸ್‌ಓ ಎಂಬ ಸಂಘಟನೆಯ ನಿಲುವನ್ನು ಯಥಾವತ್ತಾಗಿ ಗ್ರಹಿಸಿಲ್ಲ ಮತ್ತು ಬಿಂಬಿಸಿಲ್ಲ ಎಂದು ಸ್ಪಷ್ಟೀಕರಣ ನೀಡಿರುವ ಪತ್ರವೊಂದು ಪತ್ರಿಕೆಗೆ ತಡವಾಗಿ ತಲುಪಿದೆ. ಪತ್ರದ ಸಾರ ಏನೆಂದರೆ ಎಐಡಿಎಸ್‌ಓ ಸಂಘಟನೆಯು ಹಳ್ಳಿಗಳಿಗೆ ವೈದ್ಯರನ್ನು ನೇಮಿಸಲು ವಿರೋಧವಾಗಿಲ್ಲ. ಕೇಂದ್ರ ಸರ್ಕಾರ ಎಂ.ಬಿ.ಬಿ.ಎಸ್. ಕೋರ್ಸ್‌ನ್ನು 5 1/2 ವರ್ಷದಿಂದ 6 1/2 ವರ್ಷಕ್ಕೆ ಏರಿಸಿ, ಹೆಚ್ಚಿಸಿದ ಒಂದು ವರ್ಷದ ಅವಧಿಯನ್ನು ಕಡ್ಡಾಯ ಗ್ರಾಮೀಣ ಸೇವೆ ಎಂದು ತೀರ್ಮಾನಿಸಿರುವುದು ಹಳ್ಳಿಗಳಿಗೆ ವೈದ್ಯರನ್ನು ಕೊಡಬೇಕು ಎಂಬ ಕಾರಣಕ್ಕಾಗಿ ಅಲ್ಲ. ಜಾಗತೀಕರಣ ನೀತಿಗಳ ಭಾಗವಾಗಿ ಆರೋಗ್ಯಕ್ಕೆ ಹಣ ಕಡಿತ ಮಾಡಿ, ಖಾಯಂ ವೈದ್ಯರನ್ನು ಕೊಡುವುದಕ್ಕೆ ಬದಲಿಗೆ ವಿದ್ಯಾರ್ಥಿಗಳ ಗ್ರಾಮೀಣ ಸೇವೆಯನ್ನು ಬಳಸುತ್ತಿದೆ.

ನಿಜ, ಈಗಿನ ಸರ್ಕಾರಗಳು ಜಾಗತೀಕರಣದ ಭಾಗವಾಗಿ ಆರೋಗ್ಯ ಕ್ಷೇತ್ರಕ್ಕೆ ಹಣ ಕಡಿತ ಮಾಡಿವೆ. ಅದು ಸುಳ್ಳೇನಲ್ಲ. ಅದರ ಭಾಗವಾಗಿ ನೇಮಕಾತಿ ನಿರ್ಬಂಧವೂ ಇದೆ. ಇನ್ನೊಂದೆಡೆ ನೀಡುವ ಸಂಬಳ ಮತ್ತು ಸವಲತ್ತು ಕಡಿಮೆ ಎಂದು ವೈದ್ಯರು ಸರ್ಕಾರಿ ನೌಕರರಾಗಿ ಸೇರುವುದು ವಿರಳ. ಆದರೆ ಇಲ್ಲಿನ ಸಮಸ್ಯೆಗೆ ಮತ್ತೊಂದು ಮುಖವಿದೆ. ಹಲವು ಬಾರಿ ಸರ್ಕಾರಗಳು ಖಾಯಂ ವೈದ್ಯರನ್ನು ಹಳ್ಳಿಗಳಿಗೆ ನೇಮಿಸಿದಾಗಲೂ ಸಹ ವೈದ್ಯರು ಅಲ್ಲಿಗೆ ತೆರಳದೇ ಹೇಗಾದರೂ ತಪ್ಪಿಸಿಕೊಂಡು ಬೇರೆಡೆಗೆ ವರ್ಗಾಯಿಸಿಕೊಳ್ಳುವುದು ಇತ್ಯಾದಿ ಇದ್ದೇ ಇದೆ.ಆದ್ದರಿಂದ ನೇಮಕಾತಿಗಾಗಿ ಹೋರಾಟವೂ ಜೊತೆಯಲ್ಲಿ ಸಾಗಬೇಕು.

ಸ್ಪಷ್ಟೀಕರಣದಲ್ಲಿ ಅಪ್ಪಿತಪ್ಪಿ ಸಹ ಎಲ್ಲಿಯೂ ವೈದ್ಯರು ಹಳ್ಳಿಗೆ ಹೋಗದ ಬಗ್ಗೆ ಪ್ರಸ್ತಾಪಿಸಿಲ್ಲ. ಹಳ್ಳಿಗಳಿಗೆ ಖಾಯಂ ವೈದ್ಯರನ್ನು ನೀಡುವುದು, ವೈದ್ಯಕೀಯ ವಿದ್ಯಾರ್ಥಿಗಳ ಕಡ್ಡಾಯ ಗ್ರಾಮೀಣ ಸೇವೆ ಇವೆರಡೂ ಒಂದಕ್ಕೊಂದು ವಿರುದ್ಧ ಎಂದೇ ಭಾವಿಸಬೇಕಿಲ್ಲ. ಖಾಯಂ ವೈದ್ಯರಿಗಾಗಿ ಒತ್ತಾಯಿಸುತ್ತಲೇ 'ಕಡ್ಡಾಯ ಗ್ರಾಮೀಣ ಸೇವೆ' ಯನ್ನು ಸ್ವಾಗತಿಸಲು ಹಲವು ಕಾರಣಗಳಿವೆ. ವೈದ್ಯಕೀಯ ಸೇವೆಗೆ ಅಷ್ಟು ವಿಶಾಲವಾದ ಅವಕಾಶ ಹಳ್ಳಿಗಳಲ್ಲಿವೆ. ಇಂದಿನ ನಮ್ಮ ವೈದ್ಯಕೀಯ ಶಿಕ್ಷಣ ಪದ್ಧತಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ತೀರಾ ಅಗತ್ಯವಾಗಿರುವ 'ಪ್ರಾಥಮಿಕ ಆರೋಗ್ಯ ಕಾಳಜಿ' ಯ ಕುರಿತ ತರಬೇತಿಯೂ ಇಲ್ಲ ದೃಷ್ಟಿಕೋನವೂ ಇಲ್ಲ. ಕಡ್ಡಾಯಗ್ರಾಮೀಣ ಸೇವೆಯ ಜೊತೆಗೆ ಇದೂ ಸಹ ಆಗಬೇಕು ○

ಹುಡುಕುವುದೆಲ್ಲಿ?

ತಿಳಿ ನೀಲಿಯಾಗಸದಿ
ಕರಿಮುಗಿಲ ಹಿಂದು
'ಜೋಕುಮಾರನೆ ಚಂದಿರ' ಮರೆತೆಯಲ್ಲೋ
ಬೆಳ್ದಿಂಬೆಳಕಿನ ನಗುವ!

ಉಂಡು ಮಲಗುವ ಮಂಚ
ಅವ್ವನ ಹರಿದ ಸೀರೆಯ ಕೌದಿ
ನಿನ್ನ ಅಪ್ಪುಗೆಯಿರದೆ
ಚಂದಿರ ಮೌನ ತಾಳಿವೆಯಲ್ಲೋ ತಣ್ಣಗೆ!
ಹೆಬ್ಬಾವಿನೋಲು ನರಳುವ
ಹಾದಿಗೆ ಸಾಲು ದೀಪಗಳು
ಕತ್ತಲೆಯೊಂದಿಗೆ ಕುಸ್ತಿ ಗೆದ್ದವನಾರು?
ಚಂದಿರ ನಿನ್ನ ಬೆಳದಿಂಗಳು ಕಿಲುಬು ಕಾಸೋ!

ಟಿ.ವಿ.ಗಳು ಕತೆ
ಹೇಳುವ ಗುಡಿಸಲಿನಲ್ಲಿ ಮಿಣುಕು
ನಕ್ಷತ್ರಗಳು ಇಣುಕಿ ನೋಡುವುದಿಲ್ಲ
ಬೆಳ್ಳಿ ಬೆಟ್ಟದ ಚಂದಿರ ಬೆಳ್ಳಗಾದೆಯಲ್ಲೋ!

ಕನಸುಗಳಿಲ್ಲದ ಇರುಳ
ಹೆಣ್ಣಿಗೆ ಹಗಲ ನಾಚಿಸುವ
ಬೆಳಕಿನ ಸಿಂಗಾರ 'ಚಂದಿರ' ಎಲ್ಲೋ
ಕೇಳಿದ ಹೆಸರು. ಯಾರಿವನು?

ಕಂಕುಳ ಕಂದನಿಗೆ
ಉಣ್ಣಿಸಬೇಕು ತೂಕಡಿಸುವ ಕಣ್ಣಿಗೆ
ಕತೆ ಹೇಳಬೇಕು ಎಲ್ಲಿ ಹೋದೆಯೋ,
ಮಹಡಿ ಮನೆಗಳ ನಡುವೆ ಚಂದಮಾಮಾ???

–ವಿ.ಹರಿನಾಥಬಾಬು
ಸಿರುಗುಪ

...ಅಮೆರಿಕದ ಭಯೋತ್ಪಾದಕ ಯುದ್ಧ

ಪುಟ 14 ರಿಂದ

ಲೆಬನಾನ್‌ನಲ್ಲಿ ಇಸ್ರೇಲ್ ಆಕ್ರಮಣಕ್ಕೆ ಅಮೆರಿಕಾ ಬೆಂಬಲ ನೀಡಿತು ಮತ್ತು ಅದು ಆ ದೇಶದೊಳಗಿನ ಪಾಶ್ಚಾತ್ಯ-ಪರ ಶಕ್ತಿಗಳನ್ನು ಎತ್ತಿ ಕಟ್ಟಲು ಯತ್ನಿಸುತ್ತಿದೆ.

ನಾಟೊ ವಿಸ್ತರಣೆ ಮತ್ತು ಭಯೋತ್ಪಾದನೆ

ಅಮೆರಿಕ ತನ್ನ ಮಿಲಿಟರಿ ಕೂಟ ನಾಟೊವನ್ನು ಎಲ್ಲ ಪೂರ್ವ ಯುರೋಪಿನ ದೇಶಗಳನ್ನು ಒಳಗೊಳ್ಳುವಂತೆ ವಿಸ್ತರಿಸಿದೆ. ಹಿಂದಿನ ಸೋವಿಯೆಟ್ ಗಣರಾಜ್ಯಗಳಾದ ಯುಕ್ರೇನ್ ಮತ್ತು ಜಾರ್ಜಿಯಾವನ್ನು ನಾಟೊದ ಒಳಗೆ ತರುವ ಗುರಿ ಅಮೆರಿಕಾಕ್ಕೆ ಇದೆ. ಅದು ಇನ್ನೊಂದು ಶಸ್ತ್ರಾಸ್ತ್ರ ಸ್ಪರ್ಧೆ ಹುಟ್ಟಿಸಬಲ್ಲ ಮತ್ತು ಇಡೀ ಜಗತ್ತೇ ಹೊಂದಿರುವ ಕ್ಷಿಪಣಿ-ನಿರೋಧಕ ರಕ್ಷಣಾ ವ್ಯವಸ್ಥೆಯನ್ನು ಅಣಿಗೊಳಿಸುತ್ತಿದೆ ಹಾಗೂ ಪೋಲೆಂಡ್ ಮತ್ತು ಜೆಕ್‌ನಲ್ಲಿ ಕ್ಷಿಪಣಿಗಳನ್ನು ನೆಲೆಗೊಳಿಸುವ ಯೋಜನೆಗಳನ್ನು ಹಾಕಿದೆ. ಇದನ್ನು ರಷ್ಯ ತನ್ನ ಭದ್ರತೆಗೆ ಒಂದು ಬೆದರಿಕೆಯ ಒಡ್ಡುವ ಪ್ರಯತ್ನವಾಗಿ ಕಾಣುತ್ತಿದೆ. ಅಫಘಾನಿಸ್ತಾನದಲ್ಲಿನ ಕಾರ್ಯಾಚರಣೆಯೊಂದಿಗೆ ನಾಟೊ ವಿಶ್ವಾವನ್ನು ವ್ಯಾಪಿಸಿದೆ ಮತ್ತು ಅದು ಅಮೆರಿಕಾದ ಪ್ರೋತ್ಸಾಹದೊಂದಿಗೆ ವಿಶ್ವದಲ್ಲಿ ತನ್ನ ಪಾತ್ರವನ್ನು ವಿಸ್ತರಿಸಿಕೊಳ್ಳಲು ಯತ್ನ ನಡೆಸುತ್ತಿದೆ.

'ಅಮೆರಿಕಾದ 'ಭಯೋತ್ಪಾದನೆಯ ಮೇಲೆ ಯುದ್ಧ' ಭಾರೀ ಬಲಿ ತೆಗೆದುಕೊಂಡಿದೆ. ಕಾನೂನುಬಾಹಿರ ಗ್ವಾಂಟಾನಮೊ ಯಾತನಾ ಶಿಬಿರ, ಇರಾಕಿನ ಅಬು ಘ್ರೈಬ್ ಸೆರೆಮನೆಯಲ್ಲಿ ನಾಚಿಕೆಗೇಡು ಚಿತ್ರಹಿಂಸೆಗಳು, ಯುರೋಪಿನ ವಿವಿಧ ಭಾಗಗಳಿಂದ ತಥಾಕಥಿತ ಶಂಕಿತ ಭಯೋತ್ಪಾದಕರ ಅಪಹರಣಗಳು ಮತ್ತು ಬಂಧನ ಮತ್ತು ಚಿತ್ರಹಿಂಸೆಗಾಗಿ ಸಿಐಎ ಯ ಗುಪ್ತ ಸೆರೆಮನೆಗಳಿಗೆ ಕಾನೂನುಬಾಹಿರ ರವಾನೆ, ಅಮೆರಿಕಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳಲ್ಲಿ ಭಯೋತ್ಪಾದನೆಯ ವಿರುದ್ಧ ಹೋರಾಡಲು ನಾಗರಿಕ ಸ್ವಾತಂತ್ರ್ಯಗಳನ್ನು ಉಲ್ಲಂಘಿಸುವ ಹೆಚ್ಚೆಚ್ಚು ಕರಾಳ ಶಾಸನಗಳು-ಇವೆಲ್ಲಾ 'ಭಯೋತ್ಪಾದನೆಯ ಮೇಲೆ ಯುದ್ಧ'ದ ಪಾಶವೀ ಮತ್ತು ಅಸ್ವೀಕಾರಾರ್ಹ ಮುಖವನ್ನು ತೋರಿಸುತ್ತವೆ. ಅಮೆರಿಕಾದ ಪ್ರಾಬಲ್ಯವನ್ನು ಅಥವ ಅದರ ಆದೇಶಗಳನ್ನು ಒಪ್ಪಲು ನಿರಾಕರಿಸುವ ಯಾವುದೇ ಸರಕಾರ ಮತ್ತು ದೇಶದ ಮೇಲೆ ಭಯೋತ್ಪಾದನೆಯ ಮೇಲೆ ಯುದ್ಧದ ಹೆಸರಲ್ಲಿ ಗುರಿಯಿಡಲಾಗುತ್ತದೆ. ಕ್ಯೂಬಾ ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಆಪಾದಿಸಿ ಬುಶ್ ಆಡಳಿತ, ಅದರ ವಿರುದ್ಧ ಹೊಸ ದಿಗ್ಬಂಧನಗಳನ್ನು ಹೇರಿತು ಮತ್ತು ಕ್ಯೂಬಾದೊಡನೆ ಸಂಬಂಧಗಳನ್ನು ಇಟ್ಟುಕೊಂಡಿರುವ ಕ್ಯೂಬಾ ಮೂಲದ ವ್ಯಕ್ತಿಗಳ ಮೇಲೆ ತೀವ್ರ ದಂಡಗಳನ್ನು ಹಾಕಿತು. ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಇರಾನಿನ ಮೇಲೆ ಎರಡು ಸುತ್ತುಗಳ ದಿಗ್ಬಂಧನಗಳನ್ನು ಹಾಕಿದೆ. ಅಮೆರಿಕಾ ಇದು ಬಹಳ ಮೆದು ಕ್ರಮಗಳು ಎಂದು ಪರಿಗಣಿಸಿ ಮತ್ತಷ್ಟು ಏಕಪಕ್ಷೀಯ ದಿಗ್ಬಂಧನಗಳನ್ನು ಹಾಕಿದೆ. ಹಮಸ್ ಒಂದು ಭಯೋತ್ಪಾದಕ ಸಂಘಟನೆ ಎಂದು ಸಾರಿ ಅಮೆರಿಕಾ ಒಂದು ಆರ್ಥಿಕ ನಿರ್ಬಂಧದಲ್ಲಿ ಇಸ್ರೇಲ್ ಜತೆಗೂಡಿತು ಮತ್ತು ಕಾನೂನುಬದ್ಧ ಹಣಕಾಸು ವ್ಯವಹಾರಗಳನ್ನು ತಡೆಹಿಡಿಯಿತು. ಇದು ಗಾಜಾ ಪಟ್ಟಿಯಲ್ಲಿ ಒಂದು ಮಾನವೀಯ ಬಿಕ್ಕಟ್ಟನ್ನು ಸೃಷ್ಟಿಸಿತು. ಪ್ರಜಾಪ್ರಭುತ್ವವನ್ನು ಹರಡಿಸುವ ಹೆಸರಿನಲ್ಲಿ ಯುಕ್ರೇನ್ ಮತ್ತು ಜಾರ್ಜಿಯಾದಲ್ಲಿ "ಬಣ್ಣದ ಕ್ರಾಂತಿ"ಗಳನ್ನು ಅಮೆರಿಕನ್ ಹಣದೊಂದಿಗೆ



ಇರಾಕ್ ಅಧ್ಯಕ್ಷನ ಮೇಲೆ ದಾಳಿ ಅಮೆರಿಕದ ಜಾಗತಿಕ 'ಜಾಗತಿಕ ಭಯೋತ್ಪಾದನೆಯ ಸಾಕ್ಷಿ

ಪ್ರಚೋದಿಸಲಾಯಿತು. 'ಬಣ್ಣದ ಕ್ರಾಂತಿ'ಯೆಂದರೆ ಅಮೆರಿಕಕ್ಕೆ ಬೇಡವಾದ ವ್ಯಕ್ತಿ ಅಥವಾ ರಾಜಕೀಯ ಶಕ್ತಿ ಚುನಾವಣೆ ಗೆದ್ದರೂ, ಆ ಸರ್ಕಾರವನ್ನೂ ಇಳಿಸಿ ಬೇಕಾದ ವ್ಯಕಿಯನ್ನು ಅಧಿಕಾರಕ್ಕೆ ತರುವುದು. ಅಫಘಾನಿಸ್ತಾನದಲ್ಲಿ 40,000 ನಾಟೊ ಮತ್ತು ಅಮೆರಿಕನ್ ಪಡೆಗಳಿವೆ. ಆದರೂ ಅಲ್ಲಿ ಶಾಂತಿ ನೆಲೆಸಿಲ್ಲ. ತಾಲಿಬಾನ್ ದಂಗೆಗಳು ಮತ್ತೆ ಭರದಿಂದ ಆರಂಭವಾಗಿರುವುದನ್ನು ಎದುರಿಸಬೇಕಾಗಿ ಬಂದಿದೆ. ತಾಲಿಬಾನ್ ಹತ್ತಿಕ್ಕುವ ಹೆಸರಲ್ಲಿ ವಿಮಾನ ಧಾಳಿಗಳು ಮತ್ತು ಶೆಲ್ ಧಾಳಿಗಳ ಮೂಲಕ ನೂರಾರು ನಾಗರಿಕರನ್ನು ಸಾಯಿಸುತ್ತಿದ್ದಾರೆ.

ಆದರೆ ಈ ಭೀಕರ ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಕಾನೂನುಬಾಹಿರ ಮಿಲಿಟರಿ ಮಧ್ಯಪ್ರವೇಶಗಳಿಗೆ ಇನ್ನೊಂದು ಮುಖವಿದೆ. ಕಳೆದ ಮೂರು ವರ್ಷಗಳಲ್ಲಿ ಸಾಮ್ರಾಜ್ಯಶಾಹಿ ಕಾರ್ಯಾಚರಣೆಗಳು ಹೆಚ್ಚೆಚ್ಚು ಕಷ್ಟಗಳಿಗೀಡಾಗಿವೆ. ಅಮೆರಿಕನ್ ಮಿಲಿಟರಿ ಶಕ್ತಿಯ ಮಿತಿಗಳು ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ಬಿರುಸಾಗಿ ಕಾಣಬಂದಿವೆ. ಇರಾಕಿನಲ್ಲಿ ಇನ್ನೂ 30,000 ಅಮೆರಿಕನ್ ಪಡೆಗಳನ್ನು ತಂದು ನಿಲ್ಲಿಸಿದ ಮೇಲೂ ಪ್ರತಿರೋಧವನ್ನು ದಮನ ಮಾಡುವ ಪ್ರಯತ್ನಗಳೆಲ್ಲವೂ ವಿಫಲವಾದವು. ಅದರ ಪ್ರಧಾನ ಮಿತ್ರ ಬ್ರಿಟನ್ ತನ್ನ ಪಡೆಗಳನ್ನು ಹಿಂದಕ್ಕೆ ಪಡೆಯಲಾರಂಭಿಸಿದೆ. ಟೋನಿ ಬ್ಲೇರ್ ಬುಶ್‌ಗೆ ಕಟ್ಟಾ ಬೆಂಬಲ ನೀಡಿದ್ದಕ್ಕೆ ಒಂದು ರಾಜಕೀಯ ಬೆಲೆ ತೆರಬೇಕಾಗಿ ಬಂದಿದೆ ಹಾಗೂ ಪ್ರಧಾನ ಮಂತ್ರಿ ಸ್ಥಾನವನ್ನು ಬಿಡಬೇಕಾಗಿ ಬಂದಿದೆ. ಅಮೆರಿಕಾದ ಯುದ್ಧವನ್ನು ಬೆಂಬಲಿಸಿದ ಇತರ ಮುಖಂಡರು ಮತ್ತು ಸರಕಾರಗಳು ಸ್ಪೇನ್, ಇಟಲಿ, ಜಪಾನ್ ಮತ್ತು ಆಸ್ಟ್ರೇಲಿಯಾದಲ್ಲಿ ಚುನಾವಣೆಗಳಲ್ಲಿ ಸೋತಿವೆ. ಇರಾನನ್ನು ಏಕಾಂಗಿಯಾಗಿಸಿ ಅದರ ಮೇಲೆ ಧಾಳಿ ನಡೆಸುವ ಪ್ರಯತ್ನಗಳಿಗೆ ಪ್ರತಿರೋಧ ಮತ್ತು ಅಸಹಕಾರ ರಷ್ಯಾ ಮತ್ತು ಚೀನಾದಿಂದ ಮಾತ್ರವಲ್ಲ, ಅದರ ಹಲವು ಯುರೋಪಿಯನ್ ಮಿತ್ರರಿಂದಲೂ ಬರುತ್ತಿದೆ. ○



ಆಕ್ಷನ್ ಚಿತ್ರಗಳಿಗೆ ಹೆಸರುವಾಸಿಯಾಗಿದ್ದ ಬಾಲಿವುಡ್‌ನಲ್ಲಿ ಕೆಲವೊಮ್ಮೆ ಉತ್ತಮ ಚಿತ್ರಗಳೂ ಬರುತ್ತವೆ. ಇಂತಹ ಚಿತ್ರಗಳ ಸಾಲಿಗೆ ಇತ್ತೀಚೆಗೆ ತೆರೆ ಕಂಡ "ಹಲ್ಲಾ ಬೋಲ್" ಚಿತ್ರ ಕೂಡ ಸೇರುತ್ತದೆ ಎಂದು ಹೇಳಬಹುದು. ಚೈನಾ ಗೇಟ್, ಲಜ್ಜಾ, ದಿ ಲೆಜೆಂಡ್ ಆಫ್ ಭಗತ್ ಸಿಂಗ್ ಮುಂತಾದ ಉತ್ತಮ ಚಿತ್ರಗಳನ್ನು ನೀಡಿದ ರಾಜ್ ಕುಮಾರ್ ಸಂತೋಷಿ ಅವರ ನಿರ್ದೇಶನದಲ್ಲಿ ಮೂಡಿ ಬಂದ ಈ ಚಿತ್ರ ಹಲವು ಕಾರಣಗಳಿಗೆ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ.


'ಹಲ್ಲಾಬೋಲ್' ಒಂದು ವಿಶಿಷ್ಟ ಪ್ರಯತ್ನ ಸೂಪರ್‌ಸ್ಟಾರ್‌ನ ಹೋರಾಟದ ಕಥೆ

ಚಿತ್ರದ ನಾಯಕ ಅಶ್ಫಾಕ್(ಅಜಯ್ ದೇವಗನ್)ಗೆ ಸಿನಿಮಾದಲ್ಲಿ ಹೀರೋ ಆಗಬೇಕೆಂಬ ಬಯಕೆ. ಸಾಕಷ್ಟು ಹೋರಾಟ ನಡೆಸುವ ಅಶ್ಫಾಕ್, ರಂಗಕರ್ಮಿ ಸಿದ್ದು(ಪಂಕಜ್ ಕಪೂರ್) ಅವರನ್ನು ಭೇಟಿಯಾಗುತ್ತಾನೆ. ಡಕಾಯಿತನಾಗಿದ್ದ ಸಿದ್ದು ಕ್ರಾಂತಿಕಾರಿಯಾಗಿ ಬದಲಾಗಿರುತ್ತಾನೆ. ಅಶ್ಫಾಕ್‌ನನ್ನು ತನ್ನ ರಂಗ ತಂಡಕ್ಕೆ ಸೇರಿಸಿಕೊಳ್ಳುವ ಸಿದ್ದು, ಆತನ ಕನಸಿಗೆ ಏಣಿಯಾಗುತ್ತಾನೆ. ದಿನಗಳು ಉರುಳಿದಂತೆ ಚಿತ್ರರಂಗದಲ್ಲಿ ಮಿಂಚುವ ಅಶ್ಫಾಕ್ ತನ್ನ ಹೆಸರನ್ನು ಸಮೀರ್ ಖಾನ್ ಎಂದು ಬದಲಾಯಿಸುತ್ತಾನೆ. ಆದರೆ, ಕನಸಿಗೆ ಏಣಿಯಾದ ತನ್ನ ಗುರು ಸಿದ್ದುವನ್ನು ಸಮೀರ್ ಮರೆಯುತ್ತಾನೆ. ಮಾತ್ರವಲ್ಲ, ಭ್ರಷ್ಟಾಚಾರ ಹಾಗೂ ಅಕ್ರಮಗಳಲ್ಲಿ ತೊಡಗುತ್ತಾನೆ. ಇದು ಪತ್ನಿ ಜೊತೆಗಿನ ಸಂಬಂಧವನ್ನೂ ಕೆಡಿಸುತ್ತದೆ.

ಮೋಜಿನ ರಾತ್ರಿ ಪಾರ್ಟಿಯೊಂದರಲ್ಲಿ ಗಣ್ಯರ ಮಕ್ಕಳು ನಡೆಸುವ ಹುಡುಗಿಯ ಕೊಲೆ ಸಮೀರ್‌ನ ಜೀವನವನ್ನೇ ಬದಲಾಯಿಸುತ್ತದೆ. ಸ್ವತಃ ಆರೋಪಿಯ ತಂದೆ ಮಂತ್ರಿ, ಮಠಾಧಿಪತಿ ಹಾಗೂ ಒಬ್ಬ ಉದ್ಯಮಿ ಈ ಘಟನೆಯನ್ನು ನೋಡಿದರೂ ಅನ್ಯಾಯದ ಪರ ನಿಲ್ಲುತ್ತಾರೆ. ಆಗ, ಭ್ರಷ್ಟಾಚಾರ ಹಾಗೂ ಮಾನವೀಯತೆ ಎಂಬ ಕವಲು ದಾರಿಯಲ್ಲಿ ನಿಲ್ಲುವ ನಾಯಕ, ಮಾನವೀಯತೆಯ ದಾರಿಯನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ನ್ಯಾಯಕ್ಕಾಗಿ ಅವಿರತ ಹೋರಾಟ ನಡೆಸುತ್ತಾನೆ. ಈ ಹೋರಾಟದಲ್ಲಿ ಸಾಕಷ್ಟು ಅಡೆ ತಡೆ ಇದ್ದರೂ ಎದೆಗುಂದದ ನಾಯಕ ಅಂತಿಮವಾಗಿ ಜಯ ಪಡೆಯುತ್ತಾನೆ.

ಸೂಪರ್ ಕ್ಲೈಮ್ಯಾಕ್ಸ್

ಬೀದಿ ನಾಟಕದ ಮಹತ್ವವನ್ನು ಪರಿಣಾಮಕಾರಿಯಾಗಿ ತೋರಿಸಿಕೊಡುವಲ್ಲಿ ಈ ಚಿತ್ರ ಯಶಸ್ವಿಯಾಗಿದೆ. ಸಚಿವರ ಮಕ್ಕಳು ಮಾಡುವ ಕೊಲೆಯನ್ನು ಕಣ್ಣಾರೆ ಕಾಣುವ ನಾಯಕ, ಆರೋಪಿಗಳ ವಿರುದ್ಧ ಹೋರಾಟ ನಡೆಸುತ್ತಾನೆ. ಆಗ ಆತನ ಜನಪ್ರಿಯತೆಯನ್ನು ಕುಗ್ಗಿಸಲು ಮಂತ್ರಿ, ಉದ್ಯಮಿ ಹಾಗೂ ದುಷ್ಟಕೂಟ ಇನ್ನಿಲ್ಲದ ತಂತ್ರ ನಡೆಸುತ್ತದೆ. ಅದನ್ನು ಎದುರಿಸುವಲ್ಲಿ ನಾಯಕ ದಯನೀಯವಾಗಿ ಸೋಲುತ್ತಾನೆ. ಆಗ ಸಿದ್ದು ಮತ್ತೆ ಕೈ ಹಿಡಿಯುತ್ತಾನೆ. ಬೀದಿ ನಾಟಕ ಎಂಬ ಮಾಧ್ಯಮವನ್ನು ಬಳಸುವ ಸಿದ್ದು ಹಾಗೂ ಸಮೀರ್, ದುಷ್ಟಕೂಟವನ್ನು ಗೆಲ್ಲುತ್ತಾರೆ.



ಒಟ್ಟು ಕಥೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವಲ್ಲಿ ನಿರ್ದೇಶಕ ರಾಜ್ ಕುಮಾರ್ ಸಂತೋಷಿ ಯಶಸ್ವಿಯಾಗಿದ್ದಾರೆ. ಅಜಯ್ ದೇವಗನ್ ಹಾಗೂ ಪಂಕಜ್ ಕಪೂರ್ ಅಭಿನಯ ಕಥೆಗೆ ಪೂರಕವಾಗಿದೆ. ಸಂತೋಷಿಗೆ ಸಾಕಷ್ಟು ಹೆಸರು ತಂದುಕೊಟ್ಟ 'ದಾಮಿನಿ' ಚಿತ್ರವನ್ನು ಕೆಲವೊಮ್ಮೆ ಹಲ್ಲಾ ಬೋಲ್ ಹೋಲುವಂತಿದ್ದರೂ, ವಿಭಿನ್ನ ನಿರೂಪಣೆ ಈ ಚಿತ್ರದ ಪ್ಲಸ್ ಪಾಯಿಂಟ್.

ಕೆಲವೊಮ್ಮೆ ಚಿತ್ರದ ಸನ್ನಿವೇಶಗಳು, ಪ್ರಸಕ್ತ ಚಿತ್ರರಂಗದ ಹುಳುಕನ್ನು ತೋರಿಸುತ್ತದೆ. ಸಮೀರ್ ಪತ್ನಿಯಾಗಿ ವಿದ್ಯಾ ಬಾಲನ್ ಉತ್ತಮ ಅಭಿನಯ ನೀಡಿದ್ದಾರೆ.

ಎಲ್ಲದಕ್ಕೂ ಮಿಗಿಲಾಗಿ ಒಂದು ಪ್ರಬಲ ಸಂದೇಶ ನೀಡುವಲ್ಲಿ "ಹಲ್ಲಾ ಬೋಲ್" ಯಶಸ್ವಿಯಾಗಿದೆ.

ಕವನ

ನಮ್ಮೊಳಗಿನಂತರಂಗ : ನಮ್ಮ ಅಕ್ಷರ !



ಮುತ್ತುತ್ತಿರುವ ಕತ್ತಲನ್ನು ಮರೆತು
ಬರೀ ಚಂದಿರನ ಅಂದ ನೋಡಲು ಸಾಧ್ಯವೇ?

ಹೂ ತಾರೆ ಚಂದ್ರರ ಮೇಲೆ
ಕವನ ಕಟ್ಟಲೇಬಾರದು ಎಂದು
ನಾನೇನು ಪಣ ತೊಟ್ಟವನಲ್ಲ
ನಿಜ, ಹೂ ತಾರೆ ಚಂದ್ರರ ಮೇಲೆ
ಬರಿಯಬಾರದು ಎಂದು
ಯಾರೂ ಪತ್ವಾ ಹೊರಡಿಸಿಲ್ಲ!
ಘಮ, ಘಮದ ಹೂ ಮೂಸಿ
ವಾಸನಿ ಹೀರಿ
ಫಳ ಫಳ ಹೊಳೆಯುವ
ತಾರೆ ಚಂದ್ರರ ನೋಡಿ
ಮೈಮರೆತು ಧ್ಯಾನಸ್ಥನಾಗಿ
ಪದ್ಯ ಬರಿಯೋಣವೆಂದರೆ
ನಿಪ್ಪಸಗಿ ಬಿದ್ದ ಹೊಟ್ಟೆ
ಹೂವ ಮೂಸಲೊಲ್ಲದು
ತುಳಿಸಿಕೊಂಡ ಕಾಲ ಕೆಳಗಿನ ಜೀವಕೆ
ತಾರೆ, ಚಂದ್ರರ ನೋಡಲಾಗದು
ಕಂಚಿ ಅಂಗಳದ ಕೊಳ್ಳಿದೆವ್ವ
ಹಚ್ಚಿದ ಕೊಳ್ಳಿಗಾಹುತಿಯಾದ ಎದೆ
ಹಕ್ಕಿಗಳ ಹಾಡ ಕೇಳಲೊಲ್ಲದು
ಹೆಣದ ಮೆರವಣಿಗೆ ಹೊರಟ
ಸೋತ ಜೀವದ ಕಣ್ಣು
ಗಿಡದ ಚಂದವ ನೋಡಲು ತೆರೆಯಲೊಲ್ಲದು!
ಬೆನ್ನಿಗಂಟಿದ ಹೊಟ್ಟೆಯ ಹಸಿವು
ಬೊಗಸೆ ತುಂಬಿದ ಕಣ್ಣೀರು
ಸಂಕಟಗಳ ಸರಮಾಲೆಯ ಎದೆಯಂಗಳದ
ಜನಗಳು ಎದುರಿಗಿರುವಾಗ
ಹೂ ತಾರೆ ಚಂದ್ರರು ಕವನವಾಗಲೊಲ್ಲರು
ನನ್ನ ಖಾಲಿ ಹಾಳೆಯಲ್ಲಿ!
ಸದ್ಯದ ಸ್ಥಿತಿ ಹೀಗಿರುವಾಗ
ನೀವು ಬರೀ
ಹೂ ತಾರೆ ಚಂದ್ರರ ಕುರಿತು
ಕವನ ಬರೆಯುವೆ ಎನ್ನುವಿರಾದರೆ
ನಾನೇಕೆ ಬೇಡವೆನ್ನಲಿ?
ಆದರಿಷ್ಟೇ
ತೆರೆದಿಡುತ್ತವೆ ನಮ್ಮ ಅಕ್ಷರ
ನಾವೇನಾಗಿದ್ದೇವೆ ಅನ್ನುವುದನ್ನು!

● ಬಸೂ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH